# ಸಂಕಲನ

೩ನೇ ವರ್ಷ ೧೪ ನವಂಬರ್ ೨೦೦೪

೧೮

ಸಂಪಾದಕರು
ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

## ಸಂಕಲನದ ಚಂದಾ ವಿವರ

೧. ೨೦೦೫ ರಿಂದ ಒಟ್ಟು ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)

೨. ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

೩. ೨೦೦೪ ಡಿಸೆಂಬರ್ ೨೫ ರ ಒಳಗಾಗಿ ಚಂದಾ ಕಳಿಸುವವರಿಗೆ ಮಾತ್ರ ಸಂಕಲನದ ಸಂಚಿಕೆಗಳನ್ನು ಕಳಿಸಲಾಗುವುದು.

೪. ನಕದು / ಮನಿಆರ್ಡರ್ / ಡಿ. ಡಿ. / ಚೆಕ್ ಮೂಲಕ ಚಂದಾಹಣ ಕಳಿಸಬಹುದು.

## ಲಭ್ಯವಿರುವ ಹಿಂದಿನ ಸಂಚಿಕೆಗಳು

೧. ೨೦೦೨ ನೇ ವರ್ಷದ ಒಂದನೇ ಸಂಚಿಕೆಯ ಪ್ರತಿಗಳು ತೀರಿವೆ.
೨, ೩, ೪, ೫, ೬ ರ ಒಂದು ಸೆಟ್ ಬೆಲೆ ರೂ. ೧೨೫/-

೩. ೨೦೦೩ ನೇ ವರ್ಷದ ಸಂಚಿಕೆ ೭, ೮, ೯, ೧೦, ೧೧, ೧೨ ರ ಒಂದು ಸೆಟ್ ಬೆಲೆ ರೂ. ೧೫೦/-

೪. ೨೦೦೪ ನೇ ವರ್ಷದ ಸಂಚಿಕೆ ೧೩, ೧೪, ೧೫, ೧೬, ೧೭, ೧೮ ರ ಒಂದು ಸೆಟ್ ಬೆಲೆ ರೂ. ೧೫೦/-

•

ಆಸಕ್ತಿಯುಳ್ಳವರು ತಮಗೆ ಬೇಕಿರುವ ಸೆಟ್‌ಗಳನ್ನು ಸೂಚಿಸಿ, ಅವುಗಳ ಬೆಲೆಯನ್ನು ಮನಿಆರ್ಡರ್ ಅಥವಾ ಡಿ.ಡಿ. ಮೂಲಕ ಕಳಿಸಿದರೆ ಪ್ರತಿಗಳನ್ನು ಪುಸ್ತಕ-ಅಂಚೆಯಲ್ಲಿ ಕಳಿಸಲಾಗುವುದು.

•

ಹಣ ಕಳಿಸಲು ವಿಳಾಸ :

**ಡಾ. ಹೇಮಾ ಪಟ್ಟಣಶೆಟ್ಟಿ**

**ಸಂಪಾದಕರು, ಸಂಕಲನ**

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

ದೂರವಾಣಿ ೦೮೩೬ - ೨೪೬ ೨೭೧೮

# ಸಂಕಲನ

೧೮

೧೪ ನವಂಬರ್ ೨೦೦೪

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :
A Kannada Literary Magazine
Volume 3, Issue 6 : 14 November 2004
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004

Printed by Saraswati Offset Printers, Shivaji Road, Dharwad - 580 001

•
•
•

ಸಂಕಲನ - ೧೮ : ಸಂಪುಟ ೩, ಸಂಚಿಕೆ ೬ : ೧೪ ನವೆಂಬರ್ ೨೦೦೪
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪
✆ : ೦೮೩೬-೨೪೬ ೨೭೧೮

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವರ್ಷ ೨೦೦೪ ರಲ್ಲಿ ಪ್ರಕಟವಾದ ಸಂಕಲನದ
ಆರು ಸಂಚಿಕೆಗಳ ಒಟ್ಟು ೯೬೪ ಪುಟಗಳ ಬೆಲೆ ರೂ. ೧೫೦/-
ಚಂದಾ ಹಣವನ್ನು ಮನಿಆರ್ಡರ್ ಇಲ್ಲವೆ ಕ್ರಾಸ್ ಮಾಡಿದ ಡಿ. ಡಿ. ಮೂಲಕ
ಸಂಕಲನ ಅಥವಾ ಸಂಪಾದಕರ ಹೆಸರಿಗೆ ಕಳಿಸುವುದು.
ಚೆಕ್ ಕಳಿಸುವುದಾದಲ್ಲಿ ಬ್ಯಾಂಕ್ ಕಮೀಶನ್ ರೂ. ೨೦/- ಹೆಚ್ಚಿಗೆ ಸೇರಿಸುವುದು.

•

೨೦೦೫-೦೬-೦೭ ರ ಒಟ್ಟು ಚಂದಾ ರೂ. ೫೦೦/-
೨೦೦೫ ರಿಂದ ವಾರ್ಷಿಕ ಚಂದಾ ರೂ. ೨೦೦/-
ಚಂದಾ ಹಣವನ್ನು ೨೦೦೪ ಡಿಸೆಂಬರ್ ೨೫ ರ ಒಳಗಾಗಿ ಕಳಿಸುವುದು.

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮

# ಸಂಪಾದಕರ ಮಾತು

**ಸಂಕಲನ** ಸಾಹಿತ್ಯ ಪತ್ರಿಕೆ ತನ್ನ ಈ ೧೮ ನೆಯ ದ್ವೈಮಾಸಿಕ ಸಂಚಿಕೆಯೊಂದಿಗೆ ಅತ್ಯಂತ ಯಶಸ್ವಿಯಾಗಿ ೩ ನೆಯ ವರ್ಷವನ್ನು ಪೂರಯಿಸುತ್ತಿದೆ. ೨೦೦೨ ರ ಜನೆವರಿಯಲ್ಲಿ ಪ್ರಕಟವಾದ ಮೊದಲ ಸಂಚಿಕೆಯಲ್ಲಿ ನಾವು ನೀಡಿದ ಭರವಸೆಗಳನ್ನು ಪ್ರಾಮಾಣಿಕವಾಗಿ ಈಡೇರಿಸುತ್ತ ಬಂದಿದ್ದೇವೆ ಎಂಬ ಹೆಮ್ಮೆ ನಮಗೆ. ನಾಡಿನ ಸಾಹಿತಿಗಳು, ಸಾಹಿತ್ಯಪ್ರೇಮಿಗಳು ತುಂಬ ಪ್ರೀತಿ, ಗೌರವ, ಆಪ್ತತೆಯನ್ನು ತೋರಿದ್ದಾರೆ. ಬಹುಶಃ ಇದು ಕನ್ನಡ ಸಾಹಿತ್ಯಪತ್ರಿಕಾ ಪ್ರಪಂಚದಲ್ಲಿ ಒಂದು ವಿರಳ ನಡೆ ಎನ್ನಬಹುದು. ಸಾಕಷ್ಟು ಹೊಸ ಲೇಖಕರನ್ನು, ಹೊಸ ವಿಚಾರಗಳನ್ನು ಬೆಳಕಿಗೆ ತರುವಲ್ಲಿ ಸಂಕಲನಕ್ಕೆ ನೆರವಾದ ಎಲ್ಲರೂ ಈ ಯಶಸ್ಸಿನಲ್ಲಿ ಪಾಲುಗೊಂಡಿದ್ದಾರೆ, ಇದು ನಮ್ಮ ನಮ್ರ ನಂಬಿಕೆ.

ಈ ೩ ವರ್ಷಗಳು ನಮಗೆ ಬಹಳಷ್ಟು ನೀಡಿವೆ, ತೀಡಿವೆ, ಕಲಿಸಿವೆ. ಈ ಅನುಭವದ ಹಿನ್ನೆಲೆಯಲ್ಲಿ ಕಳೆದ ೨ ಸಂಚಿಕೆಗಳಲ್ಲಿ ನಾವು ವಿವರಿಸಿದ ಆರ್ಥಿಕ ಅಡಚಣೆಗಳನ್ನು ಮಿತ್ರರು ಚೆನ್ನಾಗಿ ಅರಿತಿದ್ದಾರೆ ಎಂದು ಭಾವಿಸಿದ್ದೇವೆ.

ಈ ಮಧ್ಯೆ ಆತ್ಮೀಯರಾದ ವಿಶ್ವೇಶ್ವರ ಭಟ್ ಅವರು ತಮ್ಮ ವಿಜಯ ಕರ್ನಾಟಕದ ೨೬-೦೯-೨೦೦೪ ರ ರವಿವಾರದ ಸಂಚಿಕೆಯಲ್ಲಿ ಸಂಕಲನದ ಬಗ್ಗೆ ಅತ್ಯಂತ ಆಪ್ತವಾಗಿ ಬರೆದು ಕನ್ನಡಿಗರ ಪ್ರೀತಿ-ಪ್ರಜ್ಞೆಯನ್ನು ಕೆಣಕಿದಂತೆ ಮಾಡಿ ಆಗ್ರಹಿಸಿದ್ದಾರೆ. ಹಾಗೆಯೇ ಕನ್ನಡಪ್ರಭದಲ್ಲಿ ಅರವಿಂದ ಚೊಕ್ಕಾಡಿಯವರು ಬರೆದ ಪತ್ರಕ್ಕೂ ಕೆಲವಾರು ಜನರು ಪ್ರತಿಕ್ರಿಯಿಸಿ **ಸಂಕಲನ**ದ ಗೌರವವನ್ನು ಹೆಚ್ಚಿಸಿದ್ದಾರೆ. ಇಂಥ ಆಪ್ತತೆಗೆ ಕಾರಣರಾದ, ಮತ್ತು ಅದಕ್ಕೆ ಸ್ಪಂದಿಸಿದ, ಅಲ್ಲದೆ ಈಗಾಗಲೇ ಚಂದಾಹಣ ಕಳಿಸಿರುವ ಎಲ್ಲರಿಗೂ **ಸಂಕಲನ**ದ ಕೃತಜ್ಞತೆಗಳು.

**ಸಂಕಲನ** ಎಂದಿನಂತೆ ತನ್ನ ಪ್ರಕಟಣೆಯನ್ನು ಮುಂದುವರಿಸುತ್ತದೆ.

೧ ನವಂಬರ್ ೨೦೦೪
ಹೂಮನೆ, ಧಾರವಾಡ-೪

**ಸಿದ್ಧಲಿಂಗ ಪಟ್ಟಣಶೆಟ್ಟಿ**
**ಹೇಮಾ ಪಟ್ಟಣಶೆಟ್ಟಿ**

# ಪರಿವಿಡಿ


೧. ನನ್ನ ಅವ್ವ ನನ್ನ ಅಪ್ಪ : ಕೆ. ಆನಂದ ಗಾಣಿಗ ೫ - ೧೨

೨. ನನ್ನ ಅಪ್ಪ ನನ್ನ ಅಮ್ಮ : ಹಾಲಾಡಿ ಮಾರುತಿ ರಾವ್ ೧೨ - ೧೫

೩. ಗೀತ ದಶಮಿ : ಮ. ಸು. ಕೃಷ್ಣಮೂರ್ತಿ ೧೫ - ೨೦

೪. ರಂಗಸ್ಥಳ : ವಸಂತಕುಮಾರ ಪೆರ್ಲ ೨೦ - ೨೨

೫. ಕವಿರಾಜಮಾರ್ಗ ಮಂಥನ : ನೃಪತುಂಗ ವ್ಯಕ್ತಿತ್ವ : ಷ. ಶೆಟ್ಟರ್ ೨೩ - ೩೨

೬. ಸಿ.ಪಿ.ಕೆ. ಅವರ ಕಾವ್ಯ : ಮಾಧವ ಕುಲಕರ್ಣಿ ೩೩ - ೩೯

೭. ದೇಶವನು ಪ್ರೀತಿಸಲೇಬೇಕು ಖರೆ, ಆದರೆ : ಬಿ. ಟಿ. ದೇಸಾಯಿ ೩೯ - ೪೦

೮. ಜಾನ್ ಕೀಟ್ಸ್ ಮತ್ತು ಬೇಂದ್ರೆ : ಬಸವರಾಜ ಪಿ. ಡೋಣೂರ ೪೧ - ೫೧

೯. ಮಹಾಭಾರತದ ದ್ರೌಪದೀ ವಸ್ತ್ರಾಪಹರಣ ಪ್ರಸಂಗ :
ಎಸ್. ಎಸ್. ಹಿರೇಮಠ ೫೨ - ೫೭

೧೦. ವಿಜಯಾ ಸುಬ್ಬರಾಜ್ ಅವರ ಮೂರು ನಾಟಕಗಳು :
ಎಚ್. ಜಿ. ಸೋಮಶೇಖರ ರಾವ್ ೫೮ - ೬೦

೧೧. ಜುನಾಗಡ ಮಹಾತ್ಮೆ : ಶಿವಾನಂದ ನಾಗನೂರ ೬೧ - ೬೨

೧೨. ಎ. ಜಾನಕಿ ಅವರ 'ಪ್ರೇಮಚಂದರ ಕಥೆಗಳು' : ಎಚ್. ದಂಡಪ್ಪ ೬೩ - ೬೫

೧೩. **ಪುಸ್ತಕ ಪರಿಶೀಲನೆ :** ೬೬ - ೭೬

೧. ಹತ್ತಿರದ ಮಾತು : ಸತ್ಯನ್ ದೇರಾಜೆ; ೨. ಶಬ್ದವಾಯಿತು ನಕ್ಷತ್ರ : ಧರಣೇಂದ್ರ ಕುರಕುರಿ —ದೇಶಪಾಂಡೆ ಸುಬ್ಬರಾಯ; ೩. ಸ್ತ್ರೀಕಥನ : ಶೈಲಜ ಹಿರೇಮಠ; ೪. ಹೀಗೊಂದು ಟಾಪ್ ಪ್ರಯಾಣ : ಈರಪ್ಪ ಎಂ. ಕಂಬಳಿ —ಚಂದ್ರಶೇಖರ ವಸ್ತ್ರದ; ೫. ಜನರೊಂದಿಗೆ ಪೊಲೀಸರು : ಡಿ. ವಿ. ಗುರುಪ್ರಸಾದ —ಶ್ರೀಪತಿ ಮಂಜನಬೈಲು; ೬. ಮಹಾದೇವ ಶೆಟ್ಟರ ಕವಿತೆಗಳು; ೭. ಮೀರಾ ಪದಾವಲಿ : ಮ. ಸು. ಕೃಷ್ಣಮೂರ್ತಿ —ಅಂಕದ ಮುರಿಗೆಪ್ಪ; ೮. ದೇವರು ಅಳುತಾನ : ಕಪ್ಲಿ ಸಣ್ಣಹನುಮಂತ; ೯. ತಾಳಪಲ್ಲಿ ವೆಂಕಯ್ಯ : ದಸ್ತಗೀರಸಾಬ್ ದಿನ್ನಿ; ೧೦. ಪೂರ್ವಾಂಚಲದಲ್ಲಿ ಕೆಲವು ದಿನಗಳು : ಪ್ರೇಮಾ ಭಟ್ —ಜಿ. ಟಿ. ಶ್ರೀಧರ ಶರ್ಮ ; ೧೧. ಅರಿವು : ವಿಶ್ವನಾಥ ಬಾಳಗಿ —ಎಂ. ಡಿ. ಗೋಗೇರಿ; ೧೨. ಕುವೆಂಪು ಕಾದಂಬರಿ : ಎರಡು ಅಧ್ಯಯನಗಳು : ಟಿ. ಪಿ. ಅಶೋಕ; ೧೩. ರಾತ್ರಿ ಮಂಜು : ಶ್ರೀನಿವಾಸ ಕುಲಕರ್ಣಿ —ಬಸವರಾಜ ಪಮ್ಮಾರ; ೧೪. ಬಂದೂಕಿನ ಮನುಷ್ಯ : ಬಸವರಾಜ ಕುಂಬಾರ —ದುಷ್ಯಂತ ನಾಡಗೌಡ

೧೪. ಸಂಕಲನ : ಅನಿಸಿಕೆ ೭೭ - ೭೮

೧೫. ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೭೯ - ೮೦

## ನನ್ನ ಅವ್ವ ನನ್ನ ಅಪ್ಪ

ಕೆ. ಆನಂದ ಗಾಣಿಗ

ನನ್ನ ಅಪ್ಪ ಅಪಘಾತದಲ್ಲಿ ತೀರಿಕೊಂಡಾಗ ಅವರ ವಯಸ್ಸು ೪೨ ಮಾತ್ರ. ನನ್ನವ್ವನ ವಯಸ್ಸು ಕೇವಲ ೩೨. ಆಗಲೇ ಆಕೆ ಏಳು ಮಕ್ಕಳ ಜನನಿಯಾಗಿದ್ದಳು. ಎಂಟನೆಯದು ಅವಳ ಗರ್ಭದಲ್ಲಿ ಏಳು ತಿಂಗಳ ಭ್ರೂಣವಾಗಿ ಬೆಳೆಯುತ್ತಿತ್ತು. ನಾನಾಗ ಉಡುಪಿಯ ಕ್ರಿಶ್ಚಿಯನ್ ಪ್ರೌಢ ಶಾಲೆಯಲ್ಲಿ ಹತ್ತನೆಯ ತರಗತಿ ವಿದ್ಯಾರ್ಥಿಯಾಗಿದ್ದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಕಾಲವದು. ಎಸ್.ಎಸ್.ಎಲ್.ಸಿ. ಮುಗಿಯಬೇಕಾದರೆ ಹನ್ನೊಂದನೆಯ ತರಗತಿಯ ಪಬ್ಲಿಕ್ ಪರೀಕ್ಷೆ ಪಾಸಾಗಬೇಕಿತ್ತು.

ದಿನಾಂಕ ೩೧-೧೨-೧೯೫೨. ಅಂದು ಶಾಲೆ ಬಿಟ್ಟ ನಂತರ ಸ್ಕೂಲ್ ಡೇ ನಾಟಕದ ರಿಹರ್ಸಲ್ ನಡೆಯುತ್ತಿತ್ತು. ನಾಟಕದ ನಿರ್ದೇಶಕ ವಿದ್ವಾನ್ ಕುತ್ಪಾಡಿ ವೆಂಕಟಾಚಲ ಭಟ್ಟರು (ನನ್ನ ನಾಟಕ ರಂಗದ ಗುರು) ಪ್ರಧಾನ ಪಾತ್ರವನ್ನು ನನಗೇ ನೀಡಿದ್ದರು. ಅಷ್ಟರಲ್ಲಿ ಅಲ್ಲಿಗೆ ಓಡಿ ಬಂದ ನನ್ನ ದೊಡ್ಡಪ್ಪ ವೀರಪ್ಪ ಗಾಣಿಗರು ವೆಂಕಟಾಚಲ ಭಟ್ಟರೊಂದಿಗೆ ಏನೋ ಗುಸು ಗುಸು ಮಾತನಾಡಿದರು. ರಿಹರ್ಸಲನ್ನು ಅಲ್ಲಿಗೇ ನಿಲ್ಲಿಸಲಾಯಿತು. ಗುರುಗಳು "ಆನಂದಾ, ನೀನು ದೊಡ್ಡಪ್ಪನೊಂದಿಗೆ ಹೋಗು" ಅಂದರು. ಬರುತ್ತಾ ದಾರಿಯಲ್ಲಿ ವಿಷಯವೇನೆಂದು ದೊಡ್ಡಪ್ಪನನ್ನು ವಿಚಾರಿಸಿದೆ. " ನಿನ್ನಪ್ಪನಿಗೆ ಉಷಾರಿಲ್ಲವಂತೆ. ನಾವೀಗ ಪರ್ಕಳಕ್ಕೆ (ಮಣಿಪಾಲದಿಂದ ೩ ಕಿ.ಮೀ.) ಹೋಗಬೇಕಾಗಿದೆ " ಅಂದರು. ಅಲ್ಲಿಗೆ ಹೋಗಿ ನೋಡುವಾಗ ನನ್ನಪ್ಪ ಅಂಗಾತ ಮಲಗಿದ್ದರು— ಹೆಣವಾಗಿ! ಸುತ್ತಲೂ ೩೦-೪೦ ಮಂದಿ ನೆರೆದಿದ್ದರು. ನಂಬಲಾಗದ ದೃಶ್ಯ ನೋಡಿದ ನಾನು ಬೊಬ್ಬಿಟ್ಟು ಕೇಳಿದೆ– "ಏನಾಯ್ತು ನನ್ನಪ್ಪನಿಗೆ? " ಯಾರಿಂದಲೂ ಉತ್ತರವಿಲ್ಲ. ಸ್ಮಶಾನ ಮೌನ!... ಕಟ್ಟಡ ನಿರ್ಮಾಣದ ಪ್ರಖ್ಯಾತ ಮೇಸ್ತ್ರಿಯಾಗಿದ್ದ ನನ್ನಪ್ಪ ಮಂಜಯ್ಯ ಗಾಣಿಗರು ಹಳೆಯ ಕಟ್ಟಡವೊಂದರ ಪುನರ್ ನಿರ್ಮಾಣ ಮಾಡಿಸುತ್ತಿದ್ದಾಗ, ಆ ಮನೆಯ ಮಣ್ಣಿನ ಗೋಡೆ ಕುಸಿದು ಬಿತ್ತು. ಕೆಲಸ ಮಾಡುತ್ತಿದ್ದ ಕಾರ್ಮಿಕರು ಗೋಡೆ ಬೀಳುವಾಗ ಪಕ್ಕಕ್ಕೆ ಓಡಿ ತಪ್ಪಿಸಿಕೊಂಡರೂ, ಸಮೀಪದಲ್ಲೇ ನಿಂತು ಕೆಲಸ ಮಾಡಿಸುತ್ತಿದ್ದ ನನ್ನಪ್ಪ ಗೋಡೆಯ ಅಡಿಗೇ ಬಿದ್ದು ಸ್ಥಳದಲ್ಲೇ ಸಾವಪ್ಪಿದರು. ಮಣಿಪಾಲದ ಬ್ರಹ್ಮ ಡಾ. ಟಿ. ಎಂ. ಎ. ಪೈ ಅವರ ಮೆಚ್ಚುಗೆಯ ಮೇಸ್ತ್ರಿಯಾಗಿದ್ದರು ನನ್ನಪ್ಪ!

ನನ್ನಪ್ಪನೊಂದಿಗೆ ನಾನು ಬದುಕು ಸಾಗಿಸಿದ್ದು ಕೇವಲ ೧೬ ವರ್ಷ. ಆದರೆ ನನ್ನನ್ನು ಹೊತ್ತು ಹೆತ್ತು ಸಾಕಿ ಸಲಹಿದ ನನ್ನವ್ವ ರಾಧಮ್ಮಳೊಂದಿಗೆ ಸುದೀರ್ಘ ೬೬ ವರ್ಷಗಳ ಕಾಲ ಬದುಕಿದ್ದೇನೆ. ಗಂಡ ಸಾಯುವಾಗ ೩೨ ರ ಹರೆಯದ ಯುವತಿಯಾಗಿದ್ದ ನನ್ನಮ್ಮ ಇಹಲೋಕ ತ್ಯಜಿಸಿದ್ದು ತನ್ನ ೮೩ ನೆಯ ವಯಸ್ಸಿನಲ್ಲಿ. ಈ ಅವಧಿಯಲ್ಲಿ ಆಕೆ ಎದುರಿಸಿದ ಕಷ್ಟ ಕಾರ್ಪಣ್ಯಗಳು, ಅನುಭವಿಸಿದ ಸಿಹಿ-ಕಹಿಗಳು ನನ್ನ ಸ್ಮೃತಿಪಟಲದಲ್ಲಿ ಇಂದಿಗೂ ಹಸಿರಾಗಿ

ಉಳಿದಿವೆ. ಅವೆಲ್ಲವನ್ನೂ ವಿವರಿಸ ಹೊರಟರೆ ಒಂದು ಬೃಹತ್ ಕಾದಂಬರಿಯೇ ಆದೀತು. ಈ ಲೇಖನದ ವಿಸ್ತಾರದ ಕಡೆಗೆ ಗಮನವಿರಿಸಿರುವ ನಾನು ನನ್ನಮ್ಮ ತನ್ನ ಪತಿಯೊಂದಿಗೆ ಸಾಗಿಸಿದ ದಾಂಪತ್ಯ ಜೀವನದ ಅವಧಿಯಲ್ಲಿ ಅನುಭವಿಸಿದ ಕೆಲವೇ (ಎಲ್ಲವನ್ನಲ್ಲ) ಸಂಕಷ್ಟಗಳನ್ನು ದಾಖಲಿಸಬಯಸುತ್ತೇನೆ.

ನನ್ನಮ್ಮನಿಗೆ ನಾನು ಜ್ಯೇಷ್ಠ ಪುತ್ರ. ಅಮ್ಮನಿಗೆ ನಾನೂ ಸೇರಿ ಏಳು ಮಂದಿ ಗಂಡುಮಕ್ಕಳು. ಒಬ್ಬಳು ಮಗಳು– ಒಟ್ಟು ೮ ಮಂದಿ. ಅಪ್ಪ ಸಾಯುವಾಗ ೩೨ರ ಹರೆಯದ ನನ್ನಮ್ಮ ೮ ನೆಯ ಮಗುವಿನ ಗರ್ಭಿಣಿಯಾಗಿದ್ದಳು. ಮತ್ತೆರಡು ತಿಂಗಳಲ್ಲಿ ತನ್ನ ೮ ನೆಯ ಮಗುವನ್ನು ಹಡೆದಿದ್ದಳು. ನನ್ನನ್ನು ಅವಳು ತನ್ನ ೧೬ ನೆಯ ಪ್ರಾಯದಲ್ಲೇ ಹಡೆದಿದ್ದಳು. ಗಂಡ ಸತ್ತಾಗ ಅವರ ಹೆಣದ ಮುಂದೆ ಮಂಡೆಯನ್ನು ಬಡಿದುಕೊಂಡು, "ಮಗಾ ಆನಂದಾ, ನನಗಿನ್ನಾರು ಗತಿ? ಈ ಮಕ್ಕಳಿಗಿನ್ನಾರು ಗತಿ? ನಾನಿನ್ನು ಬದುಕಬಾರದು. ಈ ಮಕ್ಕಳನ್ನು ಬಾವಿಗೆಸೆದು, ನಾನೂ ಬಾವಿಗೆ ಹಾರಿ ಸಾಯುತ್ತೇನೆ!" ಎಂದು ಬೊಬ್ಬಿಟ್ಟಾಗ ನಾನು ಎದೆ ತಟ್ಟಿಕೊಂಡು ಮಾತು ಕೊಟ್ಟಿದ್ದೆ– "ಹೆದರಬೇಡಮ್ಮ, ನಾನಿದ್ದೇನೆ! ನಿನ್ನ ಮಕ್ಕಳನ್ನು ನನ್ನ ಮಕ್ಕಳೆಂದು ಭಾವಿಸಿ ಸಲಹುತ್ತೇನೆ" ಅಂದಿದ್ದೆ. ಸುತ್ತಲೂ ನೂರಾರು ಸಂಖ್ಯೆಯಲ್ಲಿ ಜನ ಸೇರಿದ್ದರು. ಹೆಂಗಸರು ಗೋಳೋ ಎಂದು ಅಳುತ್ತಿದ್ದರು. ಗಂಡಸರು ಕಣ್ಣೀರು ಒರೆಸಿಕೊಳ್ಳುತ್ತಿದ್ದರು.

ಮೇಲಿನ ಘಟನೆಯು ಸಂಭವಿಸಿ ೫೨ ವರ್ಷಗಳೇ ಕಳೆದವು. ನನ್ನ ತಮ್ಮಂದಿರೆಲ್ಲಾ ಇಂದು ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳಾಗಿದ್ದಾರೆ. ನನ್ನ ಏಕಮಾತ್ರ ತಂಗಿಯ ಗಂಡ ಸಿಂಡಿಕೇಟ್ ಬ್ಯಾಂಕಿನ ಜನರಲ್ ಮೆನೇಜರ್ ಆಗಿ ಇತ್ತೀಚೆಗೆ ನಿವೃತ್ತರಾಗಿದ್ದಾರೆ. ತಂದೆಯ ಮುಖವನ್ನೇ ಕಾಣದ ನನ್ನ ಕೊನೆಯ ತಮ್ಮ ಇಂದು ವಿಜಯಾ ಬ್ಯಾಂಕಿನಲ್ಲಿ ಚೀಫ್ ಮೆನೇಜರ್ ಆಗಿದ್ದಾನೆ. ಅಪ್ಪ ಸಾಯುವಾಗ ಕೇವಲ ೧೬ ವರ್ಷದ ಹುಡುಗನಾಗಿದ್ದ ನನ್ನಿಂದ ಇಷ್ಟನ್ನೆಲ್ಲಾ ಸಾಧಿಸಲು ಸಾಧ್ಯವಾಯಿತೆಂದರೆ ಅದು ಆತ್ಮಪ್ರಶಂಸೆಯೆನಿಸೀತು. ನನ್ನಮ್ಮನ ಪಾತಿವ್ರತ್ಯ, ಧರ್ಮಪರಾಯಣತೆ, ಪರೋಪಕಾರ ಬುದ್ಧಿ, ಸರಳತೆ ಮತ್ತು ಸಜ್ಜನಿಕೆಗಳಿಂದಾಗಿಯೇ ನಮ್ಮ ಕುಟುಂಬದ ಶ್ರೇಯೋಭಿವೃದ್ಧಿ ಆಯಿತೆಂಬ ಅಚಲವಾದ ನಂಬಿಕೆ ನನಗಿದೆ.

ನನ್ನ ತಂದೆ ಶಾಲೆಗೆ ಹೋಗಿ ಕಲಿತವರಲ್ಲ, ಸ್ವಅಧ್ಯಯನದಿಂದ ಕಲಿತವರು. ಮಹಾ ಬುದ್ಧಿವಂತರು; ಅತ್ಯಂತ ಸಜ್ಜನ, ಪರೋಪಕಾರಿ, ನ್ಯಾಯನಿಷ್ಠುರಿ, ಸತ್ಯಸಂಧ, ಸ್ವಾಭಿಮಾನಿ ಎಲ್ಲವೂ ಆಗಿ ಸರ್ವ ಜನರ ಮನ್ನಣೆಗೆ ಪಾತ್ರರಾಗಿದ್ದರು. ಅವರಲ್ಲಿದ್ದ ಒಂದೇ ಒಂದು ದುರ್ಗುಣವೆಂದರೆ ಮುಂಗೋಪ. ಸಾಕ್ಷಾತ್ ಉಗ್ರನರಸಿಂಹನ ಅವತಾರವೇ ಆಗಿದ್ದರು. ಅವರ ಮುಂಗೋಪದಿಂದ ಅತ್ಯಂತ ಹಿಂಸೆಗೊಳಗಾದವಳು ನನ್ನಮ್ಮ, ಮತ್ತು ಕೆಲಮಟ್ಟಿಗೆ ನಾನು. ನನ್ನಪ್ಪನಿಂದ ನಾನೆಷ್ಟು ಬಾರಿ ಹೊಡೆತ ತಿಂದಿದ್ದೇನೆಂಬುದು ನನಗೇ ಲೆಕ್ಕವಿಲ್ಲ!

ಆದರೆ ನನ್ನಮ್ಮ? ಅಮ್ಮನೇ ಒಂದು ದಿನ ಅಳುತ್ತಾ ನನಗೆ ತಿಳಿಸಿದ ವಿಚಾರವಿದು– ನಾನು ಎರಡು ವರ್ಷದ ಮಗುವಿದ್ದಾಗ ನಡೆದ ಘಟನೆ! ಆಗ ನಮ್ಮ ಮನೆ ಇದ್ದುದು ಉಡುಪಿ ಸಮೀಪದ ಅಂಬಲಪಾಡಿಯಲ್ಲಿ. ಮನೆಯಲ್ಲಿ ಇದ್ದುದು ನಾವು ಮೂವರು– ಅಪ್ಪ, ಅಮ್ಮ ಮತ್ತು ನಾನು. ಕೆಲವೊಮ್ಮೆ ನನ್ನ ಸೋದರಮಾವ (ತಾಯಿಯ ತಮ್ಮ) ಕೆಲ ದಿನಗಳ

ಮಟ್ಟಿಗೆ ಇದ್ದು ಹೋಗುತ್ತಿದ್ದರು. ಅಮ್ಮನಿಗೆ ಮುಟ್ಟಾದಾಗ ಅಡುಗೆಯನ್ನು ನನ್ನ ಸೋದರಮಾವನೇ ಮಾಡುತ್ತಿದ್ದರಂತೆ. ನನ್ನ ನಂತರದ ನನ್ನಮ್ಮನ ಬಸಿರೊಂದು ಗರ್ಭಪಾತವಾಗಿತ್ತಂತೆ... ನನ್ನಜ್ಜಿಗೆ (ತಾಯಿಯ ತಾಯಿ) ವಿಷಮ ಜ್ವರ ಉಂಟಾಗಿತ್ತು. ಅವರ ಆರೈಕೆಗೆ ಮನೆಯಲ್ಲಿ ಬೇರಾರೂ ಹೆಂಗಸರಿರಲಿಲ್ಲ. ಹಾಗಾಗಿ, ನಾಲ್ಕು ದಿವಸಗಳ ಮಟ್ಟಿಗೆ ತನ್ನ ಮಗಳನ್ನು ಕರೆದೊಯ್ಯುತ್ತೇನೆಂದು ನನ್ನಜ್ಜ ನಮ್ಮ ಮನೆಗೆ ಬಂದರು. ಅವರು ಬರುವಾಗ ನನ್ನ ಅಪ್ಪ ಕೆಲಸಕ್ಕೆ ಹೋಗಿ ಆಗಿತ್ತು. ಸಂಜೆಯ ವರೆಗೆ ಅವರನ್ನು ನನ್ನಜ್ಜ ಕಾಯುವಂತಿರಲಿಲ್ಲ. ಮಗಳನ್ನು ಕರೆದೊಯ್ಯದೆ ಇರಲೂ ಸಾಧ್ಯವಿರಲಿಲ್ಲ. ನನ್ನ ತಾಯಿಯಂತೂ ಗಂಡನ ಒಪ್ಪಿಗೆ ಪಡೆಯದೆ ಹೊರಡಲು ಸಿದ್ಧಳಿಲ್ಲ. ಅಷ್ಟರಲ್ಲಿ ನನ್ನ ತಂದೆಯ ಭಾವ (ಅಕ್ಕನ ಗಂಡ) ಅಲ್ಲಿಗೆ ಬಂದರು. ಪರಿಸ್ಥಿತಿಯ ತೀವ್ರತೆಯನ್ನು ತಿಳಿದುಕೊಂಡ ಅವರು, "ನೀನು ರಾಧಾಳನ್ನು ಕರೆದುಕೊಂಡು ಹೋಗು. ಮಂಜಯ್ಯನಿಗೆ ನಾನು ಸಮಾಧಾನ ಹೇಳುತ್ತೇನೆ" ಅಂದರಂತೆ. ನನ್ನಮ್ಮ ಒಪ್ಪದಿದ್ದರೂ ಒತ್ತಾಯದಿಂದ ಎಂಬಂತೆ ಆಕೆಯನ್ನು ನನ್ನಜ್ಜ ಕರೆದುಕೊಂಡು ಹೋದರು. ಸಂಜೆ ನನ್ನಪ್ಪ ಕೆಲಸ ಬಿಟ್ಟು ಮನೆಗೆ ಬರುವಾಗ ಮನೆಯ ಬೀಗದ ಕೈ ಕೊಡಲೆಂದು ಅಲ್ಲಿಗೆ ಬಂದಿದ್ದ ಅಣ್ಣಯ್ಯನವರಿಂದ ವಿಷಯ ತಿಳಿದ ನನ್ನಪ್ಪ ಕೋಪದಿಂದ ಬುಸುಗುಟ್ಟಲಾರಂಭಿಸಿದರು! "ಪುಣ್ಯಾತ್ಮಾ, ಜ್ವರದಿಂದ ಹಾಸಿಗೆ ಹಿಡಿದಿರುವ ತನ್ನ ತಾಯಿಯ ಆರೈಕೆಗಾಗಿ ಅವಳು ಹೋದದ್ದು. ಅಲ್ಲಿ ಆರೈಕೆಗೆ ಬೇರೆ ಹೆಂಗಸರಿಲ್ಲವಾದ್ದರಿಂದ ನಾನೇ ಹೇಳಿದೆ ಹೋಗು ಅಂತ. ರಾಧಾಳಿಗೆ ಹೋಗುವುದಕ್ಕೆ ಮನಸ್ಸಿರಲಿಲ್ಲ. ನನ್ನ ಒತ್ತಾಯಕ್ಕೆ ಅವಳು ಹೋದದ್ದು, ಅವಳದೇನೂ ತಪ್ಪಿಲ್ಲ"ಎಂದು ಅಣ್ಣಯ್ಯ ಸಮಾಧಾನ ಹೇಳಿದರು.

ಮರುದಿನ ಬೆಳಗಿನ ಜಾವ ನನ್ನಪ್ಪ ನೇರಾಗಿ ಮಾವನ ಮನೆಗೆ ಹೋದರು. ಯಾರೊಂದಿಗೂ ಏನನ್ನೂ ಮಾತಾಡದೆ ಗಂಭೀರವಾಗಿ ಜಗಲಿಯಲ್ಲಿ ಕುಳಿತರು. ಮಾವನ ಪ್ರಶ್ನೆಗೆ ಉತ್ತರಿಸಲಿಲ್ಲ. ಕುಡಿಯಲು ನೀರು ಕೊಡಲೆಂದು ನಡುಗುತ್ತಾ ಬಳಿಗೆ ಬಂದ ಹೆಂಡತಿಯ ಮುಖವನ್ನೂ ನೋಡಲಿಲ್ಲ, ನೀರನ್ನೂ ಸ್ವೀಕರಿಸಲಿಲ್ಲ. ಅಷ್ಟರಲ್ಲಿ ಅಪ್ಪನ ಬಳಿಗೆಂದು ಓಡಿ ಬಂದ ಮಗುವನ್ನು (ನನ್ನನ್ನು) ತಕ್ಷಣ ಎತ್ತಿ ಹೆಗಲ ಮೇಲೇರಿಸಿಕೊಂಡು ಅಲ್ಲಿಂದ ಹೊರಟೇ ಬಿಟ್ಟರು. ನನ್ನಪ್ಪ, ನನ್ನಜ್ಜ ಜ್ವರದಿಂದ ಚಾಪೆ ಹಿಡಿದಿದ್ದ ನನ್ನಜ್ಜಿ ಎಲ್ಲರೂ ಓಡಿ ಬಂದು ಬೊಬ್ಬೆ ಹೊಡೆದರೂ ನನ್ನಪ್ಪ ನಿಲ್ಲಲಿಲ್ಲ, ತಿರುಗಿಯೂ ನೋಡಲಿಲ್ಲ. ಸುಮಾರು ಎಂಟು ಕಿ.ಮೀ. ದೂರದ ದಾರಿಯನ್ನು ನನ್ನನ್ನೆತ್ತಿಕೊಂಡೇ ನಡೆದು ಬಂದು ತನ್ನ ಮನೆಯನ್ನು ಸೇರಿದರು. ಅವರನ್ನನುಸರಿಸಿಕೊಂಡೇ ತನ್ನ ತಂದೆಯೊಂದಿಗೆ ನನ್ನಮ್ಮ ಅಲ್ಲಿಗೆ ಬಂದಿದ್ದಳು. "ಮನೆಯೊಳಗೆ ಬರಬೇಡಿ, ಬಂದರೆ ಕೊಂದೇ ಹಾಕುತ್ತೇನೆ" ಎಂದು ಅಪ್ಪ ಘರ್ಜಿಸಿದರು. ನನ್ನ ಅಜ್ಜನಿಗೂ ಹೆದರಿಕೆಯಾಯಿತು. "ಇಗೋ ನಿನ್ನ ಹೆಂಡತಿಯನ್ನು ತಂದು ನಿನಗೊಪ್ಪಿಸಿದ್ದೇನೆ. ಬೇಕಿದ್ದರೆ ಸ್ವೀಕರಿಸು. ಬೇಡವಾದರೆ ಕೊಂದು ತಿನ್ನು!" ಎಂದು ಅಲ್ಲಿಂದಲೇ ಘೋಷಿಸಿ ಹಿಂತೆರಳಿದರು. ನಾನು ಅಮ್ಮನ ಬಳಿಗೆ ಹೋಗದಂತೆ ಅಪ್ಪ ನನ್ನನ್ನು ಕಂಬಕ್ಕೆ ಕಟ್ಟಿ ಹಾಕಿದ್ದರು. ಅಮ್ಮ ಒಂದೇ ಸಮನೆ ಅಳುತ್ತಿದ್ದಳು. ಅಪ್ಪ ಒಳಕ್ಕೆ ಹೋಗಿ ಒಂದು ಲೋಟ ನೀರು ಕುಡಿದು ಚಾವಡಿಗೆ ಬರುವಷ್ಟರಲ್ಲಿ ಅಮ್ಮ ಒಳಕ್ಕೆ ಓಡಿ ಬಂದು, ತನ್ನ ಗಂಡನ ಎರಡೂ ಕಾಲುಗಳನ್ನು ಬಿಗಿಯಾಗಿ ಹಿಡಿದುಕೊಂಡು "ದಮ್ಮಯ್ಯ! ಇನ್ನೆಂದಿಗೂ ಇಂತಹ ತಪ್ಪು ಮಾಡುವುದಿಲ್ಲ.

ಇದೊಂದು ಬಾರಿ ಕ್ಷಮಿಸಿ" ಎಂದು ಬೊಬ್ಬಿಟ್ಟಳು. ಅಲ್ಲಿಂದಲೇ ಅವಳ ಜುಟ್ಟನ್ನು ಹಿಡಿದು ಮೇಲೆತ್ತಿದ ನನ್ನಪ್ಪ ದನಕ್ಕೆ ಬಡಿಯುವಂತೆ ಬಡಿದರು. ತನ್ನ ಕೈ ಸೋತಾಗ ಅಂಗಳದಲ್ಲಿ ಕಣ್ಣಿಗೆ ಬಿದ್ದ ತೆಂಗಿನ ಸೋಗೆಯೊಂದರ ತುಂಡನ್ನು ತಂದು ಅದು ಪುಡಿಯಾಗುವ ವರೆಗೆ ಹೊಡೆದರು. ನನ್ನಮ್ಮನ ದೇಹದಿಂದ ರಕ್ತ ಚಿಮ್ಮುತ್ತಿತ್ತು. ನಾನು ಭಯದಿಂದ ಸ್ಮೃತಿ ತಪ್ಪಿ ಬಿದ್ದಿದ್ದೆನಂತೆ. ನನ್ನಪ್ಪನ ಸಿಟ್ಟಿಗೆ ಭಯಂಕರ ಹೆದರುತ್ತಿದ್ದ ಅವರ ಭಾವ ಅಣ್ಣಯ್ಯನವರು, ಇವೆಲ್ಲವನ್ನೂ ದೂರದಲ್ಲೇ ನಿಂತು ನೋಡುತ್ತಿದ್ದು, ಸಹಿಸಲಾಗದೆ ಓಡಿ ಬಂದು ನನ್ನಪ್ಪನ ಹಿಂಬದಿಯಿಂದ ಅವರ ಎರಡೂ ಕೈಗಳನ್ನು ಬಿಗಿದಪ್ಪಿ ಬಂಧಿಸಿ, "ಏಯ್! ನೀನೇನು ಮನುಷ್ಯನೋ ಪ್ರಾಣಿಯೋ? ನಿನ್ನ ಹೆಂಡತಿಯದೇನೂ ತಪ್ಪಿಲ್ಲ. ಅವಳನ್ನು ಕಳುಹಿಸಿ ಕೊಟ್ಟವನು ನಾನು. ನೀನು ಹೊಡೆಯಬೇಕಾದುದು ಅವಳಿಗಲ್ಲ, ನನಗೆ! ಹ್ಞೂ, ಹೊಡಿ!" ಎಂದು ಎದೆಯೊಡ್ಡಿ ನಿಂತರು. ನನ್ನಪ್ಪನ ಕೋಪ ಸರ್‍ರನೆ ಪಾತಾಳಕ್ಕೆ ಇಳಿಯಿತು. ಕೈಯಲ್ಲಿದ್ದ ಬಡಿಗೆಯನ್ನು ಬಿಸಾಡಿ, ಛಕ್ಕನೆ ಕುಳಿತು ತಾನೂ ದುಃಖಿಸಲಾರಂಭಿಸಿದರು. ಅನಂತರದ ವಿವರಗಳು ಇಲ್ಲಿ ಅಪ್ರಸ್ತುತ. ಇದು ಉತ್ಪ್ರೇಕ್ಷಿತ ಘಟನೆಯಲ್ಲ. ಕಟ್ಟುಕತೆಯೂ ಅಲ್ಲ. ೬೬ ವರ್ಷಗಳ ಹಿಂದೆ ನಡೆದ ವಾಸ್ತವ ಘಟನೆ! ನನ್ನಮ್ಮನೇ ನನಗೆ ಅಳುತ್ತಳುತ್ತಾ ಬಿತ್ತರಿಸಿದ ನನ್ನಮ್ಮನ ಬದುಕಿನ ವಾಸ್ತವ ಕತೆ. ಆ ಕಾಲದಲ್ಲಿ ಇಂತಹ ಅಮಾನವೀಯ ಕ್ರೂರ ಘಟನೆಗಳು ಗ್ರಾಮೀಣ ಪ್ರದೇಶದಲ್ಲಿ ಅಲ್ಲಲ್ಲಿ ನಡೆಯುತ್ತಿದ್ದವು. ಏಕೆಂದರೆ ಆಗ ಹೆಣ್ಣಾದವಳಿಗೆ "ಪತಿಯೇ ಪರದೈವ! ಗಂಡನಿಗಿಂತ ದೊಡ್ಡ ದೇವರಿಲ್ಲ!!"— ಈ ಕಾಲದಲ್ಲಾದರೆ ಇದು ಸ್ತ್ರೀ ಶೋಷಣೆ! ಕೋರ್ಟಿನಲ್ಲಿ ಪರಿಹಾರ— ಅಥವಾ ಡೈವೋರ್ಸ್!!

ಸುಮಾರು ೬೦ ವರ್ಷಗಳ ಹಿಂದೆ ನನ್ನಮ್ಮನ ಬದುಕಿನಲ್ಲಿ ನಡೆದ ಇನ್ನೊಂದು ಘಟನೆ! ಬಡ ಗ್ರಾಮೀಣ ಮಹಿಳೆಯರು ಗಾಜಿನ ಬಳೆಯನ್ನೇ ಧರಿಸುತ್ತಿದ್ದ ಕಾಲವದು. ಬಳೆಗಳನ್ನು ಖರೀದಿ ಮಾಡುವುದಕ್ಕೆ– ಧರಿಸುವುದಕ್ಕೆ ಬಳೆಯಂಗಡಿಗಳಿಗೆ ಹೋಗುವ ಅಗತ್ಯವಿರಲಿಲ್ಲ. ಬಳೆಗಾರರು ಮತ್ತು ಬಳೆಗಾರ್ತಿಯರು ಮನೆ ಮನೆಗಳಿಗೆ ಬಂದು ಬಳೆಗಳನ್ನು ವಿಕ್ರಯಿಸುತ್ತಿದ್ದರು; ಸ್ವತಃ ತೊಡಿಸುತ್ತಿದ್ದರು. ಅದೊಂದು ದಿನ ನನ್ನಪ್ಪ ಕೆಲಸಕ್ಕೆ ಹೋಗಿದ್ದರು. ಅಮ್ಮ ಮಧ್ಯಾಹ್ನದ ಅಡುಗೆ-ಊಟ ತೀರಿಸಿ ನೆರೆಮನೆಯ ಹೆಂಗಸೊಬ್ಬಳೊಂದಿಗೆ ಉಭಯಕುಶಲೋಪರಿ ನಡೆಸುತ್ತಿದ್ದಳು. ಬಳೆಗಾರನೊಬ್ಬ "ಬಳೆ ಬೇಕೇ, ಬಳೆ? " ಎಂದು ಮನೆ ಮುಂದೆ ಬಂದು ನಿಂತು ಕೇಳಿದ. ನೆರೆಮನೆಯಾಕೆ ಬಳೆ ಕೊಳ್ಳೋಣವೆಂದಳು. ಅಮ್ಮ ಒಳಕ್ಕೆ ಹೋಗಿ ಚಿಲ್ಲರೆ ಹಣ ಹಾಕುವ ಕರಡಿಗೆಯ ಮುಚ್ಚಳ ತೆಗೆದು ನೋಡುವಾಗ ಬಳೆ ಖರೀದಿಗೆ ಬೇಕಾದಷ್ಟು ಹಣವಿತ್ತು. ಸರಿ, ಇಬ್ಬರೂ ಬಳೆ ಖರೀದಿಸಿದರು. ಬಳೆಗಾರನೇ ಇಬ್ಬರ ಕೈಗಳಿಗೂ ಬಳೆಗಳನ್ನು ತೊಡಿಸಿದ. ಸೋಪುನೀರು ಸವರಿದ್ದರಿಂದ ಬಳೆ ತೊಡಿಸುವ ಕೆಲಸ ಬಹು ಸುಲಭ. ನೆರೆಮನೆಯಾಕೆ ತನ್ನ ಪಾಲಿನ ಹಣ ಕೊಟ್ಟು ಮನೆಗೆ ಹೋದಳು.

ಸಂಜೆ ನನ್ನಪ್ಪ ಅಂದಿನ ಕೆಲಸ ಮುಗಿಸಿ ಬಂದರು. ಅವರು ಬಂದ ತಕ್ಷಣ ನನ್ನಮ್ಮ ಅವರಿಗೆ ಕುಡಿಯಲು ಒಂದು ಲೋಟ ನೀರು ತಂದು ಕೊಡುವ ಕ್ರಮ. ಅವಳು ನೀರು ಕೊಡುವಾಗ ಕೈಯಲ್ಲಿ ಧರಿಸಿದ್ದ ಹೊಸ ಬಳೆಗಳು 'ಕಣಕಣ' ಸದ್ದು ಮಾಡಿದವು. ಅಪ್ಪ ಕಣ್ಣರಳಿಸಿ ನೋಡಿದರು, ಅವರಿಗೆ ಆಶ್ಚರ್ಯವಾಯಿತು. ಹಿಂದಿನ ವಾರವಷ್ಟೇ ಬೇರಾವುದೋ

ಕಾರಣಕ್ಕೆ ಅವಳಿಗೆ ಹೊಡೆದಾಗ ಅವಳ ಬಳೆಗಳೆಲ್ಲ ಪುಡಿಯಾದುದು ಅವರಿಗೆ ನೆನಪಿತ್ತು! ಆ ಕೈಗಳಲ್ಲಿ ಹಿತ್ತಾಳೆ ಸರಿಗೆಯ ಒಂದೊಂದು ಬಳೆಗಳಷ್ಟೇ ಉಳಿದಿದ್ದವು. ತಾನು ತಂದುಕೊಡದ ಈ ಹೊಸ ಗಾಜಿನ ಬಳೆಗಳು ಎಲ್ಲಿಂದ ಬಂದವು? ಕಣ್ಣರಳಿಸಿ ವಿಚಾರಿಸಿದಾಗ ಅಮ್ಮ ಹೇಳಿದಳು– "ನೆರೆಮನೆಯ ಸೇಸಿ ಬಂದಿದ್ದಳು. ಅವಳೊಂದಿಗೆ ಮಾತನಾಡುತ್ತಿರುವಾಗ ಬಳೆಗಾರ ಬಂದು ಬಳೆ ಬೇಕೇ ಎಂದು ಕೇಳಿದ. ಅವಳಿಗೆ ಬಳೆ ಬೇಕಿತ್ತು. ನನ್ನ ಕೈಗಳಲ್ಲೂ ಬಳೆ ಇರಲಿಲ್ಲವಲ್ಲಾ. ಇಬ್ಬರೂ ಕೊಳ್ಳೋಣ ಅಂದಳು. ಕೊಂಡೆವು." "ಬಳೆ ತೊಡಿಸಿದ್ದು ಯಾರು?" "ಬಳೆಗಾರನೇ ತೊಡಿಸಿದ." "ಏನು? ಮನೆಯಲ್ಲಿ ಗಂಡಸರಿಲ್ಲದ ವೇಳೆಯಲ್ಲಿ ಗಂಡುಸೊಬ್ಬನನ್ನು ಮನೆಯ ಒಳಕ್ಕೆ ಕರೆಸಿ, ಅವನಿಂದ ಬಳೆ ತೊಡಿಸಿಕೊಂಡೆಯಾ? ಎಷ್ಟು ಸೊಕ್ಕು ನಿನಗೆ?" ಎಂದೆನ್ನುತ್ತಾ ಚಾವಡಿಯಲ್ಲಿದ್ದ ಹಿಡಿಸೂಡಿಯನ್ನು (ತೆಂಗಿನ ಸೋಗೆಯ ಕಡ್ಡಿಗಳಿಂದ ತಯಾರಿಸಿದ ಕಸಬರಿಕೆ) ಕೈಗೆ ತೆಗೆದುಕೊಂಡು ಅದು ಪುಡಿಪುಡಿಯಾಗುವ ವರೆಗೆ ಹೊಡೆದರು. ಅಮ್ಮನ ದೇಹದಿಂದ ರಕ್ತ ಚಿಮ್ಮಿದರೂ ಅಪ್ಪನ ಸಿಟ್ಟು ಕುಗ್ಗಲಿಲ್ಲ. ತನ್ನ ಕೈ ಸೋತ ಬಳಿಕವಷ್ಟೇ, ಅಮ್ಮನನ್ನು ಕಾಲಿನಿಂದ ಒದ್ದು ಹೊಡೆತವನ್ನು ನಿಲ್ಲಿಸಿದರು. ಪಕ್ಕದ ಕೋಣೆಯ ಮೂಲೆಯಲ್ಲಿ ಕುಳಿತು ಪುಸ್ತಕವನ್ನೋದುತ್ತಿದ್ದ ನಾನು ಧಾರಾಳ ಅತ್ತೆ. ಮತ್ತೇನು ಮಾಡಲು ಸಾಧ್ಯ ನನ್ನಿಂದ? ಆ ರುದ್ರ ಭಯಾನಕ ದೃಶ್ಯವನ್ನು ನಾನೆಂದಿಗೂ ಮರೆತಿಲ್ಲ. ಪತಿವ್ರತಾ ಸ್ತ್ರೀಯಾದವಳು ತನ್ನ ಕೈಯನ್ನು ಪರಪುರುಷರಿಗೆ ಹಿಡಿಯಲು ಕೊಡಬಾರದೆಂದು ಶಾಸ್ತ್ರವೇ ಹೇಳಿದೆಯಂತಲ್ಲಾ!?

ನಮ್ಮದು ಕ್ಷತ್ರಿಯ ಜನಾಂಗ, ವಿಜಯನಗರ ಸಾಮ್ರಾಜ್ಯದಲ್ಲಿ ನಮ್ಮ ಪೂರ್ವಜರು ಯೋಧರಾಗಿ ದುಡಿಯುತ್ತಿದ್ದರು. ಆ ಸಾಮ್ರಾಜ್ಯದ ಪತನದ ನಂತರ ನಮ್ಮವರು ಕರಾವಳಿಯ ಉತ್ತರ - ದಕ್ಷಿಣ ಕನ್ನಡ ಜಿಲ್ಲೆಗಳಿಗೆ ವಲಸೆ ಬಂದು ಉದರ ಪೋಷಣೆಗಾಗಿ ಗಾಣದಿಂದ ಎಣ್ಣೆ ತೆಗೆಯುವ ಕಾಯಕ ಮಾಡಿ 'ಗಾಣಿಗ'ರಾದೆವು ಎಂಬುದೊಂದು ಐತಿಹ್ಯ. ಇದನ್ನು ಸಂಪೂರ್ಣ ನಿರಾಕರಿಸುವಂತೆಯೂ ಇಲ್ಲ. ಏಕೆಂದರೆ, ವ್ಯಾಸರಾಜಮಠ ನಮ್ಮ ಗುರುಮಠ, ವೇಣುಗೋಪಾಲಕೃಷ್ಣ ನಮ್ಮ ಕುಲದೇವರು. ಬ್ರಾಹ್ಮಣ ಪುರೋಹಿತರ ಮೂಲಕ ನಾವು ಷೋಡಶ ಕರ್ಮಾಂಗಗಳನ್ನು ಪಾಲಿಸುತ್ತೇವೆ. ನಾವು ಯಜ್ಞೋಪವೀತಧಾರಿಗಳಾಗಿದ್ದೇವೆ. ಹೆಚ್ಚಿನ ವಿವರ ಈ ಲೇಖನಕ್ಕೆ ಅಪ್ರಸ್ತುತ.

ನನ್ನ ಅಪ್ಪ ಕಟ್ಟಾ ಸಂಪ್ರದಾಯವಾದಿಗಳಾಗಿದ್ದರು. ಧರ್ಮ, ದೇವರು, ಪೂಜೆ, ಪುರಸ್ಕಾರ, ಸಂಪ್ರದಾಯ, ಕರ್ಮಾಂಗಗಳ ಪಾಲನೆ– ಇತ್ಯಾದಿಗಳ ಬಗ್ಗೆ ಅವರಿಗೆ ಅಪಾರ ನಿಷ್ಠೆಯಿತ್ತು. ತಾನು ಬದುಕಿರುವ ವರೆಗೂ ತನ್ನ ತಂದೆಯ ಪುಣ್ಯತಿಥಿಯ ದಿನ ಪಿಂಡ ಹಾಕುವುದರ ಮೂಲಕ 'ಪಿತೃ ಶ್ರಾದ್ಧ'ವನ್ನು ಆಚರಿಸುತ್ತಿದ್ದರು. ಮನೆಯಲ್ಲಿ ಮಡಿ-ಮೈಲಿಗೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಅಮ್ಮನಿಗೆ ಮುಟ್ಟಾದಾಗ ಅವಳು ನಾಲ್ಕು ದಿವಸ ಮನೆಯ ಒಳಗೆ ಪ್ರವೇಶಿಸುವಂತಿರಲಿಲ್ಲ. ಅಡುಗೆಯ ಕೆಲಸವನ್ನು ಅಪ್ಪನೇ ನಿರ್ವಹಿಸುತ್ತಿದ್ದರು. ಮಸಾಲೆ ಕಡೆಯುವ ಮತ್ತು ಪಾತ್ರೆ ತೊಳೆಯುವ ಕಾರ್ಯವನ್ನು ಹಿರಿಯ ಮಗನಾದ ನಾನು ಮಾಡುತ್ತಿದ್ದೆ. ಕೆಲವೊಮ್ಮೆ ನನ್ನ ಅಜ್ಜಿ ಬಂದು ಸಹಕರಿಸುತ್ತಿದ್ದರು. ಅಮ್ಮನಿಗೆ ಮುಟ್ಟಾದಾಗ ಪುಟ್ಟ ಮಕ್ಕಳು (ನನ್ನ ಚಿಕ್ಕ ತಮ್ಮಂದಿರು) ಬಟ್ಟೆ ಧರಿಸುವಂತಿರಲಿಲ್ಲ.

ಬಟ್ಟೆ ಧರಿಸಿದ ಮಕ್ಕಳು ಅಮ್ಮನನ್ನು ಮುಟ್ಟಿದ ನಂತರ ಬೇರೆಯವರನ್ನು ಸ್ಪರ್ಶಿಸುವಂತಿರಲಿಲ್ಲ; ಮನೆಯ ಒಳಕ್ಕೆ ಬರುವಂತಿರಲಿಲ್ಲ, ಬಂದರೆ ಮೈಲಿಗೆಯಾಗುತ್ತಿತ್ತು. ಆದುದರಿಂದ ನನ್ನಮ್ಮ ಬಹಿಷ್ಠೆಯಾದಾಗಲೆಲ್ಲ ಚಿಕ್ಕಮಕ್ಕಳಿಗೆ ಬಟ್ಟೆ ಧರಿಸಲು ಬಿಡುತ್ತಿರಲಿಲ್ಲ.

ನನ್ನಪ್ಪ ಅಮ್ಮರಿಗೆ ನಾವು ಮೂರು ಮಂದಿ ಗಂಡುಮಕ್ಕಳಾದ ಬಳಿಕ ನಾಲ್ಕನೆಯದು ಹೆಣ್ಣುಮಗು, ನನ್ನ ಏಕಮಾತ್ರ ತಂಗಿ ಲಲಿತೆ. ಅದೊಂದು ದಿನ ಬಹಿಷ್ಠೆಯಾಗಿದ್ದ ನನ್ನಮ್ಮ ಮನೆಯ ಹೊರಗಡೆ, ದನದ ಕೊಟ್ಟಿಗೆಯ ಬಾಗಿಲ ಬಳಿ ಕುಳಿತಿದ್ದಳು. ಅವಳ ಮಡಿಲಲ್ಲಿ ಅವಳ ಏಕಮಾತ್ರ ಹೆಣ್ಣುಮಗು– ೨ ವರ್ಷ ಪ್ರಾಯದ ಲಲಿತೆ ಇದ್ದಳು. ಅದು ಹೆಣ್ಣುಮಗು ವಾದುದರಿಂದ ಅದರ ಬಟ್ಟೆ ಕಳಚಿರಲಿಲ್ಲ. ಅಷ್ಟರಲ್ಲಿ ಅಪ್ಪ ಅಂದಿನ ಕೆಲಸ ಮುಗಿಸಿ ಮನೆಗೆ ಬಂದದ್ದನ್ನು ಕಂಡ ಮಗು ಲಲಿತೆ ತಾಯಿಯ ಮಡಿಲಿಂದ ಎದ್ದು ತನ್ನ ಪುಟ್ಟ ಕಾಲುಗಳಿಂದ ಅಪ್ಪನ ಬಳಿಗೋಡಿ ನಿಂತುಕೊಂಡಿದ್ದ ಅವರ ಕಾಲುಗಳನ್ನು ತನ್ನ ಪುಟ್ಟ ಕೈಗಳಿಂದ ಬಿಗಿದಪ್ಪಿದಳು. ಮಗುವನ್ನು ಮೇಲೆತ್ತಿದ ಬಳಿಕ ಅಪ್ಪನಿಗೆ ಅರಿವಾಯಿತು– ಮಗು ತನ್ನ ಬಳಿಗೆ ಬಂದುದು ಬಹಿಷ್ಠೆಯಾಗಿರುವ ತಾಯಿಯ ಮಡಿಲಿಂದ, ಮಗುವಿನ ಮೈಯಲ್ಲಿ ಮೈಲಿಗೆಯಾದ ಬಟ್ಟೆಯಿದೆ; ಆ ಮೈಲಿಗೆ ತನ್ನ ಮೈಗೂ ಅಂಟಿತು!... ತಕ್ಷಣ ಮಡದಿಯ ಬಳಿಗೆ ಹೋಗಿ, ''ಬೋಸುಡಿ! ಮಗುವನ್ನೆತ್ತಿಕೊಳ್ಳುವಾಗ ಅದರ ಮೈಯಲ್ಲಿದ್ದ ಬಟ್ಟೆ ಕಳಚಿಡಬೇಕೆಂಬುದು ನಿನಗೆ ತಿಳಿದಿಲ್ಲವೇ?'' ಎಂದು ಘರ್ಜಿಸಿ ಅವಳ ಕೆನ್ನೆಗೆ ಎರಡೇಟು ಬಾರಿಸಿದರು. ಮಗು ಲಲಿತೆ ಭಯಗೊಂಡು ಚಿಟಾರನೆ ಕಿರುಚಿದಳು. ಅಪ್ಪ ಮಗುವಿನ ಬಳಿಗೆ ಬಂದು ಮಗು ತೊಟ್ಟಿದ್ದ ಮೈಲಿಗೆ ಬಟ್ಟೆಯನ್ನು ಕಳಚಿ ಹಿಡಿದುಕೊಂಡು ಬಾವಿಕಟ್ಟೆಗೆ ಹೋದರು. ತನ್ನ ಬಟ್ಟೆಯನ್ನೂ ಕಳಚಿ, ನನ್ನನ್ನು ಕರೆದು ''ಒಂದು ಕೊಡಪಾನ ನೀರು ಸೇದಿ ಕೊಡು!'' ಎಂದು ಆಜ್ಞಾಪಿಸಿದರು. ಮೈಲಿಗೆಯಾಗಿದ್ದ ಅವರು ಬಾವಿಯಿಂದ ನೀರು ಸೇದುವಂತಿರಲಿಲ್ಲ. ನಾನು ಅಪ್ಪನ ಆಜ್ಞೆಯನ್ನು ಪಾಲಿಸಿದೆ. ನಾನು ಸೇದಿಕೊಟ್ಟ ಮೊದಲ ಕೊಡಪಾನ ನೀರಿನಿಂದ ಅವರು ಬಟ್ಟೆ ಒದ್ದೆ ಮಾಡಿದರು. ಇನ್ನೊಂದು ಕೊಡಪಾನ ನೀರನ್ನು ತಲೆಯ ಮೇಲೆ ಹೊಯ್ದುಕೊಂಡು ತನ್ನ ದೇಹವನ್ನು ಒದ್ದೆ ಮಾಡಿಕೊಂಡರು. ಅಲ್ಲಿಗೆ ಅವರ ಮೈಲಿಗೆ ಹೋದಂತಾಯಿತು. ನಂತರ ಅವರೇ ಬಾವಿಯಿಂದ ನೀರು ಸೇದಿ ಸ್ನಾನ ಮಾಡಿದರು. ನಾನು ಅಮ್ಮನ ಬಳಿ ಬಂದು ನೋಡುವಾಗ ಅವಳ ಕೆನ್ನೆ ಬಾತುಹೋಗಿತ್ತು. ಉಭಯ ಕಣ್ಣುಗಳಿಂದ ನೀರಿಳಿಯುತ್ತಿತ್ತು. ಗಂಡನಿಂದ ಏಟು ತಿನ್ನಬೇಕಾದಂತಹ ತಪ್ಪನ್ನು ನನ್ನಮ್ಮ ಮಾಡಿದ್ದಳೇ?–– ಎಂದು ಯೋಚಿಸುತ್ತ ನಾನು ಅಡುಗೆಮನೆಯ ಕಡೆ ಹೋದೆ. ಅಂದಿನ ಅಡುಗೆಗೆ ಮಸಾಲೆ ಕಡೆಯುವ ಕೆಲಸವನ್ನು ನಾನೇ ಮಾಡಬೇಕಾಗಿತ್ತು. ಬೇಯಿಸುವುದು ನನ್ನಪ್ಪ!

ನಾನು ಮಾಡಿದ ತಪ್ಪಿಗೆ ನನ್ನಮ್ಮ ಹೊಡೆತ ತಿನ್ನಬೇಕಾಗಿ ಬಂದ ಘಟನೆಯೊಂದು ನೆನಪಾಗುತ್ತಿದೆ. ಆಗ ನಮ್ಮಪ್ಪ– ಅಮ್ಮರಿಗೆ ನಾವು ಐದು ಮಂದಿ ಮಕ್ಕಳು. (ನಂತರದ ಮೂವರು ಆ ಬಳಿಕ ಹುಟ್ಟಿದ್ದು.) ನನಗೆ ಆಗ ಸುಮಾರು ಹತ್ತು ವರ್ಷ ಪ್ರಾಯ. ೫ ನೆಯ ತರಗತಿಯಲ್ಲಿ ಕಲಿಯುತ್ತಿದ್ದೆ. ಮನೆಯಲ್ಲಿ ಕಿತ್ತು ತಿನ್ನುವ ಬಡತನ. ಆದರೂ ಅಪ್ಪ ದಿನಾಲೂ ಕೆಲಸ ಬಿಟ್ಟು ಸಂಜೆ ಮನೆಗೆ ಬರುವಾಗ ಹೋಟೆಲಿನಿಂದ ತಿಂಡಿ ಖರೀದಿಸಿ ತರುತ್ತಿದ್ದರು. ಚಿಕ್ಕವರು ತಿಂದ ನಂತರ ಉಳಿದರೆ ಮಾತ್ರ ನನಗೆ ದೊರಕುತ್ತಿತ್ತು. ಸಂಜೆ ಶಾಲೆ ಬಿಟ್ಟು ಬಂದ

ಕೂಡಲೇ ಅಮ್ಮ ಮಕ್ಕಳಾದ ನಮಗೆ ತಿನ್ನುವುದಕ್ಕೆ ಹುಣಸೆಹಣ್ಣಿನ ಬೀಜಗಳನ್ನು ಹುರಿದು ಅಥವಾ ಹಲಸಿನ ಹಣ್ಣಿನ ಬೀಜಗಳನ್ನು ಬೇಯಿಸಿ ಕೊಡುತ್ತಿದ್ದಳು. ಆದರೆ ಅವುಗಳಿಗೆ ಹೋಟೆಲು ತಿಂಡಿಯ ರುಚಿ ಇರುತ್ತಿರಲಿಲ್ಲ. ಹಾಗಾಗಿ, ನಾನು ವಾರಕ್ಕೆ ಒಂದೆರಡು ಬಾರಿ ಮನೆಯಿಂದ ಎರಡಾಣೆಯಂತೆ (ಅದು ಆಣೆ-ಪಾವಾಣೆಯ ಕಾಲ) ಕದ್ದುಕೊಂಡು ಹೋಗಿ, ಸಂಜೆ ಶಾಲೆಯಿಂದ ಬರುವಾಗ ಹೋಟೆಲಿನಲ್ಲಿ ತಿಂಡಿ ತಿಂದು ಬರುತ್ತಿದ್ದೆ. ಈ ನನ್ನ ಕಳ್ಳತನ ಅಮ್ಮನಿಗೆ ತಿಳಿಯದಂತೆ ಗುಟ್ಟಾಗಿ ಇಟ್ಟಿದ್ದೆ.

ಅದೊಂದು ದಿನ ಎರಡಾಣೆ ಕದ್ದೊಯ್ದಿದ್ದ ನಾನು ಸಂಜೆ ಶಾಲೆ ಬಿಟ್ಟು ಬರುವಾಗ ನನ್ನ ಮಾಮೂಲಿ ಹೋಟೆಲಿಗೆ ಹೋಗಿ ತಿಂಡಿ ತಿನ್ನುತ್ತಿರುವಾಗ ಅಲ್ಲಿಗೆ ನನ್ನಪ್ಪನ ದರುಶನ ವಾಯಿತು. ಅವರು ದಿನಾಲೂ ಸಂಜೆಯ ಟಿಫಿನು ಮಾಡುವ ಹೋಟೆಲೂ ಅದೇ ಆಗಿತ್ತು. ಅಂದು ಅವರು ಆ ದಿನದ ಕೆಲಸವನ್ನು ಬೇಗನೆ ಮುಗಿಸಿ ಮನೆಗೆ ಹೊರಟಿದ್ದರು. ಅಪ್ಪನನ್ನು ಕಂಡ ನಾನು ಹೆದರಿ ನಡುಗುತ್ತಾ ಅಲ್ಲಿಂದ ಮನೆಗೆ ಓಡಿಬಂದೆ. ಅಮ್ಮನಿಗೆ ವಿಷಯ ತಿಳಿಸಲಿಲ್ಲ. ಲಗುಬಗನೆ ಒಂದು ಪುಸ್ತಕವನ್ನು ತೆಗೆದು ಮೂಲೆಯಲ್ಲಿ ಕುಳಿತು ಓದಲಾರಂಭಿಸಿದೆ. ಅಷ್ಟರಲ್ಲಿ ಉಗ್ರನರಸಿಂಹನಂತೆ ಅಪ್ಪ ಪ್ರವೇಶ ಮಾಡಿದರು. ಬರುವಾಗಲೇ ತಂದಿದ್ದ ಹುಣಸೆಮರದ ನಾಲ್ಕಾರು ಗೆಲ್ಲುಗಳನ್ನು ಕೆಳಕ್ಕೆ ಬಿಸಾಡಿ ಅಮ್ಮನನ್ನು ಕರೆದು "ಆನಂದನಿಗೆ ಹೋಟೆಲಿಗೆ ಹೋಗಲು ಹಣ ಕೊಟ್ಟಿದ್ದೀಯಾ?" ಎಂದು ಕೇಳಿದರು. ಏನನ್ನೂ ಅರಿಯದ ಅಮ್ಮ "ಇಲ್ಲ" ಎಂದು ಸತ್ಯವನ್ನೇ ನುಡಿದಳು. ನನ್ನೆಡೆಗೆ ತಿರುಗಿದ ಅಪ್ಪ ಘರ್ಜಿಸಿ ಕೇಳಿದರು– "ಹೋಟೆಲಿಗೆ ಹೋಗುವುದಕ್ಕೆ ಯಾರು ದುಡ್ಡು ಕೊಟ್ಟರು ನಿಂಗೆ? " ನಾನು ಸತ್ಯವನ್ನೇ ಹೇಳಿದೆ– ಮನೆಯಿಂದ ಕದ್ದು ಒಯ್ದೆನೆಂದು. ಆಗ ಆರಂಭವಾಯಿತು ಪ್ರಹಾರ– ಅವರು ತಂದಿದ್ದ ಹುಣಸೆಮರದ ಅಡರುಗಳೆಲ್ಲಾ ಪುಡಿಪುಡಿಯಾದವು. ನನ್ನ ಮೈಯಿಂದ ಧಾರಾಕಾರ ರಕ್ತ ಹರಿಯಲಾರಂಭಿಸಿತು. ಈ ಅನಿರೀಕ್ಷಿತ ದೌರ್ಜನ್ಯವನ್ನು ನೋಡಲಾಗದ ನನ್ನಮ್ಮ ನನ್ನ ದೇಹದ ಮೇಲೆ ಬೋರಲಾಗಿ ಮಲಗಿ "ದಮ್ಮಯ್ಯ! ಅವನನ್ನು ಕೊಲ್ಲಬೇಡಿ!" ಎಂದು ಬೊಬ್ಬಿಟ್ಟಳು. ಈಗ ಏಟು ತಿನ್ನುವ ಸರದಿ ನನ್ನಮ್ಮನಿಗೆ! ಅವಳ ದೇಹದಿಂದಲೂ ರಕ್ತ ಚಿಮ್ಮಿತು. ಪಕ್ಕದ ಮನೆಯವರು ಬಂದು ತಡೆಯದೇ ಇರುತ್ತಿದ್ದರೆ ಅಂದು ನಮ್ಮಿಬ್ಬರ ಹೆಣಗಳೇ ಉರುಳುತ್ತಿದ್ದವೋ ಏನೊ? ಅಂತೂ ನಾನು ಮಾಡಿದ ತಪ್ಪಿಗೆ ನನ್ನಮ್ಮನೂ ಶಿಕ್ಷೆ ಅನುಭವಿಸುವಂತಾಯಿತು. ಮರುದಿನ ಬೆಳಿಗ್ಗೆ ಅಪ್ಪ ಕೆಲಸಕ್ಕೆ ಹೊರಡುವಾಗ ನನ್ನ ಬಳಿಗೆ ಬಂದು "ನಿನಗೆ ತಿಂಡಿ ತಿನ್ನಲು ಹಣ ಬೇಕಾದರೆ ಕೇಳಿ ಪಡೆದುಕೊಳ್ಳು. ಆದರೆ ಕದಿಯಬೇಡ" ಎಂದು ಹೇಳಿ ಹೊರಟುಹೋದರು. ಅವರ ಗಂಭೀರ ನುಡಿಯ ಹಿಂದೆ ಪ್ರೀತಿಯ ಛಾಯೆ ಕಾಣುತ್ತಿತ್ತು.

ನನ್ನಪ್ಪ ನಿಜವಾಗಿಯೂ ಕೆಟ್ಟವರಲ್ಲ. ಊರಿಗೆ ಊರೇ ಅವರನ್ನು ಮಹಾ ಸಜ್ಜನನೆಂದು ಹೊಗಳುತ್ತಿತ್ತು. ಅವರು ತನ್ನ ಹೆಂಡತಿ ಮಕ್ಕಳನ್ನು ತುಂಬ ಪ್ರೀತಿಸುತ್ತಿದ್ದರು. ಯಾವುದಕ್ಕೂ ಕೊರತೆಯಾಗದಂತೆ ನೋಡಿಕೊಳ್ಳುತ್ತಿದ್ದರು. ಕೋಪ ಬಂದಾಗ ಮಾತ್ರ ನರಸಿಂಹಾವತಾರದ ಉಗ್ರರೂಪ ತಾಳುತ್ತಿದ್ದರು. ಪ್ರಾಯಶಃ ಅವರ ಆ ಶೀಘ್ರ ಕೋಪದಿಂದಾಗಿಯೇ ಮಕ್ಕಳಾದ ನಾವು ಸಜ್ಜನರಾಗಿ ರೂಪುಗೊಳ್ಳುವಂತಾಯಿತು. ಆದರೆ ೪೨ ರ ಯೌವನದಲ್ಲೇ ಅವರು ಇಹಲೋಕ ತ್ಯಜಿಸಿದರು.

ನನ್ನಮ್ಮ ತಮ್ಮ ೧೨ ನೆಯ ವಯಸ್ಸಿನಲ್ಲಿ ಮದುವೆಯಾಗಿ, ಕೇವಲ ೨೦ ವರ್ಷಗಳ ದಾಂಪತ್ಯದಿಂದ ಎಂಟು ಮಕ್ಕಳ ತಾಯಿಯಾಗಿ, ೩೨ ರ ಹದಿಹರೆಯದಲ್ಲೇ ವಿಧವೆಯಾಗಿ, ತನ್ನ ಮಕ್ಕಳೇ ತನ್ನ ಸಂಪತ್ತೆಂದು ಪರಿಭಾವಿಸಿ, ಓರ್ವ ಆದರ್ಶ ನಾರಿಯಾಗಿ ಬದುಕಿ, ೨೪ - ೩ - ೨೦೦೩ ರಂದು ತನ್ನ ೮೩ ನೆಯ ವಯಸ್ಸಿನಲ್ಲಿ ದೈವಾಧೀನರಾದರು. ಗಂಡ ಬದುಕಿದ್ದಷ್ಟು ಕಾಲ ಗಂಡನ ಕೋಪಾಗ್ನಿಯಲ್ಲಿ ತನ್ನ ಬದುಕನ್ನು ದಹಿಸಿಕೊಂಡರು. ಗಂಡನ ನಿಧನಾನಂತರ ಕಡುಬಡತನದ ದಾವಾಗ್ನಿಯಲ್ಲಿ ಬೆಂದರು. ಆದರೆ ಬದುಕಿನ ಉತ್ತರಾರ್ಧದಲ್ಲಿ ಸುಖದ ಸವಿಯನ್ನೂ ಕಂಡರು. ನನ್ನ ಸಹೋದರರು ನನ್ನನ್ನು 'ಜ್ಯೇಷ್ಠಭ್ರಾತೃ ಪಿತೃ ಸಮಾನ' ಎಂದು ಬಗೆದು ನನಗೆ ಅನುವರ್ತಿಗಳಾಗಿದ್ದುದರಿಂದ ಅವಿಭಕ್ತ ಕುಟುಂಬದ ಶಕ್ತಿಯೇನೆಂದು ಸಮಾಜಕ್ಕೆ ತೋರಿಸಲು ನಮಗೆ ಸಾಧ್ಯವಾಯಿತು. ಕಲ್ಲುದೇವರನ್ನು ಪೂಜಿಸುವ ಕಾಲದಲ್ಲಿ ಜೀವಂತ ತಾಯಿ ದೇವರನ್ನು ಪೂಜಿಸಿ ಧನ್ಯತೆ ಪಡೆಯುವ ಭಾಗ್ಯ ಮಕ್ಕಳಾದ ನಮಗೆ ದೊರಕಿತು!

ನನ್ನಮ್ಮ ತನ್ನ ಬದುಕಿನಲ್ಲಿ ಅನುಭವಿಸಿದ ಕಷ್ಟ-ಕಾರ್ಪಣ್ಯಗಳು ಅಪಾರ. ಅವೆಲ್ಲವನ್ನೂ ಇಲ್ಲಿ ದಾಖಲಿಸುವುದು ಸಾಧ್ಯವಿಲ್ಲ, ಅದು ನನ್ನ ಉದ್ದೇಶವೂ ಅಲ್ಲ. ನನ್ನ ಹೃದಯದಲ್ಲಿ ಚಿರಸ್ಥಾಯಿಯಾಗಿ ಉಳಿದಿರುವ ಅವಳನ್ನು ಸ್ಮರಿಸುವುದಕ್ಕಾಗಿ ಈ ಲೇಖನ. ಮಾತೃದೇವೋಭವ!

● ●

ಕೆ. ಆನಂದ ಗಾಣಿಗ : ರಂಗಭೂಮಿ, ಕುತ್ಪಾಡಿ, ಉದ್ಯಾವರ ಮಾರ್ಗ, ಉಡುಪಿ - ೫೭೪ ೧೧೮

*'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ : ಕೃತಜ್ಞತೆ - ೧೬*

## ನನ್ನ ಅಪ್ಪ, ನನ್ನ ಅಮ್ಮ

**ಹಾಲಾಡಿ ಮಾರುತಿರಾವ್**

ನನ್ನ ಅಪ್ಪ ಹಾಲಾಡಿ ವಿಠಲರಾಯರು ಹೆಸರಾಂತ ವೈದ್ಯರೋ, ಗಣ್ಯ ವ್ಯಕ್ತಿಗಳೋ ಆಗಿರಲಿಲ್ಲ. ಕೇವಲ ಮಿಡಲ್ ಸ್ಕೂಲ್ ಮೇಷ್ಟ್ರಾಗಿ ಶಿರಾಳಕೊಪ್ಪ, ಭೀಮನಕೋಣೆ, ಸೊರಬ, ಆನವಟ್ಟಿ, ಸಾಗರ –ಹೀಗೆ ಶಿವಮೊಗ್ಗ ಜಿಲ್ಲೆಯೊಳಗೇ ವರ್ಗವಾದ ಕಡೆ ಬಿಡಾರ ಹೂಡಿ ನಿವೃತ್ತಿಯಾದೊಡನೆ 'ಬಿಡ್ತು' ಎಂದವರು. ಅವರ ಶಿಷ್ಯರಲ್ಲಿ ಗಣ್ಯರಾದವರೆಂದರೆ ನನಗೆ ಗೊತ್ತಿದ್ದಂತೆ ಹೆಗ್ಗೋಡಿನ ಸುಬ್ಬಣ್ಣ.

ನನಗೆ, ನನ್ನ ಅಪ್ಪ ಎಂದು ನನ್ನ ಮನಸ್ಸಿನಲ್ಲಿ upper most ಆಗಿರಲು, ಅವರ ಪ್ರೀತಿಯೊಂದೇ ಕಾರಣವಲ್ಲ, ಅವರ ಮುಂದಾಲೋಚನೆ ಮತ್ತು ತ್ಯಾಗ. ನಾನು ಸಾಗರದಲ್ಲಿ SSLC ಪಾಸು ಮಾಡಿದಾಗ ನನ್ನ ತಾಯಿಯ ಸಂಬಂಧಿಯೊಬ್ಬರಿಂದ ಮುಂಬಯಿಯಲ್ಲಿ ನನಗೆ ಕೆಲಸ ಸಿಗುವಂತಿತ್ತು. ನನ್ನ ಅಪ್ಪನಿಗೆ ನಾನು ಹಿರೇಮಗ. ಮೊದಲೊಂದು ಮಗುವಾಗಿ ತೀರಿಕೊಂಡಿತ್ತಂತೆ. ಹದಿನೈದು ವರ್ಷಕ್ಕೇ ಮಗು ಹೆತ್ತರೆ ಮತ್ತೇನಾದೀತು?! ಒಂದು ಮಗು ಸತ್ತ ನಂತರ ಹುಟ್ಟುವ ಮಗುವೇ ಭಾಗ್ಯಶಾಲಿ. ಏಕೆಂದರೆ ಇದಕ್ಕೂ ಏನಾದರೂ ಆದೀತೆಂಬ ಭಯದಿಂದ, ಪ್ರೀತಿಯಿಂದ, ನಾಜೂಕಾಗಿ ಎಲ್ಲರೂ

ನೋಡಿಕೊಳ್ಳುತ್ತಾರೆ. ಆ ಭಾಗ್ಯ ನನಗಿತ್ತು. ಮನೆಯಲ್ಲಿ ಬಡತನವಿದ್ದರೂ ನನಗೆ ಹಾಲು ತುಪ್ಪದಲ್ಲೇ ಅಪ್ಪ, ಅಮ್ಮ ನನ್ನನ್ನು ಬೆಳೆಸಿದ್ದರು. ಅಮ್ಮನ ಗರ್ಭದಲ್ಲಿರುವಾಗ ಆಂಜನೇಯ ದೇವರ ಉತ್ಸವ ಮನೆ ಬಾಗಿಲಿಗೆ ಬಂದಾಗ ಕಾಯಿ ಒಡೆದ ರೀತಿ ನೋಡಿ ಗಂಡುಮಗು ಜನಿಸುವುದೆಂದೂ ಅದಕ್ಕೆ 'ಮಾರುತಿ' ಎಂಬ ಹೆಸರಿಡಬೇಕೆಂದೂ ಪಲ್ಲಕ್ಕಿಯ ಶುಭವಾಣಿ ಇತ್ತಂತೆ! ಆ ಹೆಸರಿಟ್ಟದ್ದಕ್ಕೋ ಏನೋ ನಾನು ಬಾಲ್ಯದಲ್ಲಿ ಮಾಡಿದ ಚೇಷ್ಟೆ ಒಂದೆರಡಲ್ಲ. ಯಾರು ಬಂದು ನನ್ನ ಮೇಲೆ ದೂರು ಹೇಳಿದರೂ ನನ್ನ ಅಪ್ಪ ನನಗೆ ಒಂದು ದಿನವೂ ಹೊಡೆದಿಲ್ಲ. ತುಂಟತನ ಬುದ್ಧಿವಂತರಾಗುವ ಲಕ್ಷಣ ಎಂದು ಬಂದವರಿಗೆ ಸಮಜಾಯಿಷಿ ಮಾಡಿ ಕಳಿಸುತ್ತಿದ್ದರಂತೆ. ನಾನು ಬುದ್ಧಿವಂತನಾಗಿ ಚೆನ್ನಾಗಿ ಓದಿ ದೊಡ್ಡ ಹುದ್ದೆಯಲ್ಲಿ ಇರಬೇಕೆಂದು ನನ್ನ ಅಪ್ಪ ಕನಸು ಕಾಣುತ್ತಿದ್ದರು. ಅವರು ಶಿಕ್ಷಕ ವೃತ್ತಿಯಲ್ಲಿದ್ದುದರಿಂದ ಅವರ ದೃಷ್ಟಿಯಲ್ಲಿ ದೊಡ್ಡ ಹುದ್ದೆ ಎಂದರೆ ಕಾಲೇಜಿನ ಅಧ್ಯಾಪಕ!

ನನ್ನ ಅಪ್ಪನಿಗೆ ನನ್ನ ನಂತರ, ನಾನು SSLC ಮಾಡಿದಾಗ, ಐದು ಜನ ಹೆಣ್ಮಕ್ಕಳು, ಒಂದಾದ ಮೇಲೊಂದು. ನಾನು ಕೆಲಸಕ್ಕೆ ಸೇರಿದರೆ ಸಂಸಾರಕ್ಕೆ ಆಧಾರ ಎಂದು ನಮ್ಮಮ್ಮ ನೆನೆಸಿದರೆ, ನನ್ನಪ್ಪನ ವಿಚಾರವೇ ಬೇರೆ ಆಗಿತ್ತು. ಸಾಗರದಲ್ಲಿ ಆಗ ಕಾಲೇಜು ಇರಲಿಲ್ಲ. ಶಿವಮೊಗ್ಗಕ್ಕೋ ಬೆಂಗಳೂರಿಗೋ ಹೋಗಬೇಕಿತ್ತು. ಹಾಗೆ ಹೊರಗೆ ಕಳಿಸಿ ಓದಿಸುವಷ್ಟು ನನ್ನಪ್ಪನಿಗೆ ಸಾಧ್ಯವಿಲ್ಲವಾಗಿತ್ತು. ಆದರೆ ನಾನು ಉಚ್ಚ ಶಿಕ್ಷಣ ಪಡೆಯಬೇಕೆಂಬ ಆಸೆ ಅವರಿಗೆ. ಆಗ ನನ್ನನ್ನು ಕರೆದು "ನನ್ನ ಬಡತನದಲ್ಲಿ ನಿನಗೆ ಓದಿಸಲಿಕ್ಕೆ ನನಗೆ ಶಕ್ತಿ ಇಲ್ಲ. ಬೆಂಗಳೂರಿಗೆ ಹೋಗಿ ಯಾರ ಕೈಕಾಲಾದರೂ ಕಟ್ಟಿಕೊಂಡು ಓದು ಮುಂದುವರಿಸಿದರೆ ನನಗೆ ತೃಪ್ತಿ" ಎಂದು ನನಗೆ ಸವಾಲೆಸೆದರು. ಅದರಂತೆ ನಾನು ಮಾಡಿದೆ. ಹಲವಾರು ಮನೆಗಳಲ್ಲಿ ನಾನು ಅನ್ನಕ್ಕಾಗಿ ಅಲೆಯಬೇಕಾಯ್ತು. ಅಂಥಾ ಮನೆಗಳಲ್ಲಿ ವಿಖ್ಯಾತ ಡಿ. ಎಲ್. ನರಸಿಂಹಾಚಾರ್ಯರು ಚಾಮರಾಜಪೇಟೆಯಲ್ಲಿರುವಾಗ ಒಂದು ವರ್ಷ ಅವರ ಮನೆಯಲ್ಲಿ ಇದ್ದು ಓದಿದ್ದೂ ಉಂಟು! ಈ ಸಂದರ್ಭದಲ್ಲಿ ನನಗೆ ನೆರವಾದವರು ಒಬ್ಬಿಬ್ಬರಲ್ಲ.

ನಾನು B.A. (Hons) ಮುಗಿಸಿಕೊಂಡು ತಮಿಳುನಾಡಿನ ವಿರುಧುನಗರಕ್ಕೆ (ಮಧುರೆ ಹತ್ತಿರದ, ಕಾಮರಾಜರ ಊರು) ಹೋಗಿ ಅಲ್ಲಿಯ ಕಾಲೇಜಲ್ಲಿ ಇಂಗ್ಲಿಷ್ ಅಧ್ಯಾಪಕನಾಗಿ ಹೋದಾಗ ನನ್ನಪ್ಪನ ಒಂದು ದೊಡ್ಡ ಗುರಿ ನಾನು ಸಾಧಿಸಿದಂತೆ ಆಗಿತ್ತು. ಅಷ್ಟರಲ್ಲಿ ಅವರು ಇನ್ನೂ ಮೂರು ಮಕ್ಕಳ ತಂದೆಯಾದರು. ನಾನೂ ಮದುವೆಯಾಗಿ ಒಬ್ಬ ಮಗನ ತಂದೆಯಾಗಿದ್ದೆ. ಎಲ್ಲರೂ ನನ್ನ ಆಶ್ರಯದಲ್ಲೇ ಇದ್ದರು. ನಾನೂ ಮಕ್ಕಳ ವಿಷಯದಲ್ಲಿ ಚೌಕಾಶಿ ಮಾಡಲು ಹೋಗಿ ಸೋತಿದ್ದೆ! ನನಗೂ ಏಳು ಮಕ್ಕಳು. ಇವರೆಲ್ಲರ ಪೋಷಣೆ, ಶಿಕ್ಷಣ, ಮದುವೆ ನನ್ನೊಬ್ಬನ ದುಡಿಮೆಯಿಂದಲೇ ಸಾಗಬೇಕಿತ್ತು. ನನ್ನಪ್ಪ ತಮಗೆ ಸಿಗುತ್ತಿದ್ದ ಪೆನ್ಶನ್ ತಂದು ನನ್ನ ಹೆಂಡತಿಯ ಕೈಯಲ್ಲಿ ಹಾಕಿ ನಿರ್ವಂಚನೆಯಿಂದ ಇರುತ್ತಿದ್ದರು. ಅದಕ್ಕೂ ಮೊದಲು ಅಮ್ಮ ನೋಡಿಕೊಳ್ಳುತ್ತಿದ್ದಳು. ಲೌಕಿಕ ವ್ಯವಹಾರ ಜ್ಞಾನವೇ ಅವರಿಗಿರಲಿಲ್ಲ. ಅವರಿಗದು ಬೇಕೂ ಆಗಿರಲಿಲ್ಲ.

ಅಪ್ಪ ಆಕೃತಿಯಲ್ಲಿ ಕುಳ್ಳ, ನಡೆಯಲ್ಲಿ ಕುಂಟ, ಆಗಿದ್ದರೂ ಅವರ ದೇಹಾರೋಗ್ಯ ಚೆನ್ನಾಗಿತ್ತು. ಒಂದು ದಿನ ಕಾಯಿಲೆ ಬಿದ್ದವರಲ್ಲ. ಒಂದೂ ಹಲ್ಲು ಬಿದ್ದಿರಲಿಲ್ಲ. ಅವರು

ಎಷ್ಟು ಗಟ್ಟಿಮುಟ್ಟಾಗಿದ್ದರು ಎಂದರೆ ನಾನು ಚಿಕ್ಕವನಿರುವಾಗ ಒಮ್ಮೆ ಸಾಗರದಿಂದ ಗೇರುಸೊಪ್ಪೆ ತನಕ ಅಂದರೆ ೩೬ ಮೈಲು ನನ್ನನ್ನೂ ಕರೆದುಕೊಂಡು ಕಾಲ್ನಡಿಗೆಯಲ್ಲೇ ಹೋಗಿದ್ದರು —ಜೋಗದ ಜಿಗಣೆಯ ಜಂಗಲ್ ದಾಟಿಕೊಂಡು. ಅಷ್ಟೊತ್ತಿಗೆ ಅವರು ಸಿಗರೇಟು ಸೇದುವುದು ಬಿಟ್ಟು, ಎಲೆ ಅಡಿಕೆ ತಂಬಾಕಿಗೆ ಅಂಟಿಕೊಂಡಿದ್ದರು. ಜಿಗಣೆ ಕಾಲೇರಿ ಕಚ್ಚದಂತೆ ಕಾಲಿಗೆ ಸುಣ್ಣ ಹಚ್ಚಿಕೊಂಡು ಮುಂಜಾನೆಯಿಂದ ಸಂಜೆ ವರೆಗೆ ನಡೆದು ಹೋದದ್ದು, ನಾನು NCC ಆಫೀಸರ್ ಟ್ರೇನಿಂಗ್ ಪಿರಿಯಡ್‌ನಲ್ಲಿ ರೂಟ್ ಮಾರ್ಚ್ ಮಾಡಲು ಸುಲಭವಾಗಿಸಿತ್ತು. ಈಗ ಅದನ್ನೆಲ್ಲಾ ನೆನೆಸಿಕೊಂಡಾಗ, ಇವತ್ತಿನ ನನ್ನ ಮೊಮ್ಮಕ್ಕಳ ನಾಜೂಕುತನ, ಸೋಮಾರಿತನ ಕಂಡು ನಾವು ಹುಟ್ಟುವಾಗ ಬಡತನದಲ್ಲಿ ಹುಟ್ಟಿದರೇ ಹೆಚ್ಚು ಶ್ರೇಯಸ್ಸೆಂದು ತೋರುತ್ತದೆ. ಏಣಿ ಹತ್ತಿ ಹೋದಾಗಲೇ ಮೇಲೆ ಮುಟ್ಟಿದ ಸುಖ ನಮಗೆ ದಕ್ಕುತ್ತದೆ.

ನನ್ನ ಬಾಲ್ಯ ಸಾಗರದ ಸಮೀಪದ ಭೀಮನಕೋಣೆಯಿಂದ ಪ್ರಾರಂಭವಾಯ್ತು. ಹಾಲಿಗಾಗಿ ಎಮ್ಮೆ ಸಾಕಿದ್ದರು ನನ್ನ ಅಪ್ಪ, ಅಮ್ಮ. ಅಮ್ಮ ಹಾಲು ಕರೆಯುತ್ತಿದ್ದರು. ಆಳವಾದ ಬಾವಿಯಿಂದ ನೀರು ಸೇದುವುದು, ಕಾಡಿಗೆ ಹೋಗಿ ಕಟ್ಟಿಗೆ ಒಡೆದು ತರುವುದು, ಹುಲ್ಲು ಕೊಯ್ದು ತರುವುದು, ಮರ ಹತ್ತಿ ಹಣ್ಣು ಹಂಪಲು ತರುವುದು, ದೂರವೆಂದು ಲೆಕ್ಕಿಸದೆ, ಹುಲಿಗೆ ಹೆದರದೆ ದೂರ ದೂರ ನಡೆದುಕೊಂಡು ಹೋಗುವುದು —ಇವುಗಳ ಫಲ ನನಗೀಗ ದಕ್ಕಿದೆ. ವಯಸ್ಸು ೭೪ ಆದರೂ ಹುರುಪು ೨೪ ರದ್ದು!

ನನ್ನಪ್ಪನಿಗೆ ತಿನ್ನಲು ಅದೇ ಬೇಕು, ಇದೇ ಬೇಕು ಎಂಬ ಆಯ್ಕೆಗಳಿರಲಿಲ್ಲ. ಸಂತೆ ದಿನಗಳಲ್ಲಿ ಪಂಚೆಯಲ್ಲಿ ಮಂಡಕ್ಕಿ ಅಥವಾ ಶೇಂಗಾ ತಂದು ತಾವೂ ತಿಂದು, ಮಕ್ಕಳಿಗೂ ತಿನ್ನಿಸಿ ತೃಪ್ತಿಪಡುತ್ತಿದ್ದರು. ನನ್ನ ಅಮ್ಮ ಕರಾವಳಿಯ ಮುರ್ಡೇಶ್ವರದಿಂದ ಬಂದವರು. ಅಲ್ಲಿಯ ಮೀನಿನ ಅಡಿಗೆ ನನ್ನಪ್ಪನಿಗೆ ತುಂಬಾ ಹಿಡಿಸುತ್ತಿತ್ತು. ಹಾಗಾಗಿ ರಜೆ ಬಿದ್ದಾಗ ಕರಾವಳಿ ಕಡೆ ಇರುವ ನೆಂಟರಿಷ್ಟರ ಮನೆಗೆ ಹೋಗಲು ಅವರು ಬಯಸುತ್ತಿದ್ದರು. ಸಾಗರದ ಸಂತೆಯಲ್ಲಿ ಒಣ ಮೀನು ಹುಡುಕಿ ತಂದು ಕದ್ದುಮುಚ್ಚಿ ಅದರ ಸಾರು ಮಾಡಿಸಿ ಉಣ್ಣುತ್ತಿದ್ದರು. ಸಾರಸ್ವತ ಬ್ರಾಹ್ಮಣರಾದ ನಾವು ಕರಾವಳಿ ಪ್ರದೇಶದಲ್ಲಿ ರಾಜಾರೋಷವಾಗಿ ಮೀನು ತಿಂದರೂ, ಸಾಗರದಂಥ ಬ್ರಾಹ್ಮಣರ ಪಠಾರಗಳಲ್ಲಿ ಮೀನು ತಿನ್ನುವುದಿರಲಿ, ನಮ್ಮ ತಾಯ್ನುಡಿ ಕೊಂಕಣಿ ಭಾಷೆ ಕೂಡಾ ಮನೆ ಹೊರಗೆ ಬಳಸುತ್ತಿರಲಿಲ್ಲ. ನನ್ನ ಅಪ್ಪ, ಚಿಕ್ಕಪ್ಪ ಎಲ್ಲಾ ಮನೆಯಲ್ಲಿ ಕೂಡಾ ಕನ್ನಡದಲ್ಲೇ ಮಾತಾಡಿಕೊಳ್ಳುತ್ತಿದ್ದರು. ಅಲೆಮಾರಿಯಾಗಿದ್ದ ನಾವು ಹೋದ ಕಡೆ ಹೊಂದಿಕೊಂಡು ಬಾಳುವುದನ್ನು ಕಲಿತಿದ್ದೆವು. ಇದರಿಂದಾಗಿ ನಾವು ತಮಿಳುನಾಡಿಗೆ ಹೋದಾಗ ತಮಿಳು ಕಲಿತು ಅಲ್ಲಿಯವರೊಡನೆ ಹೊಂದಿಕೊಂಡು ಬಾಳುವುದು ಕಷ್ಟವೆನಿಸಲಿಲ್ಲ. ಆದ್ರೂ ನನ್ನಪ್ಪನಿಗೆ ತಮಿಳು ಹಿಡಿಸುತ್ತಿರಲಿಲ್ಲ. "ಎಂಡ್ರ ಪಂಡ್ರ" ಎಂದು ಚೇಷ್ಟೆ ಮಾಡುತ್ತಿದ್ದರು.

ಇಸ್ಪೀಟು ಆಟವೊಂದು ಬಿಟ್ಟರೆ —ಅನಂತರ ಪಗಡೆ ಆಟವೊಂದು ಬಿಟ್ಟರೆ— ಬೇರೆ ಆಟ ಅವರಿಗೆ ಗೊತ್ತಿಲ್ಲದಿದ್ದರೂ ಕ್ರಿಕೆಟ್ ಬಗ್ಗೆ ತಿಳಿದುಕೊಂಡಿದ್ದರು. ಹೊರದೇಶಗಳೊಡನೆ ಭಾರತದ ಟೀಮು ಕ್ರಿಕೆಟ್ ಆಡುವಾಗ ರೇಡಿಯೋ ಕಾಮೆಂಟರಿ ಬಹಳ ಉತ್ಸಾಹದಿಂದ ಕೇಳುತ್ತಿದ್ದರು. ಭಾರತದ ಟೀಮು ಸೋಲುವಾಗ ಅವರು ಚಡಪಡಿಸುವುದು, ಸಿಟ್ಟಾಗುವುದು

ನಮಗೆ ನೋಡಲು ಮೋಜೆನಿಸುತ್ತಿತ್ತು. ಸೋಲನ್ನು ಸಹಿಸಿಕೊಳ್ಳುವುದು ಅವರಿಗೆ ಸುತರಾಂ ಹಿಡಿಸುತ್ತಿರಲಿಲ್ಲ. ಆಗ ಅವರ ಕೂಗಾಟ ಅವರ ಅಸಹನೀಯ ವೇದನೆಯನ್ನು ವ್ಯಕ್ತಪಡಿಸುತ್ತಿತ್ತು. ಪಗಡೆಯಾಟದಲ್ಲೂ ಅಷ್ಟೆ. ಅಪ್ಪ ಅಮ್ಮ ಒಂದು ಟೀಮು, ನಾನು ಮತ್ತು ನನ್ನ ಹೆಂಡತಿ ಒಂದು ಟೀಮು. ನನ್ನ ಹೆಂಡತಿ ನಾಲಿಗೆಯ ಮೇಲೆ ಮಚ್ಚೆ ಇತ್ತು. ಅವಳು ಹೇಳಿದ ಗರ ಬೀಳುತ್ತಿತ್ತು. ಹೀಗಾಗಿ ನಾವೇ ಗೆಲ್ಲುತ್ತಿದ್ದೆವು. ಒಮ್ಮೆ ಸಿಟ್ಟಿನಿಂದ ಅವರು ನೆಲಕ್ಕೆ ಅಪ್ಪಳಿಸಿದಂತಹ ದಾಳ ಒಡೆದು ಚೂರುಚೂರಾಗಿತ್ತು. ಬಹಳ ಸಿಟ್ಟಿತ್ತು ಅವರಿಗೆ. ಆದರೆ ಅದನ್ನು ಅಮ್ಮನ ಹೊರತಾಗಿ ಬೇರೆಯವರ ಮೇಲೆ ತೋರಿಸುತ್ತಿರಲಿಲ್ಲ.

ನನ್ನ ಮಕ್ಕಳಲ್ಲಿ ಒಂದು ಸೆಟ್ಟು ಅವಳಿ ಜವಳಿ ಇದ್ದಾರೆ. ಅವರಿನ್ನೂ ಹೈಸ್ಕೂಲಿನಲ್ಲಿ ಓದುವಾಗಲೇ –ಅಂದ್ರೆ ಅವರ ೭೬ ನೇ ವಯಸ್ಸಿನಲ್ಲಿ– ಅವರಿಗೆ ಪೆರಾಲಿಟಿಕ್ ಸ್ಟ್ರೋಕ್ ಬಂದು ಅಕಸ್ಮಾತ್ತಾಗಿ ತೀರಿಕೊಂಡರು. ಅವರು ಮೊಮ್ಮಕ್ಕಳ ಮೇಲಿಟ್ಟಿದ್ದ ಪ್ರೀತಿ –ಅದರಲ್ಲೂ ಈ ಅವಳಿ ಮಕ್ಕಳ ಮೇಲಿಟ್ಟಿದ್ದ ಪ್ರೀತಿ ಅಷ್ಟಿಷ್ಟಲ್ಲ. ಅವರಿಗೆ ತಿನ್ನಲಿಕ್ಕೆ ಕೊಟ್ಟ ಸಿಹಿ ತಿಂಡಿ –ಲಾಡು; ಹಲ್ವಾ– ಏನೇ ಇರಲಿ ಅದನ್ನು ಮುಚ್ಚಿಕೊಂಡು ೫ - ೬ ಕಿ.ಮಿ. ದೂರ ಇರುವ ಶಾಲೆಗೆ ಹೋಗಿ ಊಟಕ್ಕೆ ಮಕ್ಕಳಿಗೆ ಬಿಡುವ ತನಕ ಕಾದು, ಅವರಿಗೆ ತಿನ್ನಿಸಿ ಅವರು ತಿಂದದ್ದನ್ನು ನೋಡಿ ಸಂತೋಷಪಟ್ಟುಕೊಂಡು, ಏನೋ ವಿಜಯ ಸಾಧಿಸಿ ಬಂದಂತೆ ಇರುತ್ತಿದ್ದರು. ಎಲ್ಲೆ ಮೀರಿ ಪ್ರೀತಿಸಲು ಸಾಧ್ಯವಿದೆ ಎಂದು ನಾನು ನೋಡಿ ಕಲಿತದ್ದು ಅವರಿಂದಲೇ!

● ● ಹಾಲಾಡಿ ಮಾರುತಿರಾವ್ : ೧೮೦/೨೮, ಇಂಚರ, ೩ನೇ ಕ್ರಾಸ್, ೧೫ನೇ ಮೇನ್, ಅಂಬೇಡ್ಕರ್ ಕಾಲೇಜು ಬೀದಿ, ಕುರುಬರಹಳ್ಳಿ, ಜೆ. ಸಿ. ನಗರ, ಮಹಾಲಕ್ಷ್ಮಿಪುರ, ಬೆಂಗಳೂರು - ೫೬೦ ೦೮೬

## ಗೀತ ದಶಮಿ

ಮ. ಸು. ಕೃಷ್ಣಮೂರ್ತಿ

### ೧. ಬಳೆಗಾರ

ಬಳೆಗಾರ ಬಂದಿಹ ತೊಟ್ಟುಕೊಂಬ ಬಾರೆ ಬಳೆಯ,
ಗಂಡನಲ್ಲದಿದ್ದರೂ ಅವ ಕೈ ಹಿಡಿವ ಗೆಳೆಯ!
ಬಳೆ ಬರಿ ಬಳೆಯಲ್ಲವೆ ಮಂಗಳದ ಮೂಲ ಕಾಣೆ!
ಅದರ ಸದ್ದು ಪ್ರೇಮ ಪೂಜೆಯ ಘಂಟಾನಾದ ಕಾಣೆ!
ಕಾಮನ ಬಿಲ್ಲ ಬಗ್ಗಿಸಿ ಬಳೆ ಮಾಡಿ ತಂದಿಹನೆ!
ರತಿದೇವಿ ತೊಡುವ ಬಿಂಕದ ಬಳೆ ತಂದಿಹನೆ!
ಸೀತೆಗೆ ಮೋಡಿ ತೊಡಿಸಿದ ಮಿಂಚಿನ ಬಳೆಯಿಹುದೆ!
ಸತಿ ಸಾವಿತ್ರಿ ತೊಟ್ಟ ನೇಮ ವ್ರತದ ಬಳೆಯಿಹುದೆ!
ಗೌರಮ್ಮ ತೊಡುವ ಬಿಚ್ಚೋಲೆ ಬಳೆಯ ನೋಡಿ!
ಶಕುಂತಲೆ ತೊಟ್ಟ ಬಳ್ಳಿ ಬಳೆಯ ನೋಡಿ!
ದ್ರೌಪದಿ ತೊಟ್ಟ ಪಡವಿನ ಬಿಗಿ ಬಳೆಯ ಕೊಳ್ಳಿ!
ನಾರದ ತೊಟ್ಟಿಹ ಒಂಟಿ ಬಳೆಯ ಕೊಳ್ಳಿ!

ತಿನ್ನಲಾಗದ ದಪ್ಪ ಕೋಡುಬಳೆಯ ಕೊಳ್ಳಿ!
ಚಿತ್ರಾಂಗದೆ ತೊಟ್ಟ ವಿಚಿತ್ರ ಬಳೆಯ ಕೊಳ್ಳಿ!
ಹಾಳು ಹಣೆ, ಬೋಳು ತೋಳು ನವಯುಗದ ಲಾಂಛನ!
ಹಳೆಯ, ಹೊಸತು ಬಳೆಯ ತೊಡುವರಾರಿಲ್ಲ ಕಣ!
ಪಂಜು ಹಿಡಿದು ಹುಡುಕಿದರೂ ಕಾಣ ಬಳೆಗಾರ!
ಬಳೆಗಾರ ಮಾರುತಿಹನಿಂದು ಶುಂಠಿ ಬಿಳಿಗಾರ!

## ೨. ಮಿಡತೆ

ಮಿಡತೆ, ಮಿಡತೆ,
ನೀ ವರಾಹಮಿಹಿರನ ಕಣ್ಣಿಗೆ ಬಿದ್ದ ಮೊದಲ ಕನ್ನಡಿಗ,
ಥೋರೋವಿನಾಶ್ರಮದ ಮಾನ್ಯ ನಾಡಿಗ!
ನಿನ್ನ ಹಾಡು ಯಂತ್ರದ ಮುಂದೆ ಬರಿಯ ಪಾಡು!
ನೀ ವನಸಿರಿಯ ವೈತಾಲಿಕ, ಆರಿಗೆ ಬೇಕು ನಿನ್ನ ಜಾಡು!
ಜನರ ಕಣ್ಣಿನಲಿ ನೀನೊಬ್ಬ ಮೈಗಳ್ಳ,
ಕವಿಯ ಕಣ್ಣಿಗೆ ಮುದ್ದಿನ ಮಳ್ಳ,
ಕಾಯಕವೇ ಕಾವ್ಯವೆಂದ ಬಸವ,
ನಿನ್ನಲಿ ಕಾವ್ಯವೂ ಕಾಯಕವೆಂಬ ಉತ್ಸವ!
ನಿನಗಿಲ್ಲ ನಿನ್ನೆ ನಾಳೆಗಳ ಚಿಂತೆ,
ನಮಗೆ ಚಿಂತೆಯದೇ ಸಂತೆ!
ವಿಜ್ಞಾನಿಗಳಿಗೆ ನೀನೊಂದು ಕೀಟ!
ಪರಿಸರ ಪ್ರೇಮಿಗೆ ಪ್ರಕೃತಿ ಕಿರೀಟ!
ನೀ ಸದಾ ಮಿಡಿಯುವ ಪ್ರಕೃತಿಯ ವೀಣೆ!
ನಿನ್ನ ಮಿಡಿತವ ಕೇಳುವವರಾರನೂ ಕಾಣೆ!
ನೀನಂತೆ ಸೂರ್ಯನಾರಾಯಣನ ಕುದುರೆ!
ಮಕ್ಕಳ ಮುಂದೆ ನಿನಗಿಲ್ಲ ಇದಿರೆ!
ಸರ್ವನಾಶದ ಕತ್ತಲೆಯಲಿ ನೀ ಹಣತೆ,
ನಿನ್ನುಳಿವಿನಿಂದ ಹೆಚ್ಚುವುದು ನರನ ಘನತೆ!

## ೩. ತಮಟೆ

ನಾ ತಮಟೆ, ನಾಲಿಗೆಯಿಲ್ಲದವರ ನಾಲಿಗೆ,
ನನ್ನ ತುಳಿದವರಿಂದು ಬೀಳುತಿಹರೆನ್ನ ಕಾಲಿಗೆ!
ನಾ ಎದ್ದರೆ ಸುದ್ದಿ, ಬಿದ್ದರೆ ಲದ್ದಿ!
ನನಗೂ ಬರುವುದು ಕಾಲ ಲಬ್ಧಿ!
ಬಿಸಿ ಮುಟ್ಟದೆ ನುಡಿಯಲಾರೆ ನಾನು,
ಮಿಡಿಯದೆ ವೀಣೆ ನುಡಿಯದು ತಾನು!

ಬಡಿಯದಿರೆ ನುಡಿಯದು ತಬಲ!
ಡೋಲ ನುಡಿಸೆ ತರಬೇಕು ಕೋಲ!
ಶೂಲವೇ ಹೂವಿಗೆ ಮೂಲ!
ಕಲೆಗೆ ಬೇಕೇನೋ ಸ್ಥಿತಿ ಪ್ರತಿಕೂಲ!
ನೋವಿಲ್ಲದೆ ಇಲ್ಲವೇನೋ ನಲಿವು,
ಸೋಲಿಲ್ಲದೆ ಇಲ್ಲವೇನೋ ಗೆಲುವು,
ಸುಮ್ಮನೆ ಬಡಿವರು ಮದ್ದಳೆಯ,
ಕಾಸಿ ಬಡಿವರು ತಮಟೆಯ ಕೇಳೊ ಗೆಳೆಯ!

## ೪. ನೀರಿಗೆ

ನೀರಿಗೆ ಹೋಗೋಣ ಬಾರೆ ನೀರೆ,
ನೀರಿಗೆ ಹೋದರೆ ಕೃಷ್ಣ ಸೆಳೆವನೇ ಸೀರೆ!
ಕೃಷ್ಣನಿಲ್ಲದ ಠಾವು ಎಲ್ಲಿದೆ ತೋರೆ!
ಒಳಗೆ ಹೊರಗೆ ಕೃಷ್ಣ, ಇಲ್ಲ ಅವನಿಲ್ಲದೂರೆ!
ಬಲ್ಲೆ, ಕೃಷ್ಣನಿಲ್ಲದೆ ನೀ ಕೂತಲ್ಲಿ ಕೂರೆ!
ಬಲ್ಲೆ, ಕಂಡವರಲಿ ಛಿದ್ರ ಕಾಂಬುದರಲಿ ನೀ ಶೂರೆ!
ಸೂರೆ ಮಾಡಿಹನೆನ್ನ ಮನವ ಮಾಧವ!
ಊರು ಸೂರೆಯಾದ ಮೇಲೆ ಹಾಕಿದರೇನು ಕದವ?
ಬಲ್ಲೆ ನೀರ ನೆಪದಲಿ ಕೃಷ್ಣನ ಕಾಂಬ ಹದನ!
ಕೊಡವ ಹಿಡಿದು ನಡೆಯೆ, ಮನದಲಿ ಬೇಡ ಕದನ!
ಸದನಕೇನೆಂಬೆ, ಜನಕೇನೆಂಬೆ ಸಾಕೆ ಮನ?
ಪ್ರೇಮದ ಬೀದಿಯಲಿ ಎರಡಕಿಲ್ಲ ಸ್ಥಾನ,
ರಾಟೆ ಬೇಡವೆ, ಹಗ್ಗ ಬೇಡವೆ ನೀರಿಗೆ?
ಚಕ್ರ ಬೇಕು, ಹಗ್ಗ ಬೇಕು ಊರ ತೇರಿಗೆ!
ಪ್ರೀತಿ ರಾಟೆ ಹಗ್ಗವಿಲ್ಲದ ನೀರು ಕಾಣೆ!
ಪ್ರೀತಿ ಚಕ್ರ, ಹಗ್ಗವಿಲ್ಲದ ತೇರು ಕಾಣೆ!

## ೫. ಗೋಧಿ

ಧೂಮವಿಲ್ಲದ ಗೋಧೂಮ, ನೀನು, ಬಲಧಾಮ,
ನೀ ನೇಗಿಲಿನಿಂದ ಮೂಡಿದ ಬಲರಾಮ!
ನೀನಲ್ಲ ಬಹುವ್ರೀಹಿ, ದ್ವಂದ್ವ, ನೀ ತತ್ಪುರುಷ!
ನೀ ಧಾನ್ಯರಾಜ, ರಾಜರಲಿ ಸತ್ಪುರುಷ!
ನೀ ಧಾನ್ಯಗಳಲಿ ಆಕಾಶದ ಸೂರ್ಯ,
ಸಸ್ಯಲೋಕದಲಿ ಮೊಳಗುವ ವಿಜಯ ತೂರ್ಯ!

ಪ್ರಭು ವಿರಹದಿ ಎದೆ ಬಿರಿಸಿ ನಿಂತಿಹ ಶೂರ!
ರಾಮನನು ಎದೆ ಸೀಳಿ ತೋರಿಸಿದ ಹನುಮ ಧೀರ,
ನಿನ್ನ ನೀ ಪುಡಿಗೈದು ಲೋಕಕಾಗುತಿಹೆ ಅನ್ನ
ತನ್ನ ತಾ ಇಲ್ಲಗೈವುದೆ ಎಲ್ಲ ತಪದ ಕೊನೆ ಕಣ!
ನಿನ್ನ ಬಿಚ್ಚೆದೆಯ ಕಂಡು ಮೆಚ್ಚಿದವದಾನ್ಯ!
ಮೆಚ್ಚಿದೆ ನಿನ್ನ ನಿಷ್ಠೆ ತ್ಯಾಗಕೆ, ನೀ ಧನ್ಯ ಧಾನ್ಯ!

## ೬. ಪಗಡೆಯಾಟ

ಪಗಡೆಯಾಟವಾಡುವ ಬಾರೆ ಕೆಳದಿ,
ಹೂಡಿ ಕಾಯ, ಕಪ್ಪು, ಕೆಂಪು, ಹಸಿರು, ಹಳದಿ.
ಶಕುನಿ ಮಾವ ಬೇಡ ನನ್ನ ನಿನ್ನ ಕೆಲದಿ,
ಇರಲಿ ನಮ್ಮ ನಡುವೆ ಪ್ರೇಮ ಜಲಧಿ!
ಕಪ್ಪು ಕೊಂದೆ, ಮುಂದೆ ನಡೆಸುವೆ ಹಸಿರ,
ಬಗೆವೆ ಅಚ್ಚ ಕೆಂಪು ಕಾಯ ಬಸಿರ!
ಹಣ್ಣಾಗಿ ಮನೆಗೆ ಹೋಗಲಿ ಹಳದಿ.
ಒತ್ತೆಯಿಲ್ಲದೆಂಥ ಆಟ ಕೆಳದಿ?
ಒತ್ತೆಯಿಂದ ಕೆಟ್ಟ ಯುಧಿಷ್ಠಿರ,
ಒತ್ತೆಯಿಂದ ಆದ ನಳ ಅಸ್ಥಿರ!
ಒತ್ತೆಯಿಡುವೆ ಎನ್ನ ಉಸಿರ
ಉಳಿಸಿಕೊಂಬೆ ಎಮ್ಮ ಹಸಿರ.
ಹಸಿರಿಲ್ಲದಿಲ್ಲ ಹಳದಿ ಕೇಳೆ ಕೆಳದಿ,
ಹಸಿರಿಲ್ಲದೆಂತು ಉಸಿರು ಪೇಳೆ ಕೆಳದಿ!

## ೭. ಕಲ್ಲ ಮೇಲೆ

ಕಲ್ಲಮೇಲೆ ಬರಲೋ, ಮುಳ್ಳಮೇಲೆ ಬರಲೊ; ಬೆಂಕಿಮೇಲೆ ಬರಲೊ ಪೇಳು ದೊರೆ!
ಎಲ್ಲ ಕಡೆ ತೆರೆದಿದೆ ಎನ್ನ ಮನೆ ಬಾಗಿಲು, ಕಲ್ಲೇಕೆ, ಮುಳ್ಳೇಕೆ ನೀ ಬರುವರೆ,
ನಿನ್ನ ಮನೆಗೆ ನೂರು ಬಾಗಿಲು, ಎತ್ತಣಿಂದ ಬರಲಿ?
ಒಂದೆಡೆ ಜನಸಮ್ಮರ್ದ, ಇನ್ನೊಂದು ತೆರೆದಿದೆ ಅರ್ಘ್ಯ, ಎತ್ತಣಿಂದ ಬರಲಿ!
ಒಂದೆಡೆ ಪಹರೆ, ಇನ್ನೊಂದಕಿಲ್ಲ ಚೆಹರೆ, ಎತ್ತಣಿಂದ ಬರಲಿ!
ಪೂಜಾರಿಯ ತೆರೆ, ಮತ್ತೊಂದರಲಿ ನಿಯಮದ ಸೆರೆ, ಎತ್ತಣಿಂದ ಬರಲಿ ನಾ
ಘಂಟೆ, ಜಾಗಟೆಗಳ ತಂಟೆ ಒಂದೆಡೆ, ಉಂಟೆ ಎನಗೆ ಅಲ್ಲಿ ಸ್ಥಾನ?
ಒಂಟೆ, ಆನೆಗಳು ಅಡ್ಡ ನಿಂತಿವೆ, ಎಂತು ಬರಲಿ ನಾ,
ಜಪವನರಿಯೆ, ತಪವನರಿಯೆ, ಅರಿಯೆ ಧ್ಯಾನ!
ಛತ್ರ, ಚಾಮರಗಳಿಂದಾಗಿದೆ ನಿನ್ನ ದ್ವಾರ ಬಂಧನ!

ಕಾದು ಕಾದು ಬಳಲಿದೆ, ಕಾಣಿಕೆಗಿಲ್ಲ ಹಣ!
ಬರಲಿಲ್ಲವೆನ್ನ ಸರದಿ, ಆಯಿತು ಕಾಲ ಹರಣ!
ಹುಲ್ಲ ತರುವನಿಗೇಕೆ ಕಾಣಿಕೆ, ಬೇಡ ಕ್ಷುಲ್ಲಕ ಕಾರಣ,
ಸಲ್ಲಲಿತ ಭಕ್ತಿಯೊಂದಿರೆ ಏನೂ ಬೇಡ ಕಾಣ!

## ೮. ತೆಂಗಯ್ಯ

ಜಟಾಧರ ನೀ, ಗಂಗಾಧರ ನೀ, ತೆಂಗಯ್ಯ, .
ನೀ ಬಸವಣ್ಣನ ಪ್ರಿಯ ಕೂಡಲಸಂಗಯ್ಯ,
ನೀ ಸಸ್ಯಲೋಕದ ರಾಜ ಸಿಂಗಯ್ಯ,
ನೀನು ತೋಂಟದ ಸಿದ್ಧಲಿಂಗಯ್ಯ,
ಇನಿತಾದರೂ ನೀ ಬರಿಯ ಜುಂಗಯ್ಯ,
ನಿನ್ನಿಂದ ಸಸ್ಯ ಲೋಕಕೆ, ನಾಡಿಗೆ ರಂಗಯ್ಯ,
ನಿನ್ನಿಂದ ಭುಕ್ತಿ, ಮುಕ್ತಿ, ಶಕ್ತಿ,
ಮೇಲೆ ನಿನ್ನ ಕಣ್ಣು, ನೆಲದಲಿ ಆಸಕ್ತಿ!
ಮದುವೆಯೇನಯ್ಯ ನಿನಗೆ, ತೊಟ್ಟಿಹೆ ಬಾಸಿಂಗ!
'ನಾರಿ ಕೇಳ' ನಾನು ನನಗೇಕೆ ಬಾಸಿಂಗ?
ಅದು ನನ್ನಮ್ಮ ನೀಡಿದ ಚೂಡಾಮಣಿ.
ತೆಂಗಯ್ಯ, ನೀನೆಮ್ಮ ಶ್ರೇಯ ಪ್ರೇಯದ ಗಣಿ!

## ೯. ದಾಸಯ್ಯ

ಶಂಖ, ಜಾಗಟೆ ಹಿಡಿದು ಬಂದಿಹೆ ನಾ ದಾಸಯ್ಯ
ಚಾಚಿಹೆನಿಂದು ಎನ್ನ ಜೋಳಿಗೆ ಅಕ್ಷಯ್ಯ.
ಶತಮಾನಗಳ ಮೌಢ್ಯದ ವಿರುದ್ಧ ಊದುವೆ ಶಂಖವ ಬೋಂ! ಬೋಂ!
ಹರಿ ಓಂ, ಹರಿ ಓಂ, ಹರಿ ಓಂ!
ಜಗದಿಂದ ತೊಡೆದು ಹಾಕುವೆ ಭೀತಿಯ ಆತಂಕವ, ಬೋಂ! ಬೋಂ!
ಹರಿ ಓಂ, ಹರಿ ಓಂ, ಹರಿ ಓಂ!
ನನ್ನ ಶಂಖದಿಂದಿಲ್ಲ ಸಜ್ಜನರಿಗೆ ತಳ್ಳಂಕ,
ದುರ್ಜನರಿಗೆ, ಶೋಷಕರಿಗೆ ನಡುಕ, ನಿಶ್ಶಂಕ!
ನನ್ನ ಜಾಗಟೆ ಆತತಾಯಿಗಳಿಗೆ ಕಟಕಟೆ!
ಅದ ಕೇಳಲು ಮಾಡದಿರಿ, ತಂಟೆ, ಕಟಪಟಿ,
ನಿಮ್ಮ ಅಶನವನೊಲ್ಲೆ, ನೀಡಿ ನಿಮ್ಮ ವ್ಯಸನವ!
ನಿಮ್ಮ ವಸನವನೊಲ್ಲೆ, ನೀಡಿ ಮೋಹದರ್ಪಣವ!

ನಿಮ್ಮ ಕಾಸನೊಲ್ಲೆ, ನೀಡಿ ಅದರ ಆಶೆಯ!
ನಿಮ್ಮ ಸುಖವನೊಲ್ಲೆ, ನೀಡಿ ನಿಮ್ಮ ಪತಾಶೆಯ, ಗೋವಿಂದ ಗೋವಿಂದ,
ಕಷ್ಟಕೋಟಲೆಗಳಿಂದ ರಕ್ಷಿಸಲಿ ಗೋವಿಂದ!
ಗೋವಿಂದನಾಗಿರಲಿ ಸದಾ ನಿಮ್ಮ ಖಾವಿಂದ!

## ೧೦. ಬಸವ

ಬಸವ, ಬಸವ,
ನೀ ತೊಳೆದೆ ಜಗದ ಕಸವ!
ನೀ ಗಾಳಿಯಾಗಿ ಬಂದ ಗೂಳಿ,
ನೀ ಹಳೆಯ ಕೊಳೆಯ ಮೆಟ್ಟಿ ನಿಂತೆ ಹೂಳಿ!
ನೀ ಹೆಣ್ಣನೆತ್ತಿ ತಲೆಯ ಮೇಲಿರಿಸಿಕೊಂಡ ಶಿವ,
ಎಲ್ಲ 'ಹೊಲೆ'ಯ ಮಾಡಿದೆ ನೀ ಶವ!
ಕೊಂದೆ 'ಅಲ್ಲಿ' 'ಇಲ್ಲಿ'ಯ ನಡುವಣ ಕೊಲ್ಲಿಯ!
ನೀ ಮನೆಗೆ ಬೆಂಕಿ ಹಚ್ಚಿ ಕೈಯಲಿ ಹಿಡಿದೆ ಕೊಳ್ಳಿಯ!
ರೆಪ್ಪೆಯಿಂದ ಗುಡಿಸಿದೆ ಕೂಡಲಸಂಗನ ಹಾದಿಯ,
ಕಂಬನಿಯಿಂದ ಸಾರಿಸಿದೆ ಪ್ರಭುವ ಗಾದಿಯ!
ನೀ ಶಿವಗೆ ಮಾಡಿದೆ ಬೆವರ ಅಭಿಷೇಕ,
ನಿನ್ನ ಕಂಡು ಓಡಿದವು ಕೂಪ ಭೇಕ!
ನೀ ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ,
ನೀ ತಾಪಸ ಶಿವನನೆಬ್ಬಿಸಿ ಮಾಡಿದೆ ಪಾದಚಾರಿ!
ನೀ ಶ್ರಮದ ಮೀಮಾಂಸಕ ಶ್ರಮಣ
ಸಮತೆಯ ಗಾರುಡಿಗ, ನಿನಗೆನ್ನ ನಮನ!

● ●

ಡಾ. ಮ. ಸು. ಕೃಷ್ಣಮೂರ್ತಿ : ೭೧೮, ೧೬ನೇ ಮುಖ್ಯರಸ್ತೆ, ಸರಸ್ವತೀಪುರಂ, ಮೈಸೂರು - ೫೭೦ ೦೦೯

## ರಂಗಸ್ಥಳ

ವಸಂತಕುಮಾರ ಪೆರ್ಲ

ಯಾರು ಯಾರಲ್ಲಿ ಯಾರಿದ್ದೀರಿ ಪಕ್ಕದಲ್ಲಿ
ಭಳಿರೇ ಭಾಪು! ಭಾಪು! ಮಹಾದೊರೆಗಳು!
ಚಕ್ರ ಸಮ್ರಾಟರು ದಕ್ಷಿಣೋತ್ತರ ದಂಡಾಧೀಶರು
ಹೇಳಿ ಒಡೆಯಾ ಹೇಳಿ ನಿಮ್ಮ ಪಾದುಕೆಯಲ್ಲಿ
ಮಾಡುತ್ತೇವೆ ರಾಜಕಾರ್ಯ ಹೊತ್ತು ಶಿರದಲ್ಲಿ

ತಂದಿಡಿ ಸಿಂಹಾಸನ ಛತ್ರಚಾಮರ
ನೆರೆಯಲಿ ಮಂತ್ರಿಮಾನ್ಯರು ಸೇನಾಪತಿಗಳು
ಆಹ! ಯಾರೆಂದು ಕೇಳಿಬಲ್ಲಿರಿ ಈ ಭರತಖಂಡಕ್ಕೆ
ಏಕಮೇವಾದ್ವಿತೀಯ ಚತುರಂಗಬಲ ಸಂದೋಹಕ್ಕೆ
ನಾವು ನಾವೇ ಚಕ್ರಾಧಿಪತಿಗಳು ಅಖಂಡ ಭೂಪತಿಗಳು
ಆಸೇತು ಹಿಮಾಚಲದ ದೋರ್ದಂಡ ದೊರೆಗಳು
ನಾವೇ ನಾವು ದೆಹಲಿ ಮಹಾಪ್ರಭುಗಳು
ಚತುಸ್ಸಮುದ್ರ ಶರಸೇತು ಸಮರ್ಥರು
ಭೋಪರಾಕು! ಭೋಪರಾಕು! ದೆಹಲಿ ಸಮ್ರಾಟರಿಗೆ
ಏಷ್ಯಾ ಖಂಡದಖಂಡ ಒಡೆಯರಿಗೆ

ಭಾಪು! ಮಜಬೂತು ವೇಷ ಕಿರೀಟದೇರಾಟಕ್ಕೆ
ಅದುರುತ್ತಿದೆ ಬ್ರಹ್ಮಾಂಡ ನುಗ್ಗಿದ್ದೀರಯ್ಯ ರಂಗಸ್ಥಳಕ್ಕೆ
ಹೇಳಿ ಹೇಳಿ ಬಂದಂಥ ಕಾರ್ಯ

ಕೇಳಿರಯ್ಯಾ ಭಾಗವತರೆ, ನಮ್ಮ ಹದನು ಮತ್ತದರ ವಜನು
ಬಕಕೀಚಕ ಹಿಡಿಂಬಡಿಂಬಗಳನ್ನು ಸೀಳಿದವರು
ಮಹಾರಥರ ರಥ ಮುರಿದು ಏಕರಥರಾದವರು
ಹಸ್ತಿನಾವತಿಯಿಂದ ಐರಾವತದಲ್ಲೆ ಬಂದು
ಮೇರುಮಂದರವನೇರಿದವರು
ಧುರಧುರಂಧರರು ನಾವು ನಡೆದಲ್ಲೆ ಸಾಮ್ರಾಜ್ಯ ಆಸನವೆ ಸಿಂಹಾಸನ
ಉಚ್ಚೈಶ್ರವಸ್ಸು ಲಕ್ಷ್ಮಿ ಧನ್ವಂತರಿಯರೆಲ್ಲ ನಮ್ಮ ಜೊತೆಯಲ್ಲೆ ಬಂದರು
ಬಂದರು ಬೆನ್ನಲ್ಲೆ ಬೊಕ್ಕಸರು ರಕ್ಕಸರು
ಶಕರು ಹೂಣರು ಬಾಬರರು ಮೊಗಲರು ತೊಗಲರು
ಆಗೀಗೊಮ್ಮೆ ಸಂಘರ್ಷವಿಷ ಗಾಯಲೇಪಿತ ಸೋಂಕು ವ್ರಣ
ನಮ್ಮೈರಾವತದ ಕಾಲು ಸೊಂಡಿಲು ಕಿವಿಗಳ ಹಿಡಿದು ಢಣಢಣ
ಗೆದ್ದೆವು ಆಹಾ! ಗೆದ್ದೇ ಬಿಟ್ಟೆವು ಎಂದು ಮೆದ್ದರು ಮನಸ್ಸಿನಲ್ಲೆ
ಗಜರಾಜ ಮಗ್ಗುಲು ಹೊರಳಿದ ನಿಃಶ್ವಾಸಕ್ಕೆ ಶ್ವಾಸವೇ ಕಳಚಿ ಉದುರಿದರು
ಉದುರಿದರು ಉದುರಿದ ಹಾದಿಯೇ ಕಾಣದ ಹಾಗೆ.

ಕೇಳಿರಯ್ಯಾ ಭಾಗವತರೆ, ರಕ್ಕಸರೆಲ್ಲ ಮತ್ತೆ ಸೊಕ್ಕಿದ್ದಾರೆ
ಹೊಕ್ಕಿದ್ದಾರಂತೆ ಗೂಳಿಗಳಂತೆ, ಚಾರರ ಸುದ್ದಿ, ಆತಂಕವಾದ ಮಿತಿಮೀರಿ
ಹಾವು ಹುಳಹುಪ್ಪಟೆಗಳೆಲ್ಲ ಹುತ್ತ ಕಟ್ಟಿದ್ದಾವೆ
ಹಬ್ಬಿದ್ದಾವೆ ಮುಳ್ಳುಕಂಟಿಯ ಹಾಗೆ ಸಿಂಹಾಸನದ ಬುಡದಲ್ಲಿ
ಗುಳಿತೋಡಿ ಘೂರ್ಣಿಸುತ್ತಿದ್ದಾವೆ ನಮ್ಮಾಧಿಪತ್ಯದ ವ್ಯಾಪ್ತಿಯಲ್ಲಿ

ಪುಂಡುಪೋಕರಿಗಳೊಟ್ಟಾಗಿ ಪಟ್ಟಾಗಿ ಸಾಮಂತರು ಮತ್ತು
ಪಟುಭಟರ ಪಾಳಯ ಪಟ್ಟುಗಳನ್ನು ಎತ್ತಿ ಕಟ್ಟಿದ್ದಾರೆ
ನಮ್ಮ ಯುದ್ಧವ್ಯೂಹಗಳ ಮರ್ಮಗಳನ್ನೆಲ್ಲ ಮಸುಳಿಸಿ
ಮಾರ್ಮಲೆತು ನಿಂತಿದ್ದಾರೆ ಭಂಗಿಸಿದ್ದಾರೆ ನಿರ್ಮಮ
ಮರ್ಮಾಂಗಗಳ ಒಳಗಿಂದೊಳಗೆ ಅಳ್ಳೆಳ್ಳಾಯಿಸುತ್ತ.

ಈ ಸ್ವರ್ಗಾರೋಹಣದ ಮೋಹವೇ ಅಂಥದ್ದು. ರಕ್ಕಸರಿಗೆ
ದಾಳಿಯ ನಂತರ ದಾಳಿ ದಾಳಿಯ ನಂತರ ದಾಳಿ ದಾಳಾಧೂಳಿ
ಧೂಸರವಾದರೂ ಮತ್ತೆ ಮತ್ತೆ ಧೂಳಿಯಿಂದೆದ್ದು ಬರುತ್ತಿದ್ದಾವೆ
ವಿಫಲ ಸಂತಾನಕ್ಕೆ ಫಲಪ್ರಾಪ್ತಿಯೆಂಬುದೆ ಇಲ್ಲ
ನ್ಯಾಯದ ಸಮರ ನಿರಂತರ ವಿರಾಮದ್ದಲ್ಲ
ಇಂದ್ರನಾದರೂ ಸೇಂದ್ರಿಯನಾಗಲೇಬೇಕು
ಇರಬೇಕು ಜಪಿಸುತ್ತಲೇ ರಾಮನ ಹಾಗೆ
ರಾಮನವತಾರದ ಹಾಗೆ ರಾಮನೇ ನಮಗೆ ಶ್ರೀರಕ್ಷೆ ಸುರಕ್ಷೆ!

ಕೇಳಿರಯ್ಯಾ ಭಾಗವತರೆ. ನಮ್ಮಾಡಳಿತದಲ್ಲಿ ದೇಶ ಸುಭಿಕ್ಷ ಸುರಕ್ಷ
ಕ್ಷಾಮಡಾಮರ ದ್ರೋಹ ದಂಗೆಗಳನ್ನು ವಿಚಕ್ಷಣತೆಯಿಂದಲೆ ಗೆದ್ದವರು ನಾವು
ದಂಡು ಕಟ್ಟಿದ್ದೇವೆ ಹಯವ ಬಿಟ್ಟಿದ್ದೇವೆ ಗೆದೆಯುತ್ತೇವೆ
ಸೀಮಾಂತರಗಳ ಅಂತರವನ್ನೆಲ್ಲ ಅಂತರಾಳಕ್ಕೆಳೆದು
ಸ್ಥಾಪಿಸುತ್ತೇವೆ ಚಕ್ರಸಿಂಹಾಸನದ ಸತ್ತಿಗೆಯ ತೇಜೋಮಯ ಹೊರಚಾಚುಗಳ
ಚಾಚುತ್ತೇವೆ ನಮ್ಮದೇ ಯುಗ ಪೌಳಿಯೇ ಇರದ ಜಗ

ಭಳಿರೇ ಭಾಪು! ಹಾಕಿರಯ್ಯಾ ಅರಾಳ ರಾಳ
ಭಗ್ಗನೇ ಹೊತ್ತಿ ಉರಿಯಲಿ ಧಗಧಗ ಶಾಖ
ಯುದ್ಧ ಮುಖದಲ್ಲೂ ನಮ್ಮ ಮೋರೆ ನಿಮಗೆ ಮತ್ತು
ನಿಮ್ಮ ಮೋರೆ ನಮಗೆ ಕಾಣುವಂಥ ರಕ್ತವಿವರ್ಣ ಸುಖ
ಆದರೂ ನಮ್ಮದು ನಿರ್ವ್ಯಾಜ ಅರ್ಜುನ ವಿಷಾದಯೋಗ
ಶ್ರೀಕೃಷ್ಣನಿದ್ದರೂ ನಾವು ತಜ್ಞ ಸಂವಾದಮಗ್ನ ಜನ.
ಅಷ್ಟಕ್ಕೂ ನಮ್ಮ ಹಯ ಅಶ್ವಮೇಧದ ಅಗ್ನಿನಿಚಯ.

ತಾರಕದಲ್ಲಿ ಬಾರಿಸಿರಯ್ಯಾ ಚಂಡೆ ಜಾಗಟೆಯ
ನಮ್ಮ ದಿಗ್ವಿಜಯದಾರಾಟಕ್ಕೆ ಸಮೆಯಲಿ ಸಮ್ಮೇಳ
ಕುಣಿಯಲಿದ್ದೇವೆ ನಾವೀಗ ರಂಗಸ್ಥಳ ತುಂಬ ಧಡಧಡ
ರಕ್ಕಸರ ಸೊಕ್ಕಡಗಿಸುತ್ತ ಈ ಅಖಂಡ ಖಂಡ.

● ●

ಡಾ. ವಸಂತಕುಮಾರ ಪೆರ್ಲ : ಕಾರ್ಯಕ್ರಮ ಮುಖ್ಯಸ್ಥರು, ಆಕಾಶವಾಣಿ, ಮಂಗಳೂರು - [illegible]

# ಕವಿರಾಜಮಾರ್ಗ ಮಂಥನ : ನೃಪತುಂಗನ ವ್ಯಕ್ತಿತ್ವ*

ಷ. ಶೆಟ್ಟರ್

ರಾಷ್ಟ್ರಕೂಟ ಮುಮ್ಮಡಿ ಗೋವಿಂದನ ಪುತ್ರನ ಪ್ರಭುಶಕ್ತಿಯನ್ನು ಪ್ರತಿಬಿಂಬಿಸಲು ಬಳಸಲಾದ ಪ್ರಧಾನ ವಿಶೇಷಣ 'ನೃಪತುಂಗ'; ಕನಿಷ್ಠಪಕ್ಷ ಹತ್ತೊಂಬತ್ತು ಬಾರಿ ಈ ಪದದಿಂದ ಅವನನ್ನು ಕವಿರಾಜಮಾರ್ಗದಲ್ಲಿ ಗುರುತಿಸಲಾಗಿದೆ.[೧] ಶಾಸನಗಳಲ್ಲಿ ಹೆಚ್ಚು ಪ್ರಸಾರವಲ್ಲಿದ್ದ 'ಅಮೋಘವರ್ಷ' ಪದಕ್ಕೆ ಈ ಕಾವ್ಯದಲ್ಲಿ ದೊರಕಿರುವ ಮನ್ನಣೆ ಅಪರೂಪ : ನೇರವಾಗಿ ಎರಡು ಬಾರಿ, ಸುತ್ತಿಬಳಸಿ ಮೂರು ಬಾರಿ, ಈ ಪದ ಬಳಕೆಯಾಗಿರುವುದನ್ನು ಗುರುತಿಸಲು ಮಾತ್ರ ನನಗೆ ಸಾಧ್ಯವಾಗಿದೆ.[೨] ಶಾಸನಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುವ,[೩] ಆದರೆ ಈಗ ಹೆಚ್ಚು ಬಳಕೆಯಲ್ಲಿರುವ, 'ಅಮೋಘವರ್ಷ-ನೃಪತುಂಗ' ಎಂಬ ಸಂಯುಕ್ತ ಪದವು ಈ ಕಾವ್ಯದಲ್ಲೆಲ್ಲೂ ಬರುವುದಿಲ್ಲ, ಆದರೆ, 'ಅಮೋಘವರ್ಷ-ನೃಪತುಂಗ'ನೆಂಬ ಪದವನ್ನು ಒಮ್ಮೆ ಮಾತ್ರ ಇಲ್ಲಿ ಎದುರುಗೊಳ್ಳುವೆವು.[೪]

## 'ತುಂಗ' ಪದದ ವಿಶೇಷತೆ :

'ನೃಪತುಂಗ' ವಿಶೇಷಣಕ್ಕೆ ಕವಿರಾಜಮಾರ್ಗದಲ್ಲಿ ಹೆಚ್ಚು ಪ್ರಾಶಸ್ತ್ಯ ದೊರಕಿರುವುದು ಸ್ವಲ್ಪ ಕುತೂಹಲಕರವಾಗಿ ಕಂಡುಬಂದರೂ ರಾಷ್ಟ್ರಕೂಟರನ್ನು 'ತುಂಗ'ರೆಂದೇ ಶಾಸನಗಳಲ್ಲಿ ಪ್ರತಿಪಾದಿಸಿರುವುದನ್ನು ನಾವಿಲ್ಲಿ ನೆನೆಯಬಹುದು. ಮಹಾರಾಷ್ಟ್ರದ ಕಾನ್ಹಾರದಲ್ಲಿ ದೊರೆತಿರುವ ಮುಮ್ಮಡಿ ಕೃಷ್ಣನ ಶಾಸನದಲ್ಲಿ ಯದು ವಂಶದ ಪ್ರಭಾವ ಮತ್ತು ಪ್ರಸಿದ್ಧಿಯು ಶಿಖರ ಸ್ಥಾನವನ್ನು ಮುಟ್ಟಿದುದರಿಂದ, ಈ ವಂಶಸ್ಥರನ್ನು 'ತುಂಗ'ರೆಂದು ಗುರುತಿಸಲಾಯಿತೆಂದು (ತದ್-ವಂಶಜಾ ಜಗತಿ ತುಂಗಯಶಃ ಪ್ರಭಾವಸ್; ತುಂಗ ಇತಿ ಕ್ಷಿತಿಭುಜ ಪ್ರಥಿತಾವ(ಬ)ಭೂವು) ಹೇಳಲಾಗಿದೆ.[೫] ಈ ವಿಶೇಷಣವು ಮೊದಲು ಪ್ರಚಾರಕ್ಕೆ ಬಂದದ್ದು ಮೊದಲನೆಯ ಕೃಷ್ಣ (ಕ್ರಿ. ಶ. ೭೫೬-೭೫)ನ ಕಾಲದಲ್ಲಿ ಎನಿಸುವುದು. ಶಾಸನಗಳಲ್ಲಿ ಇಮ್ಮಡಿ ಮತ್ತು ಮುಮ್ಮಡಿ ಗೋವಿಂದರನ್ನು (೭೭೫-೮೦; ೭೯೩-೮೧೪) ಅಲ್ಲದೆ ಇಮ್ಮಡಿ ಮತ್ತು ಮುಮ್ಮಡಿ ಕೃಷ್ಣರನ್ನು (೮೮೦-೯೧೫: ೯೩೯-೯೬೭) 'ಜಗತ್ತುಂಗ'ರೆಂದು ಹೊಗಳಲಾಗಿದೆ;[೬] ಆದರೆ ಮಾರ್ಗಕಾರನು ಈ ಪದವನ್ನಾಗಲೀ, ಇದರಂತೆ ಬರುವ 'ಶುಭತುಂಗ' ಪದವನ್ನಾಗಲೀ[೭] ಬಳಸಿರುವುದಿಲ್ಲ. ಇದರಂತೆ, 'ತುಂಗ' ಪದದ ವ್ಯಾಖ್ಯಾನವಾಗಲೀ ಈ ಪದದೊಡನೆ ರಾಷ್ಟ್ರಕೂಟರಿಗಿದ್ದ ವಿಶಿಷ್ಟ ಸಂಬಂಧವನ್ನಾಗಲೀ ಅವನು ಚರ್ಚಿಸಿಲ್ಲ. ಇದು ಏನೇ ಇರಲಿ, 'ಜಗತ್ತುಂಗ'ಕ್ಕೆ ಪರ್ಯಾಯವಾಗಿ ಹಲವು ಪದಗಳನ್ನು (ಉದಾ : ಭೂಭೃದುತ್ತುಂಗ, ಮೊದಲಾದ) ಧಾರಾಳವಾಗಿ ಈ ಕವಿ ಬಳಸಿರುವನು.

---

* ಕವಿರಾಜಮಾರ್ಗವು ರಾಷ್ಟ್ರಕೂಟ ಇತಿಹಾಸ ರಚನೆಗೆ ಅತ್ಯಂತ ಮಹತ್ವದ ಆಕರ ಗ್ರಂಥ. ಆದರೆ ಇದನ್ನು ಪರಿಪೂರ್ಣವಾಗಿ-ಅರ್ಥಪೂರ್ಣವಾಗಿ ಇತಿಹಾಸಕಾರರಾರೂ ಇನ್ನೂ ಉಪಯೋಗಿಸಿಲ್ಲ. ಈ ಲೇಖನವು ಆ ನಿಟ್ಟಿನೆಡೆಗೆ ಇಟ್ಟ ಒಂದು ಹೆಜ್ಜೆ. ಈ ಗ್ರಂಥದಲ್ಲಿ ಬರುವ ವಿಶೇಷಣಗಳನ್ನೆಲ್ಲ ಸಂಗ್ರಹಿಸಿ, ಶಾಸನಗಳ ಹಿನ್ನೆಲೆಯಲ್ಲಿ ಅವುಗಳ ಮೌಲ್ಯವನ್ನು ನಿರ್ಧರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಆದರೆ ಇಲ್ಲಿ ಬರುವ ಎಲ್ಲ ಪದಗಳೂ ವಾಸ್ತವಾಂಶವನ್ನು ಪ್ರತಿನಿಧಿಸುವುದಿಲ್ಲ. ಇವುಗಳಲ್ಲಿ ಯಾವವು ವಾಸ್ತವ, ಯಾವವು ಅವಾಸ್ತವ ಎಂಬುದನ್ನು ನಿರ್ಧರಿಸುವ ಕೆಲಸವಿನ್ನೂ ಪ್ರಾರಂಭಗೊಳ್ಳಬೇಕಾಗಿದೆ.

ಶಾಸನಗಳಲ್ಲಿರುವಂತೆ ಈ ಕಾವ್ಯದಲ್ಲಿಯೂ ನೃಪತುಂಗನನ್ನು 'ದೇವ' ಎಂಬ ನಾಮಾಂತ್ಯದೊಂದಿಗೆ ಗೌರವಿಸಲಾಗಿದೆ.[೮] ಈ ಬಗೆಯ ನಾಮಾಂತ್ಯ ಹೊಂದಿದ್ದ ರಟ್ಟಕಂದರ್ಪದೇವ, ಸುವರ್ಣವರ್ಷದೇವ, ವಲ್ಲಭನರೇಂದ್ರದೇವ, ನಿತ್ಯವರ್ಷದೇವ, ಧಾರಾವರ್ಷದೇವ, ಅಕಾಲವರ್ಷಕನ್ನರದೇವ, ಭಟ್ಟಕಂದರ್ಪದೇವ, ಬದ್ದೆಗದೇವರನ್ನು ಇಲ್ಲಿ ನೆನೆಯಬಹುದು. ಸಾಮಾನ್ಯವಾಗಿ 'ದೇವ' ಪ್ರತ್ಯಯವು ಪ್ರಾಕೃತ ಮೂಲದ ನಾಮಪದಗಳೊಡನೆ, 'ರಾಜ' ಪ್ರತ್ಯಯವು ಪ್ರಾಕೃತೇತರ ಪದಗಳೊಡನೆ ಬೆರೆತು ಬರುವುದೆಂದೂ, ಆದರೆ ಒಮ್ಮೊಮ್ಮೆ 'ದೇವ'ಕ್ಕೆ ಪ್ರತಿಪ್ರತ್ಯಯವಾಗಿ 'ರಾಜ' –ಉದಾ. ಕಕ್ಕಲದೇವರಾಜ– ಬರುವುದೆಂಬ ಸೂಚನೆಯಿದ್ದು ಇದನ್ನು ಕೂಲಂಕಷವಾಗಿ ಚರ್ಚಿಸಬೇಕಾದ ಆವಶ್ಯಕತೆ ಇದೆ. ಇದು ಏನೇ ಇರಲಿ 'ದೇವ', 'ರಾಜ', 'ನೃಪ', 'ಇಂದ್ರ' ಎಂಬ ಪದಗಳೆಲ್ಲಾ ಸ್ಥೂಲವಾಗಿ ಒಂದೇ ಅರ್ಥದಲ್ಲಿ ಬಳಸಲ್ಪಡುತ್ತಿದ್ದವು ಎಂಬುದರಲ್ಲಿ ಅನುಮಾನವಿಲ್ಲ. ನೃಪತುಂಗದೇವ, ಅಮೋಘವರ್ಷನೃಪ, ಕೃಷ್ಣರಾಜೇಂದ್ರ, ಶ್ರೀವಲ್ಲಭನರೇಂದ್ರ, ಇತ್ಯಾದಿ ಶಾಸನೋಕ್ತ ಪದಗಳನ್ನು ಇಲ್ಲಿ ಉದಾಹರಿಸಬಹುದು.

**'ವರ್ಷ' ಪದದ ವಿಶೇಷತೆ :**

'ತುಂಗ'ವನ್ನಲ್ಲದೆ 'ವರ್ಷ' ಪದವನ್ನೂ ಪ್ರಸಾರಕ್ಕೆ ತಂದವರು ರಾಷ್ಟ್ರಕೂಟರೇ. ಇವರಿಗಿಂತ ಪೂರ್ವದಲ್ಲಿ ಆಳಿದ ಯಾವ ಅರಸು ಮನೆತನಗಳೂ ಈ ಪ್ರತ್ಯಯವನ್ನು ಬಳಸಿಲ್ಲವೆಂಬುದನ್ನು ಇಲ್ಲಿಯ ವರೆಗೂ ಮಾಡಿದ ಸಂಶೋಧನೆ ತಿಳಿಸಿಕೊಡುವುದು. ಅಷ್ಟೇ ಅಲ್ಲ– ಮಾಳಖೇಡದ ರಾಷ್ಟ್ರಕೂಟರನ್ನು ಹೊರತುಪಡಿಸಿ, ಉಳಿದ ಶಾಖೆಗಳ (ಉದಾ. ಗುಜರಾತ, ಮಧ್ಯಪ್ರದೇಶ ಮೊದಲಾದೆಡೆಯ) ರಾಷ್ಟ್ರಕೂಟರಾರೂ ಈ ಪದವನ್ನು ಬಳಸಲಿಲ್ಲ. ಈ ವಿಶೇಷಣದಿಂದ ಸನ್ಮಾನಿತಗೊಂಡ ಮಾಳಖೇಡರಲ್ಲಿ ಕೃಷ್ಣ (೭೫೬-೭೭) ನೇ ಮೊದಲಿಗನೆಂದು ಕಾಣುವುದು. ಇನ್ನೂ ಸೂಕ್ಷ್ಮವಾಗಿ ನೋಡಿದರೆ, ೯ನೆಯ ಶತಮಾನಾನಂತರದ ಶಾಸನಗಳಲ್ಲಿಯೇ ಈ ಪದವು ಪ್ರಯೋಗಗೊಂಡಿರುವುದನ್ನೂ ಅವುಗಳಲ್ಲಿ ರಾಷ್ಟ್ರಕೂಟ ಅರಸರು ಅವರ ಪೂರ್ವಜರನ್ನೂ ಈ ಬಗೆಯ ವಿಶೇಷಣಗಳಿಂದ ಗುರುತಿಸಿರುವುದನ್ನೂ ಕಾಣಬಹುದು. ಮಾಳಖೇಡರ ನಂತರ ಬಂದ ಕಳಚೂರ್ಯರು –ಉದಾ. ಕೇಯೂರವರ್ಷ ಯುವರಾಜ– ಪರಮಾರರು –ಉದಾ. ಅಮೋಘವರ್ಷ ವಾಕ್ಪತಿರಾಜ– ಮೊದಲಾದವರು ಈ ವಿಶೇಷಣವನ್ನು ಮುಂದುವರಿಸಿಕೊಂಡು ಬಂದರೆಂಬುದರಲ್ಲಿ ಅನುಮಾನವಿಲ್ಲ.

'ವರ್ಷ' ಪ್ರತ್ಯಯದ ಇತಿಹಾಸವನ್ನು ಕೂಲಂಕಷವಾಗಿ ಶೋಧಿಸಬೇಕಾದ ಹೊಣೆ ಇನ್ನೂ ನಮ್ಮ ಮೇಲಿರುವುದಾದರೂ ೯ ನೆಯ ಶತಮಾನದಿಂದ ಈ ಪದ ಬಳಕೆಯು ರಾಷ್ಟ್ರಕೂಟರಲ್ಲಿ ಸಾಮಾನ್ಯವೂ-ಸಾರ್ವತ್ರಿಕವೂ ಆಯಿತೆನ್ನುವುದರಲ್ಲಿ ಅನುಮಾನವಿಲ್ಲ. ಈ ವಿಶೇಷಣದೊಂದಿಗೆ ಗುರುತಿಸಿಕೊಂಡ ಅರಸರಲ್ಲಿ ಮೊದಲಕೃಷ್ಣ (ಧನವರ್ಷ), ಇಮ್ಮಡಿ ಗೋವಿಂದ (ಪ್ರಭೂತವರ್ಷ), ಧ್ರುವ (ಧಾರಾವರ್ಷ; ನಿರುಪಮ ಧಾರಾವರ್ಷ), ಮುಮ್ಮಡಿ ಗೋವಿಂದ (ಪ್ರಭೂತವರ್ಷ; ಸುವರ್ಣವರ್ಷ), ಇಮ್ಮಡಿಕೃಷ್ಣ(ಅಕಾಲವರ್ಷ), ಮುಮ್ಮಡಿಕೃಷ್ಣ (ನಿತ್ಯವರ್ಷ), ನಾಲ್ವಡಿ ಗೋವಿಂದ (ಸುವರ್ಣವರ್ಷ; ನಿತ್ಯವರ್ಷ) ಮತ್ತು ಮುಮ್ಮಡಿ ಕೃಷ್ಣ (ಅಕಾಲವರ್ಷ; ನಿತ್ಯವರ್ಷದೇವ) ಪ್ರಮುಖರು.

ಇವರಲ್ಲಿ ಇಮ್ಮಡಿ ಮತ್ತು ಮುಮ್ಮಡಿ ಗೋವಿಂದರೀರ್ವರೂ 'ಪ್ರಭೂತವರ್ಷ'ರೆಂದು, ಇಮ್ಮಡಿ ಮತ್ತು ಮುಮ್ಮಡಿ ಕೃಷ್ಣರೀರ್ವರೂ 'ಅಕಾಲವರ್ಷ'ರೆಂದು ಕರೆದುಕೊಂಡದ್ದು, ಧ್ರುವಕುಮಾರ ಕಂಬನಿಗಿದ್ದ 'ಸುವರ್ಣವರ್ಷ' ವಿಶೇಷಣವನ್ನು, ಈತನ ಸೋದರನಾದ ಮುಮ್ಮಡಿ ಗೋವಿಂದನೂ ಬಳಸಿಕೊಂಡದ್ದು ಇಲ್ಲಿ ಗಮನಾರ್ಹ.

'ಅಮೋಘವರ್ಷ' ಪದವನ್ನು ಹೊರತುಪಡಿಸಿ, ಉಳಿದ ಈ ಶಾಸನೋಕ್ತ ವಿಶೇಷಣಗಳಾವನ್ನೂ ಮಾರ್ಗಕಾರನು ಗುರುತಿಸಿಲ್ಲ. ಒಮ್ಮೆ ಮಾತ್ರ ಬರುವ 'ನಿತ್ಯಮಲ್ಲವಲ್ಲಭ'(೨-೧೧೨) ಎಂಬುದು 'ನಿತ್ಯವರ್ಷ'ವನ್ನು ನೆನಪಿಸಿಕೊಟ್ಟರೂ ಈ ಎರಡು ಪದಗಳಲ್ಲಿರುವ ಅರ್ಥವ್ಯತ್ಯಾಸ-ಗುಣವ್ಯತ್ಯಾಸದ ಬಗ್ಗೆ ಅನುಮಾನವಿಲ್ಲ. 'ಪ್ರಭೂತ' ಮತ್ತು 'ನಿರುಪಮ' ಎಂಬ ಪದಗಳು ಕವಿರಾಜಮಾರ್ಗದಲ್ಲಿ ಕಂಡುಬಂದರೂ ಅವುಗಳನ್ನು ಬಳಸಿದ ಸಂದರ್ಭಗಳು 'ಪ್ರಭೂತವರ್ಷ' ಮತ್ತು 'ನಿರುಪಮ ಧಾರಾವರ್ಷ'ಕ್ಕಿಂತ ಭಿನ್ನ. ಈ ಕಾವ್ಯದಲ್ಲಿ ಯಾವುದಾದರೊಂದು ಪದವು 'ಪ್ರಭೂತವರ್ಷ'ಕ್ಕೆ ಸನಿಹವೆನಿಸಿದರೆ ಅದು ಶ್ರೀವಿಜಯನ ಬಿರುದು (೧-೧೫೦) ಮಾತ್ರ.

ಮಾಳಖೇಡ ವಂಶಾವಳಿಯಲ್ಲಿ ಬರುವ ಮೂವರು 'ಅಮೋಘವರ್ಷ'ರಲ್ಲಿ (ಅಮೋಘವರ್ಷ, ೮೧೪-೮೦; ಇಮ್ಮಡಿ ಅಮೋಘವರ್ಷ, ೯೨೭-೩೦ ಮತ್ತು ಮುಮ್ಮಡಿ ಅಮೋಘವರ್ಷ, ೯೩೬-೩೯) ಕವಿರಾಜಮಾರ್ಗದೊಡನೆ ತೊಡಗಿಸಿಕೊಂಡವನು ಯಾರು, ಎಂಬ ಪ್ರಶ್ನೆಗೆ ಉತ್ತರವು ಇತ್ಯರ್ಥದ ಹಂತವನ್ನು ತಲುಪಿದ್ದು, ಈ ಪಟ್ಟವನ್ನು ವಿದ್ವಾಂಸರು ಮುಮ್ಮಡಿ ಗೋವಿಂದನ ಪುತ್ರನಿಗೆ ಕಟ್ಟಿರುವುದರಿಂದ, ಆ ಪ್ರಶ್ನೆಯ ಪುನಃ ಪ್ರಸ್ತಾಪದ ಆವಶ್ಯಕತೆ ಇಲ್ಲಿಲ್ಲ. ಸಂಜನ್ ತಾಮ್ರಪಟಗಳಲ್ಲಿ (ಕ್ರಿ. ಶ. ೮೭೧), ಸ್ಪಷ್ಟಗೊಳಿಸಿರುವಂತೆ, ಇವನ ಬಾಲ್ಯನಾಮ 'ಸರ್ವ'. ತನ್ನ ಸೈನ್ಯದೊಡನೆ ಮುಮ್ಮಡಿ ಗೋವಿಂದನು 'ಸರ್ವ'ನ ರಾಜ್ಯದಲ್ಲಿ ಬೀಡು ಬಿಟ್ಟಾಗ ಜನಿಸಿದ ಮಗುವಿಗೆ ಅವನು ಈ ಹೆಸರು ಕೊಟ್ಟನೆಂದು ಇಲ್ಲಿ ವರ್ಣಿಸಲಾಗಿದೆ.[1] ಆದರೆ 'ಸರ್ವ'ನ ಪ್ರಸ್ತಾಪವು ಕವಿರಾಜಮಾರ್ಗದಲ್ಲೆಲ್ಲೂ ಬರುವುದಿಲ್ಲ.

**ಅವಲೋಕ :**

ರಾಷ್ಟ್ರಕೂಟರು ಬಳಸಿದ ಮತ್ತೊಂದು ಪದವೆಂದರೆ ಅವಲೋಕ, ಆದರೆ ಇದು 'ತುಂಗ' ಮತ್ತು 'ವರ್ಷ'ದ ಸಾರ್ವತ್ರಿಕತೆಯನ್ನು ಪಡೆದುಕೊಳ್ಳಲಿಲ್ಲ. ನಮಗೆ ತಿಳಿದಂತೆ ಈ ವಿಶೇಷಣವು ದಂತಿದುರ್ಗ (ಖಡ್ಗಾವಲೋಕ) ಮತ್ತು ಸ್ತಂಭ (ರಣಾವಲೋಕ) ರಿಗೆ ಮಾತ್ರ ಸೀಮಿತಗೊಂಡಿತ್ತು.

**'ವಲ್ಲಭ' ಪದದ ವಿಶೇಷತೆ :**

ರಾಷ್ಟ್ರಕೂಟರು ತಮ್ಮ ಪೂರ್ವಜರಿಂದ ಎರವಲು ಪಡೆದು ಪ್ರಸಾರಗೊಳಿಸಿದ ವಿಶೇಷಣವೆಂದರೆ 'ವಲ್ಲಭ'. ಮಾಳಖೇಡ ರಾಷ್ಟ್ರಕೂಟರ ಆಳ್ವಿಕೆ ಆರಂಭವಾಗುವುದಕ್ಕಿಂತ ಮುಂಚೆ, ಬಾದಾಮಿ ಚಾಳುಕ್ಯರೂ ಕಾಂಚಿ ಪಲ್ಲವರೂ ಈ ವಿಶೇಷಣದೊಂದಿಗೆ ತಮ್ಮನ್ನು ತಾವು ಗುರುತಿಸಿಕೊಂಡಿದ್ದರು. 'ಶ್ರೀವಲ್ಲಭ', 'ಪೃಥ್ವೀವಲ್ಲಭ', 'ಜನವಲ್ಲಭ', 'ಲೋಕವಲ್ಲಭ', ಎಂದೆಲ್ಲ ಚಾಳುಕ್ಯರೂ, 'ಸಕಲ ಭುವನ ವಲ್ಲಭ' ಎಂದೆಲ್ಲ (ಇಮ್ಮಡಿ ಸಿಂಹವರ್ಮ) ಪಲ್ಲವರೂ ಕರೆದುಕೊಂಡದ್ದನ್ನು ಶಾಸನಗಳು ದೃಢಪಡಿಸಿರುವುವು. 'ಶ್ರೀವಲ್ಲಭ',

'ಪೃಥ್ವೀವಲ್ಲಭ'ರೆಂದು ರಾಷ್ಟ್ರಕೂಟ ಮನೆತನದವರು ಕರೆದುಕೊಂಡಿದ್ದರಲ್ಲದೆ, 'ಕಲಿವಲ್ಲಭ' (ಧ್ರುವ), 'ಜನವಲ್ಲಭ' (ಮುಮ್ಮಡಿ ಗೋವಿಂದ), 'ಲಕ್ಷ್ಮೀವಲ್ಲಭ' (ನೃಪತುಂಗ), 'ಶ್ರೀವಲ್ಲಭ' (ಧ್ರುವ, ಕೃಷ್ಣ, ಮುಮ್ಮಡಿ ಗೋವಿಂದ ಅಮೋಘವರ್ಷ, ಮುಮ್ಮಡಿ ಇಂದ್ರ ಮತ್ತು ಮುಮ್ಮಡಿ ಕೃಷ್ಣ), ಎಂದೂ ಅವರು ಗುರುತಿಸಿಕೊಂಡು ಈ ಪದವನ್ನು ಹೆಚ್ಚು ಪ್ರಸಾರಗೊಳಿಸಿದ್ದರು.

'ವಲ್ಲಭ' ಪದದ ಪ್ರಾಕೃತ ರೂಪ ಬಲ್ಲಹ > ಬಲ್ಲರ. ರಾಷ್ಟ್ರಕೂಟರು 'ಬಲ್ಲಹ'ರೆಂದೇ ಸುಪ್ರಸಿದ್ಧರಾಗಿದ್ದರೆಂದು ಬಾಣರಸನ ಕಾರ್ಷಪಲ್ಲಿ ಶಾಸನವು ತಿಳಿಸುವುದು.[೧೦] ವಲ್ಲಭ, ವಲ್ಲಭರಾಜ, ವಲ್ಲಭೇಂದ್ರ ಎಂದೆಲ್ಲ ಬಾದಾಮಿ ಚಾಳುಕ್ಯರು ಕರೆದುಕೊಂಡಂತೆ, ರಾಷ್ಟ್ರಕೂಟರು ವಲ್ಲಭರಾಜ (ಉದಾ. ದಂತಿದುರ್ಗ-ಪೈಠಣ ತಾಮ್ರಪಟ), ವಲ್ಲಭನೃಪ (ಉದಾ. ಇಮ್ಮಡಿ ಕೃಷ್ಣ- ಕಡಬಶಾಸನ) ಎಂದು ಕರೆದುಕೊಂಡರು.[೧೧] ಅಲ್ಲದೆ ರಾಷ್ಟ್ರಕೂಟರ ಶಾಸನಗಳಲ್ಲಿ 'ಪೃಥ್ವೀವಲ್ಲಭ' ಎಂಬ ಪದವು ಸರ್ವಸಾಮಾನ್ಯವಾಗಿ ಬರುವುದು. ಆದರೆ ಇದನ್ನು ಮೊದಲು ಬಳಸಿದ ರಾಷ್ಟ್ರಕೂಟನು ದಂತಿದುರ್ಗನೆಂದು ಕಾಣುವುದು. ಕ್ರಿ. ಶ. ೭೫೪ ರ ಸಮನಗಡ್ ಶಾಸನ ಇದಕ್ಕೆ ಆಧಾರ ಒದಗಿಸುವುದು.[೧೨] ಕೊಣ್ಣೂರಿನ ಶಾಸನದಲ್ಲಿ 'ವಲ್ಲಭ ನರೇಂದ್ರದೇವ'ನೆಂಬ ಪದವೂ ಬಳಕೆಯಾಗಿರುವುದುಂಟು.

ವಲ್ಲಭ ಪದದ ಹಲವು ಪಾಠಾಂತರಗಳನ್ನು ಶಾಸನಗಳಲ್ಲಿ ಗುರುತಿಸಬಹುದು. ಇವುಗಳಲ್ಲಿ ಕುಂಸಿ ಶಾಸನದ 'ವಲ್ಲಹ', ಮಾವಳಿ ಶಾಸನದ 'ಬಲ್ಲಹ' ಪ್ರಮುಖ.[೧೩] ಆದರೆ ಈ ಪದದ ಅತ್ಯಂತ ವ್ಯಾಪಕ ವ್ಯಾಖ್ಯೆಯನ್ನು ಅರಿತುಕೊಳ್ಳಲು ಶಾಸನ ಮತ್ತು ಸಾಹಿತ್ಯಕ್ಕೆ ಮಾತ್ರ ಸೀಮಿತಗೊಳ್ಳದೆ ನಾವು ರಾಷ್ಟ್ರಕೂಟ ರಾಜ್ಯವನ್ನು ಸಂದರ್ಶಿಸಿದ ಅರಬ್ ಯಾತ್ರಿಕರಾದ ಸುಲೈಮಾನ್ (ಕ್ರಿ. ಶ. ೯೧೬), ಇಬ್ನ್ ಖುದಾದ್ಬಾ (ಕ್ರಿ. ಶ. ೯೧೨), ಅಲಿ ಮಸೂದ್ (ಕ್ರಿ. ಶ. ೯೪೪), ಅಲ್ ಇಸ್ತಖ್ರೀ (ಕ್ರಿ. ಶ. ೯೫೧), ಇಬ್ನ್ ಹೌಕಲ್ (ಕ್ರಿ. ಶ. ೯೭೬) ಮುಂತಾದವರ ಪ್ರವಾಸ ವರದಿಗಳನ್ನು ಪರಿಶೀಲಿಸಬೇಕು. ಇವರೆಲ್ಲರೂ ರಾಷ್ಟ್ರಕೂಟರನ್ನು 'ಮಾಂಕಿರ್'[ಮಾಳಖೇಡ]ದ 'ಬಲ್ಹರಾ' ಅಥವಾ 'ಬಲ್ಲರಾ' ಎಂದು ಗುರುತಿಸಿರುವರು. "ಬಲ್ಲರಾ ಎಂಬ ಬಿರುದನ್ನು ಈ ರಾಜವಂಶದ ಅರಸರೆಲ್ಲರೂ ಹೊಂದಿರುವರು. ಇದು ನಾಮಪದವಲ್ಲ. [ಪರ್ಶಿಯನ್ನರ] 'ಖುಸ್ರೋ'ಕ್ಕೆ ಸಮಾನವಾದ ಪದ", ಎಂದು ಸುಲೈಮಾನ್ ತನ್ನ **'ಸಿಲ್‌ಸಿಲಾ ತುತ್ತು ವಾರಿಖ್'**ನಲ್ಲಿ ಕ್ರಿ. ಶ. ೯೦೮ ರಲ್ಲಿ ದಾಖಲಿಸಿರುವನು.[೧೪]

ಕವಿರಾಜಮಾರ್ಗದಲ್ಲಿ 'ವಲ್ಲಭ' ಪದವು ಹಲವು ಬಾರೆ ಬರುವುದು. ಅವುಗಳಲ್ಲಿ ಕೆಲವು ರಾಷ್ಟ್ರಕೂಟ ಅರಸನನ್ನು ನೇರವಾಗಿ ಉಲ್ಲೇಖಿಸಿದರೆ (ಉದಾ. 'ವಲ್ಲಭ ಮತದಿಂ' (೧-೬೨), 'ಕೃತಕೃತ್ಯವಲ್ಲಭ ಮತದಿಂ' (೨-೩೦), 'ನಿತ್ಯವಲ್ಲಭ ಮತದಿಂ' (೨-೧೧) ಮುಂತಾಗಿ), ಇನ್ನು ಕೆಲವು ಅವನನ್ನು ಪರೋಕ್ಷವಾಗಿ ಮಾತ್ರ ಉಲ್ಲೇಖಿಸುವುವೇನೋ ಎನಿಸುವುದು (ಉದಾ. 'ಶ್ರೀಕೀರ್ತಿವಧು ಪ್ರಧಾನವಲ್ಲಭನಕ್ಕು' (೧-೨೧), 'ಮನೋನಯನ ವಲ್ಲಭಾನ್' (೨-೧೦೪), ಮುಂತಾಗಿ). ಶಾಸನಗಳಲ್ಲಿ ಬರುವ ವಲ್ಲಭರಾಜ, ವಲ್ಲಭೇಂದ್ರ, ವಲ್ಲಭನೃಪ, ಪೃಥ್ವೀವಲ್ಲಭ, ಕಲಿವಲ್ಲಭ, ಜನವಲ್ಲಭ, ಶ್ರೀವಲ್ಲಭ, ಲಕ್ಷ್ಮೀವಲ್ಲಭ, ಮುಂತಾದ ವಿಶೇಷಣಗಳು ಅಕ್ಷರಶಃ ಕವಿರಾಜಮಾರ್ಗದಲ್ಲಿ ಬರುವುದಿಲ್ಲ. ಆದರೆ ಜನವಲ್ಲಭನಿಗೆ ಬದಲಾಗಿ ಜನವಿನುತನ್ (೨-೪೨), ಜನಾನುಯಾತನ್ (೨-೧೫೬) ಎಂದೂ

ಪೃಥ್ವೀವಲ್ಲಭಕ್ಕೆ ಬದಲಾಗಿ ಧರಾವಲ್ಲಭ, ಧರಾಧಿಪ ಮತ್ತು ಧರಾಧಿಪತಿ (೩-೧, ೧೧; ೨-೫೮) ಎಂದಲ್ಲದೆ ಅವನೀಶ (೧-೧೧೫) ಪೊಡವಿಪತಿ (೧-೪೬), ಭೂಪತಿ, ಭೂಪೇಂದ್ರ (೧-೧೧೫; ೩-೧೧೧), ಮಹೇಶ್ವರ (೧-೧೧೫), ಮಹೀಪತಿ (೨-೨೦೨) ಎಂದು ಬರುವುವು.

ಕವಿರಾಜಮಾರ್ಗದಲ್ಲಿ ಬರುವ ವಿಶೇಷಣಗಳಲ್ಲಿ ಹಲವು ಮಾತ್ರ ನೇರವಾಗಿ ನೃಪತುಂಗನಿಗೆ ಸಂಬಂಧಿಸಿದ್ದರೆ, ಇನ್ನುಳಿದವು ಅವನನ್ನು, ಅವನ ಸಮಕಾಲೀನರನ್ನು, ಪರೋಕ್ಷವಾಗಿ ಉಲ್ಲೇಖಿಸುತ್ತಿರಬಹುದೆಂಬ ಭಾವನೆಯನ್ನುಂಟು ಮಾಡುವುವು. ಎರಡು ಸ್ಥೂಲ ವರ್ಗಗಳಡಿ ಇವನ್ನೆಲ್ಲ ತಂದರೆ, ಅವು ನೃಪತುಂಗನ ವ್ಯಕ್ತಿತ್ವದ ಎರಡು ಮುಖಗಳನ್ನು ಪರಿಚಯಿಸಬಹುದೆನಿಸುವುದು. ಅಂಥವುಗಳಲ್ಲಿ ಒಂದು 'ಅಖಿಳಧರಾವಲ್ಲಭ' ನೃಪತುಂಗನದು; ಮತ್ತೊಂದು, 'ಮಹಾವಿಭೂತಿ' ನೃಪತುಂಗನದು. ಮೊದಲ ವರ್ಗದ ಬಿರುದುಗಳು ಅವನ ಸಾಮ್ರಾಜ್ಯ, ಅರಸೊತ್ತಿಗೆ, ಕ್ಷಾತ್ರತೇಜಸ್ಸು ಮೊದಲಾದುದನ್ನು ಪ್ರತಿಬಿಂಬಿಸಿದರೆ, ಎರಡನೆಯ ವರ್ಗದ ಬಿರುದುಗಳು ಅವನ ಶೀಲ, ಪಾಂಡಿತ್ಯ, ಪೋಷಕ-ಪ್ರವೃತ್ತಿ, ಸಂಸ್ಕೃತಿ, ಜೀವನಾದರ್ಶ, ಮೊದಲಾದವುಗಳನ್ನು ಪ್ರತಿಬಿಂಬಿಸುವುವು. ಈ ಎಲ್ಲ ವಿಶೇಷಣಗಳನ್ನು ಗುರುತಿಸಿ ವ್ಯಾಖ್ಯಾನಿಸುವುದು ಸರಳವಲ್ಲವಾದುದರಿಂದ ಈ ಕಾರ್ಯಕ್ಕೆ ನಾನು ಇಲ್ಲಿ ಕೈ ಹಾಕಿಲ್ಲ; ಆದರೂ ಮತ್ತೊಂದು ಬಗೆಯ ಪ್ರಯತ್ನ ಮಾಡಿ ಈ ಗ್ರಂಥದಲ್ಲಿ ಬರುವ ಬಹುತೇಕ ವಿಶೇಷಣಗಳನ್ನು ಗುರುತಿಸಿ, ಅವುಗಳ ಒಂದು ತಾತ್ಕಾಲಿಕ ಪಟ್ಟಿಯನ್ನು ಸಿದ್ಧಗೊಳಿಸಿರುವೆ. ಈ ಪರಿಶೋಧನೆಯು ಇನ್ನಷ್ಟು ಮುಂದುವರಿದಾಗ, ಈ ಯಾದಿಯಲ್ಲಿ ಅನೇಕ ಬದಲಾವಣೆಗಳಾಗಬಹುದಾದ ಸಾಧ್ಯತೆಯ ಬಗ್ಗೆ ನನ್ನಲ್ಲಿ ಅನುಮಾನವಿಲ್ಲ.

ಇಲ್ಲಿ ದಪ್ಪಕ್ಷರಗಳಲ್ಲಿ ಸೂಚಿಸುವ ಪದಗಳು ನೇರವಾಗಿ ನೃಪತುಂಗನನ್ನು ಕುರಿತವುಗಳು, ನಕ್ಷತ್ರ ಗುರುತಿನಿಂದ ಸೂಚಿಸಿರುವವು ಅವನ ಪರೋಕ್ಷ ಉಲ್ಲೇಖಗಳು ಆಗಿದ್ದು ಎರಡನೆಯ ವರ್ಗದಡಿ ಬರುವ ಪದಗಳ ಪ್ರಸ್ತುತತೆಯ ಬಗ್ಗೆ ಭಿನ್ನಾಭಿಪ್ರಾಯಕ್ಕೆ ಸಾಕಷ್ಟು ಎಡೆಯುಂಟೆಂಬುದನ್ನು ನಾನು ಒಪ್ಪುವೆ.

## ೧. ಅಖಿಳಧರಾವಲ್ಲಭ ನೃಪತುಂಗ

**ಅಖಿಳಧರಾವಲ್ಲಭ (೩-೧)**
*ಅಖಿಳ ಭೂಭೃದುತ್ತುಂಗ (೩-೪೩)
**ಅತಿವಿಶದಯಶೋವೃತ್ತ (೨-೪೪)**
ಅತಿಶಯಧವಳ ಧರಾಧಿಪ (೩-೧೦)
*ಅತಿಶಯ ವಿಶಾಲಕೀರ್ತಿ ಧ್ವಜನಾನ್ (೧-೧೭)
**ಅಧೀಶ್ವರ (೧-೧೧೫)**
*ಅಪಾರಕೀರ್ತಿ ಧ್ವಜನ್ (೨-೧೮)
**ಅಪ್ರತಿಹತ ವಿಕ್ರಮನ್ (೧-೨)**
**ಅಮೋಘವರ್ಷ ನೃಪೇಂದ್ರ, (೩-೧)**
**ಅರಸ** (೧-೫೯, ೭೫, ೯೯, ೧೩೨;
೨-೧೦, ೧೨, ೪೨, ೧೫೧; ೩-೨೩೩)
*ಅರಿಗೋತ್ರಭೇದಿ (೩-೧೧೩)
*ಅರಾತಿನಿಕರತರುದವ ದಹನಂ (೩-೧೫೮)
*ಅಲಘುಭುಜನ್ (೩-೪೩)
*ಅವನೀಶನ್ (೧-೧೧೫)
**ಕೃತಕೃತ್ಯಮಲ್ಲನ್ (೧-೨, ೧೪೮)**
ಕೃತಕೃತ್ಯಮಲ್ಲವಲ್ಲಭ (೧-೭೭; ೨-೩೦)
*ಜಗನ್ನುತ (೨-೮)
*ಜನಪತಿ (೧-೯೯; ೨-೭೬)
*ಜನೇಶ (೨-೩೩)
**ಧರಾಧಿಪ [ಅತಿಶಯ ಧವಳ] (೩-೧೧)**
**ಧರಾವಲ್ಲಭ (೩-೧)**
*ನರನಾಯಕ (೨-೧೨೫)
*ನರಪತಿ (೧-೯೦, ೧೧೫, ೧೨೧)
*ನರಪಾಲ (೨-೨೨)
*ನರಮಹಿತಾ (೧-೮೨)

ನರಲೋಕಚಂದ್ರ (೧-೨೩)
*ನರೇಂದ್ರ (೧-೧೦೫)
ನಿತ್ಯಮಲ್ಲವಲ್ಲಭ (೨-೧೧)
*ನೃಪತಿ (೧-೧೧೮; ೨-೨೨; ೩-೨೦೭)
ನೃಪತುಂಗ (೧-೧; ೨-೨; ೩-೨೨೦, ೨೨೫)
ನೃಪತುಂಗದೇವ (೧-೪೮, ೪೫, ೧೪೭; ೨-೪೫, ೧೦೦, ೧೫೦-ವ; ೩-೬೬, ೧೦೮, ೨೦೮, ೨೩೧)
ನೃಪೇಂದ್ರ (೩-೧)
*ನೃಪವೃಷಭ (೩-೧೫೮)
*ಪ್ರಭು (೨-೭, ೧೫೫)
*ಪಾರ್ಥಿವಲೋಕನ್ (೩-೨೨೬)
*ಭಾಸುರ [ನೃಪದೇವ] (೨-೪೫)
*ಭೂತುತ್ತುದಾರ (೨-೬೨)
*ಭೂಪತಿ (೧-೧೧೫)
*ಭೂಪೇಂದ್ರ (೨-೨೭, ೩-೧೧೧)
*ಭೂಭೃದುತ್ತುಂಗ [ಅಖಿಳ] (೩-೪೩)
*ಭೂಭೃನ್ನಾಥ (೩-೧೧೧)
*ಮಹೀಪತಿ (೨-೧೦೨)
*ಮಹೀಶ್ವರ (೧-೧೧೫)
*ವಲ್ಲಭ (೧-೯೨)
ವಾಗೀಶ್ವರ (೨-೨೫೮)
*ಸಕಳಾತಿಜನವಿತಾನಂ (೨-೪೪)
*ಕ್ಷಿತಿಪತಿ (೨-೭, ೮)

## ೨. ಮಹಾವಿಭೂತಿ ನೃಪತುಂಗ

ಅಕಾರಣಧುರ್ಯಮಿತ್ರಂ (೩-೨೨೯)
ಅಖಿಳ ಚೋದ್ಯವಿದ್ಯಂ (೩-೨೨೩)
ಅತಿಧವಳ (೧-೧೮೪; ೨-೨೯, ೧೪೯; ೩-೧೧, ೧೦೭)
ಅತಿಶಯಧವಳಂ (೧-೨, ೫, ೧೪೮)
ಅತಿವಿಶದಯಶೋವೃತ್ತಂ (೨-೪೪)
*ಅರ್ತಿತಗಣಾರ್ಥಿತಕಲ್ಪವೃಕ್ಷಂ (೨-೧೦೭)
*ಅರ್ಥಿತಫಲದಾಯಿ (೩-೪೪)
*ಅನಪೇತದೋಷನ್ (೨-೧೭)
*ಅನುಪಮನ್ (೨-೧೭)
*ಅಪಗತಗುಣನ್ [ಅಪರಾಗಂ ಮುನಿಪತಿವೋಲ್] (೩-೧೫೭)
ಅಪಗತದೋಷನ್ (೨-೧೮)
*ಅಪಾಕೃತದೋಷನ್ (೩-೨೨೨)
*ಅಪಾರಕೀರ್ತಿಧ್ವಜನ್ (೨-೧೮)
*ಅಪೇತದೋಷನ್ (೨-೧೭)
*ಅಭಿನುತಮನನ್ (೨-೧೮)
ಅಭಿಮಾನು/ಅಭಿಮಾನಿ (೩-೨೨೪, ೨೨೯. ಅಲ್ಲದೆ ನೋ. ೧-೧೨೩; ೨-೨೮, ೧೪೨)
*ಅಭಿಮಾನಧನನ್ (೨-೧೭)
ಅಮೋಘವರ್ಷ (೩-೧, ೨೧೮. ಅಲ್ಲದೆ ನೋ. ೨-೧೦೩-೧೦೫)
ಅಸಹಾಯ ಸಾಹಸವಿನೋದಿ (೩-೨೨೦)
*ಉಚಿತನ್ (೨-೧೭)
ಉಪನೀತ (೩-೨೩೦)
*ಉದಾರಚರಿತೋದಯನ್ (೨-೧೭)
*ಉಪಚಿತಗುಣನಾನ್ (೨-೧೭)
*ಉಪಮೇತರನಾನ್ (೨-೧೮)
ಏಕರೂಪಂ (೩-೨೩೦)
*ಕಮಲಾಕರಬೋಧಕ (೩-೪೧)
*ಕಲ್ಪಕುಜಾತ (೩-೪೫)
ಕಳಾಕಳಾಪಂ (೩-೨೩೦)
*ಕಾಂತೋತ್ಕರ (೩-೪೨)
ಕೃತಕೃತ್ಯಮಾರ್ಗನ್ (೧-೧೪೮)
ಗುಣೋದಯನ್ (೩-೨೨೯. ಅಲ್ಲದೆ ನೋ. ೩-೨೨೧)
ಗೃಹೀತವಾಕ್ಯಂ (೩-೨೨೮)
ಜಯಾವತಾರ (ಅಂತರಂಗರಿಪುವರ್ಗ) (೩-೨೨೮)
ಧವಳ/ಧವಳೋಪ (೧-೨೪; ೨-೫೫ / ೧೫೩; ೩-೧೦೭)
ನರಲೋಕಚಂದ್ರ (೧-೨೩)
*ನವಮಲೋಕಪಾಲ (೩-೯೭)
*ನಿಜಾಯುತದೋಷ (೩-೧೫೮)
ನಿಲಯೈಕವೃತ್ತಿ (೩-೨೨೭)
ನೀತಿನಿರಂತರ (೧-೧, ೧೪೮, ೧೪೯, ೨-೧೦೧)
ನಿರತಿಶಯಾನುಭಾವನ್ (೨-೧೦೭)
ಪರಮಾನುಭಾವನ್ (೩-೨೨೯)
*ಪರಮೋದಯ (೩-೪೧ಸ ೧೪೯)
*ಪರಿಣತಗುಣನ್ (೩-೪೨)
*ಪರೋಪಕಾರನಿರತಾ (೨-೨೪; ೩-೨೨೯)
*ಪಾರ್ಥಿವಗುಣಯುತನ್ (೩-೪೪)
*ಪುರುಷೋತ್ತಮನ್ (೨-೮೦)
*ಪೊಡವಿಪತಿ (೧-೪೯)
ಪ್ರವರಮೂರ್ತಿ (೩-೨೨೯)
ಭುದರ್ಗೋತುಕಾವನ್ (೨-೨೨೮)
*ಮನೋನಯನವಲ್ಲಭಾ (೨-೧೦೪)
*ಮಹಾವಿಭೂತಿ (೩-೧೫೯)

ಮಹಾತ್ಮಂ (೩-೨೩೧)
[ಮಹೋದಯ] ತತ್ತ್ವಸತ್ತ್ವಂ (೩-೨೩೦)
*ಮಾನಧನ್ (೧-೧೦೬)
ಯಶೋವಿವಿಧಾಮೃತಸು [ಶಿಶಿರಿತ ನಿರ್ಮಲ] (೩-೨೩೦)
ವಾಗಾಧಿಪ (೨-೧೪೫)
*ವಿನೋದಶೀಲಂ (೩-೨೨೯)
*ವಿಪುಳಗುಣಿ (೨-೨೪)
*ವಿಪುಳಯಶೋಧನಲೋಭನ್ (೩-೧೫೮)
ವಿವೇಕಬೃಹಸ್ಪತಿ (೧-೬)
*ವಿಶದಶಶಧರಾಯತಕೀರ್ತಿ (೨-೨೪)
ವಿಶ್ವಲೋಕಂ [ಸ್ವಧೀವಿಭವಭಾವಿತ] (೩-೨೨೮)
ವೀರನಾರಾಯಣ (೧-೨; ೩-೧೮೧)
*ವ್ಯಕುಗತಭಾಯಾ (೨-೨೪)
ವ್ಯಸನವ್ಯಪೇತನ್ (೩-೨೩೦)
*ಶ್ರೀವನಿತಾ ಪ್ರಸವ (೩-೩೮)
*ಶ್ರೀಸಂಪನ್ನಂ (೨-೪೪)
ಸರಸಾಶ್ರಯ (೩-೨೨೯)
ಸರಸ್ವತೀತೀರ್ಥಾವತಾರ (೩-೨೨೬)

ನೃಪತುಂಗನು ಸಾರಸ್ವತಲೋಕದ ಸಮ್ರಾಟನೆಂಬ ಚಿತ್ರವು ಪ್ರಧಾನವಾಗಿ ಕವಿರಾಜಮಾರ್ಗದಲ್ಲಿ ಹೊರಹೊಮ್ಮುತ್ತಿದ್ದರೂ ಅವನು ಬೃಹತ್ ಸಾಮ್ರಾಜ್ಯದ ಅಧಿಪತಿಯೂ ಆಗಿದ್ದನೆಂಬುದನ್ನು ಇಲ್ಲಿ ಕಡೆಗಾಣಿಸಿಲ್ಲ. ವಿಶಾಲವಾದ ಸಾಮ್ರಾಜ್ಯದ 'ನೃಪತಿ'ಯಾಗಿ, ಸುದೀರ್ಘ ಕಾಲ (೮೧೪ ರಿಂದ ೮೮೦) ತನ್ನ ಹಿರಿಮೆಯನ್ನು ಮೆರೆದು, 'ವಿಪುಳತರ ಕಟಕನುದ್ಯದ್ ದ್ವಿಪಹ(ಂ) ಮಹಿಪೀನಿಷೇವ್ಯನ್' ಆದ ಈ 'ಭೂಭೃನ್ನಾಥ'ನನ್ನು, ಹಲವಾರು ಅರ್ಥಪೂರ್ಣ ವಿಶೇಷಣಗಳಿಂದ ಹೊಗಳಲಾಗಿದೆ. ಅರಸೊತ್ತಿಗೆ (ಮಾನಾರ್ಕಿಕಲ್)ಯನ್ನು ಸೂಚಿಸುವ ಸಾಮಾನ್ಯ ಪದಗಳಾದ 'ಅರಸ', 'ನೃಪ' ('ನೃಪತಿ', 'ನೃಪೇಂದ್ರ'), 'ಪ್ರಭು', 'ವಲ್ಲಭ', ಮುಂತಾದವುಗಳಲ್ಲದೆ, ಅವನ ವೈಶಿಷ್ಟತೆಯನ್ನು ಹೆಚ್ಚು ಸ್ಪಷ್ಟಗೊಳಿಸಲು ಒಂದು ವಿಶೇಷ ಪದವನ್ನೇ ಟಂಕಿಸಲಾಯಿತು. ಆ ಪದವೇ 'ನೃಪತುಂಗ'. ನೃಪರಲ್ಲಿ ಅತ್ಯಂತ ಎತ್ತರದ (ತುಂಗ) ಸ್ಥಾನದಲ್ಲಿದ್ದ ಈ ಪೊಡವಿಪತಿಯ ಪ್ರಭಾವವನ್ನು ಪ್ರತಿಬಿಂಬಿಸಲು ಇದಕ್ಕಿಂತಲೂ ಸಮಂಜಸವೂ ಸಮರ್ಥವೂ ಆದ ಬೇರೊಂದು ಪದವನ್ನು ಊಹಿಸುವುದು ಕಷ್ಟ.

## ಅಖಿಳಧರಾವಲ್ಲಭ :

'ತುಂಗ' ಪ್ರತ್ಯಯವು ರಾಷ್ಟ್ರಕೂಟರ ವಿಶೇಷತೆ ಎಂಬುದನ್ನು ಈಗಾಗಲೇ ಹೇಳಲಾಗಿದೆ. ಈ ರಾಜವಂಶದ ಆರಂಭಿಕ ಅರಸರಲ್ಲಿ ಕೆಲವರು 'ಜಗತ್ತುಂಗ', 'ಸಾಹಸತುಂಗ', 'ಶುಭತುಂಗ' ಎಂದು ಕರೆದುಕೊಂಡರೂ 'ನೃಪತುಂಗ' ಎಂಬ ವಿಶೇಷಣವು ಒಂದು ನಾಮಪದವಾಗಿ ಪರಿವರ್ತನಗೊಂಡದ್ದು ಮುಮ್ಮಡಿ ಗೋವಿಂದನ ಪುತ್ರ 'ಸರ್ವ' ನಿಂದಿರಬೇಕೆಂಬ ವಿಷಯವನ್ನೂ ಗಮನಿಸಲಾಗಿದೆ. 'ಜಗತ್ತುಂಗ' ಎಂಬ ಪದವನ್ನು ಕವಿರಾಜಮಾರ್ಗದಲ್ಲಿ ಅಕ್ಷರಶಃ ಬಳಸಲಾಗದಿದ್ದರೂ, ಅದೇ ಅರ್ಥವನ್ನು ತರುವ 'ಧರಾಧಿಪ', 'ಭೂಭೃನ್ನಾಥ', 'ಭೂಭೃದುತ್ತುಂಗ', 'ಅವನೀಶ', 'ಮಹೀಪತಿ', 'ಭೂಪೇಂದ್ರ', 'ಕ್ಷಿತಿಪತಿ', 'ಪೊಡವಿಪತಿ', 'ಧರಾವಲ್ಲಭ', ಈ ಮುಂತಾದ ಪದಗಳಿಗೆ ಈ ಗ್ರಂಥದಲ್ಲಿ ಕೊರತೆ ಇಲ್ಲ.

ನೃಪತುಂಗನಿಗೆ ದೊರೆತ ಸಾಮ್ರಾಜ್ಯವು ಸ್ವಅರ್ಜಿತವೆನ್ನುವುದಕ್ಕಿಂತ ಬಳುವಳಿಯಾಗಿ ಬಂದದ್ದು ಎಂದರೆ ಹೆಚ್ಚು ಸಮರ್ಪಕವಾಗಬಹುದು. ಅವನ ಪೂರ್ವಜರ– ಮುತ್ತಜ್ಜ (ಕೃಷ್ಣ)ನಿಂದ ಮೊದಲ್ಗೊಂಡು ಅಪ್ಪ (ಮುಮ್ಮಡಿ ಗೋವಿಂದ)ನ ವರೆಗಿನವರ– ಅವಿರತ

ಶ್ರಮದ ಫಲವೇ ಈ ಸಾಮ್ರಾಜ್ಯ. ತನಗೆ ದೊರೆತ ವಿಶಾಲ ರಾಜ್ಯದ ಅಧಿಪತ್ಯವನ್ನು ಸುಮಾರು ಆರೂವರೆ ದಶಕ ಕಾಲ 'ಅನುರಕ್ತ ಮಂಡಲ'ನಾಗಿ (ಮಾಂಡಲೀಕರನ್ನು ಒಲಿಸಿಕೊಂಡು) ಆಳಿದ ನೃಪತುಂಗನ ಕ್ಷಾತ್ರಶಕ್ತಿಯನ್ನು ಮಾತ್ರ ನಾವು ಹಗುರಾಗಿ ಪರಿಗಣಿಸುವಂತಿಲ್ಲ – ಏಕೆಂದರೆ, ಈ ಕಾರ್ಯವು 'ಪಾರ್ಥಿವಲೋಕನೂ' 'ಅಲಘುಭುಜನೂ' ಆದ 'ಪರಾಕ್ರಮಿಗೆ' ಮಾತ್ರ ಸಾಧ್ಯವಾಗುವಂತಹದಾಗಿತ್ತು. ಈ ಗುಣಗಳನ್ನೆಲ್ಲ ನೃಪತುಂಗನಲ್ಲಿ ಗುರುತಿಸಿ, ಅವನನ್ನು 'ಅರಿಗೋತ್ರಭೇದಿ', 'ಅರಾತಿನಿಕರ ತರುದಹನ ದಹನಂ', 'ಕೃತಕೃತ್ಯಮಲ್ಲ/ಕೃತಕೃತ್ಯಮಲ್ಲ ವಲ್ಲಭ', 'ನಿತ್ಯಮಲ್ಲವಲ್ಲಭ', 'ಅಪ್ರತಿಹತವಿಕ್ರಮ', 'ಸಕಳಾರಾತಿ ಜನವಿನುತ', ಎಂದೆಲ್ಲಾ ಬಣ್ಣಿಸಲಾಯಿತು. ಈ ಗುಣಗಳನ್ನೆಲ್ಲ ಸಂಪಾದಿಸಿಕೊಂಡವನು ಮಾತ್ರ 'ಅಖಿಳ ಧರಾವಲ್ಲಭ', 'ಅತಿಶಯವಿಶಾಲಕೀರ್ತಿಧ್ವಜ', 'ಅಪಾರಕೀರ್ತಿಧ್ವಜ', 'ನರನಾಯಕ', 'ಭೂಪೇಂದ್ರ', ಎಂಬ ಹೊಗಳಿಕೆಗೆ ಸತ್ಪಾತ್ರನಾಗಿ, 'ಜಗನ್ನುತ', 'ವ್ಯಪಗತಭಯ' ಮತ್ತು 'ಅಕಾರಣಧುರ್ಯಮಿತ್ರ'ನೆಂದು ಖ್ಯಾತಿಗೊಳ್ಳಲು ಸಾಧ್ಯವೆನಿಸಿರಬೇಕು.

**ಮಹಾವಿಭೂತಿ :**

ಇಲ್ಲಿಯ ವರೆಗೂ ನಾವು ಕಂಡದ್ದು ನೃಪತುಂಗ 'ಸಮ್ರಾಟ'ನ ಮುಖವನ್ನು ಮಾತ್ರ. ಆದರೆ ಇದಕ್ಕಿಂತ ಉಜ್ವಲವಾದ ಮತ್ತೊಂದು ಮುಖವು ಅವನಿಗಿತ್ತು, ಆದರೆ ಇವನ್ನು ಪ್ರತಿಬಿಂಬಿಸುವ ಎಲ್ಲಾ ವಿಶೇಷಣಗಳನ್ನು ಒಂದು ತಲೆಕಟ್ಟಿನಡಿ ಸಾಲುಗೊಳಿಸುವುದು ಬಹಳ ಪ್ರಯಾಸದಾಯಕ ಕಾರ್ಯ. ಇದಕ್ಕೆ ಕಾರಣ, ಅವನ ಆಂತರಿಕ ಹಾಗೂ ಬಾಹ್ಯ ಸಾಧನೆಗಳನ್ನೆಲ್ಲಾ ಸಮಗ್ರವಾಗಿ ಸೆರೆಹಿಡಿಯಬಲ್ಲ ಶಬ್ದವು ನಮಗೆ ನಿಲುಕದಿರುವುದು. ಸ್ಥೂಲವಾಗಿ ಈ ವಿಶೇಷಣಗಳನ್ನೆಲ್ಲ 'ಮಹಾವಿಭೂತಿ' ಎಂಬ ಪದದಡಿಯಲ್ಲಿ ತರಬಹುದೇನೋ?

'ಕುಲಜಾತಿ ವಿಶದಂ' ಎಂಬ ಸಾಮಾನ್ಯ ವರ್ಣನೆ ಕವಿರಾಜಮಾರ್ಗದಲ್ಲಿ ಬಂದರೂ, ನೃಪತುಂಗನ ವಂಶ, ಕುಲ, ಜಾತಿ, ಮೊದಲಾದವುಗಳ ಬಗ್ಗೆ ಇಲ್ಲಿ ವಿಶೇಷ ಚರ್ಚೆ ಇಲ್ಲ. ಇದರ ಬದಲಾಗಿ ಇಲ್ಲಿ ಒತ್ತು ಸಿಕ್ಕಿರುವುದು ಅವನ ಶೀಲ ಮತ್ತು ಸಾಧನೆಗೆ. ಇವನ 'ಸ್ವಕುಟುಂಬ' ಮತ್ತು 'ವಿಶ್ವಕುಟುಂಬ'ಗಳನ್ನು, 'ಕಾವ್ಯ' ಮತ್ತು 'ಕಳಾಕಳಾಪ'ಗಳನ್ನಲ್ಲದೆ ಈ ಬಗೆಯ ಮತ್ತಿತರ ಹಲವಾರು ಹವ್ಯಾಸಗಳನ್ನು ಇಲ್ಲಿ ಗುರುತಿಸಲಾಗಿದ್ದು, ಅವು ತಮ್ಮಷ್ಟಕ್ಕೆ ತಾವೇ ಹಂಚಿಕೊಂಡು, ನೃಪತುಂಗನ ಬಹುಮುಖ ಪ್ರತಿಭೆಯನ್ನು ಪ್ರದರ್ಶಿಸುವುವು. ಇವುಗಳಲ್ಲಿ ಅವನ ಗುಣ ಮತ್ತು ಶೀಲಕ್ಕೆ ಮೀಸಲಾದ 'ಚರಿತೋದಯ', 'ಅಪಗತಗುಣನ್', 'ಉಪಮೇತತರನ್', 'ಗುಣಯೋದಯನ್', 'ಪರಿಣತಗುಣನ್', ಎಂಬವುಗಳಲ್ಲದೆ 'ಧವಳ', 'ಅತಿಧವಳ', 'ಅತಿಶಯಧವಳ', ಎಂಬವು ಗಮನಾರ್ಹ. ಅವಗುಣಗಳಿಗೆ ಅವನಲ್ಲಿ ಅವಕಾಶವೇ ಇರಲಿಲ್ಲವೆಂಬುದನ್ನು ಸ್ಪಷ್ಟಪಡಿಸಲೇನೋ ಎಂಬಂತೆ ಅವನನ್ನು 'ಅಪೇತದೋಷನ್', 'ಅನಪೇತದೋಷನ್', 'ಅಪಗತದೋಷನ್', 'ಅಪಾಕೃತದೋಷನ್', ಎಂದೆಲ್ಲ ಘೋಷಿಸಲಾಗಿದೆ.

'ದಯಾಳು'ವಲ್ಲದೆ 'ಅತ್ಯುದಾರಿ'ಯೂ ಆದ ಈ ಅರಸನನ್ನು ಅಮೋಘವರ್ಷ (ಸಂಪತ್ತು, ಸೌಜನ್ಯ, ದಯೆ, ಜ್ಞಾನ, ಪ್ರೀತಿಯನ್ನು ಧಾರಾಕಾರವಾಗಿ ಸುರಿಸುವವನು) ಎಂದು

ಸಂಬೋಧಿಸಲಾಗಿತ್ತಲ್ಲದೆ, ಅವನ ಈ ಗುಣಗಳನ್ನು ಇನ್ನೂ ಹಲವಾರು ಪದಗಳಿಂದ ಶ್ಲಾಘಿಸಲಾಗಿವೆ. ಅವುಗಳಲ್ಲಿ ‘ವಿಪುಳಗುಣ’, ‘ಅರ್ಥಿಗಣಾರ್ಥಿತಕಲ್ಪವೃಕ್ಷ’, ‘ಕಲ್ಪಕುಜ’, ‘ಅರ್ಥಿತಫಲದಾಯಿ’, ‘ಪರೋಪಕಾರಿ’, ‘ಭುಜಗೋತ್ಪ್ರಕಾಪನ್’ ಎಂಬವು ಪ್ರಮುಖ. ಇಂತಹ ವಿಶೇಷಣಗಳೇ ಈ ಅರಸನನ್ನು ‘ಅಭಿನುತಮನ’ನನ್ನಾಗಿಸಿ, ‘ಅತಿಶಯ ವಿಶಾಲಕೀರ್ತಿ’ಯನ್ನೂ ‘ವಿಶದ ಶರಧರಾಯತಕೀರ್ತಿ’ಯನ್ನೂ ಸಂಪಾದಿಸಿಕೊಟ್ಟವು; ಇವನನ್ನು ‘ಅಪಾರಧ್ವಜ’ನೆನಿಸಿ, ‘ಅತಿಶಯ ಯಶೋವೃತ್ತ’ನನ್ನಾಗಿಸಿದವು. ಧರ್ಮ-ನಿಯಮಗಳಿಗೆ ಅಂಟಿಕೊಂಡೇ ಬಾಳಿದನೆನ್ನಲಾದ ಈ ಅರಸನನ್ನು ‘ನೀತಿನಿರಂತರ’ನೆಂದಲ್ಲದೆ ಮತ್ತಿನ್ನಾವ ವಿಶೇಷಣದಿಂದ ಗುರುತಿಸಲು ಸಾಧ್ಯ? ಅವನ ಹಿತಕರ ನುಡಿ, ಸುಸಂಸ್ಕೃತ ಸಂಭಾಷಣೆ, ಅರ್ಥಪೂರ್ಣ ಸಂವಾದಗಳು ಅವನನ್ನು ‘ನಯ ವಿನಿಮಯ... ಮಂತ್ರ’ನೆಂದೇ ಪ್ರಸಿದ್ಧಗೊಳಿಸಿದವು. ಇವನ ಮತ್ತೊಂದು ಸಹಜಗುಣವೆಂದರೆ ಗರ್ವರಹಿತ ಸ್ವಾಭಿಮಾನ. ಗೌರವವೇ ಸರ್ವಸಂಪತ್ತೆಂದು ಬಗೆದುದರಿಂದ, ಅವನನ್ನು ‘ಅಭಿಮಾನಂ’, ‘ಮಾನಧನನ್’, ‘ಅಭಿಮಾನಧನನ್’ ಎಂದೆನಿಸಿದವು.

ನೃಪತುಂಗನ ಸಾರಸ್ವತ ಗುಣವನ್ನು ಕವಿರಾಜಮಾರ್ಗದಲ್ಲಿ ವಿಶೇಷವಾಗಿ ಗುರುತಿಸಲಾಗಿದೆ. ವ್ಯಾಕರಣ, ಕಾವ್ಯ, ನಾಟಕ, ಲೋಕಕಳಾ, ಸಮಯ, ಅಲಂಕಾರ ಶಾಸ್ತ್ರಗಳಲ್ಲದೆ, ಅವನಲ್ಲಿದ್ದ ‘ಅಖಿಳಚೋದ್ಯವಿದ್ಯ’ಯಲ್ಲಿಯ ಪರಿಣತಿಯನ್ನು ಗುರುತಿಸಿದುದರಿಂದ ಅವನ ಆಸ್ಥಾನವು ‘ವಿವೇಕ ಬೃಹಸ್ಪತಿ’ಯ ನೆಲೆಯೆಂದೇ ಪ್ರಸಿದ್ಧಿಗೊಂಡಿತು. ಅವನೊಬ್ಬ, ‘ವಾಗಾಧಿಪ’ನೂ ‘ಕಳಾಕಳಾಪ’ನೂ ‘ಸರಸ್ವತೀ ತೀರ್ಥಾವತಾರ’ನೂ ಆಗಿದ್ದುದರಿಂದ ಸಾಹಿತ್ಯ, ಶಾಸ್ತ್ರ, ಕಲೆ ಮತ್ತು ಸಂಗೀತದ ಒಳಸೂಕ್ಷ್ಮತೆಗಳ ಬಗ್ಗೆ ಈ ‘ನೃಪವೃಷಭ’ನು ‘ಕವಿವೃಷಭ’ರೊಡನೆ ಸಂವಾದ ಮಾಡಲು ಸರ್ವಬಗೆಯ ಅರ್ಹತೆಯನ್ನು ಪಡೆದವನೆನಿಸಿದ್ದನು. ತನ್ನ ಆಸ್ಥಾನ ಪಂಡಿತರ ಚರ್ಚೆಯ ‘ವಿಲಸದ್ ಗುಣಾಗುಣ’ಗಳನ್ನು ಗುರುತಿಸಿ, ಅದನ್ನು ಮುಕ್ತಾಯಗೊಳಿಸಲು ತನ್ನ ನಿರ್ಣಯವನ್ನು ಕೊಡಬಲ್ಲವನಾದನು. ಈ ಕಾರಣ ಇವನ ‘ಅಭಿಮತ’ವೇ ‘ಮಾರ್ಗ’ವೆನಿಸಿ, ‘ನೃಪತುಂಗ ದೇವಾನುಮತ’, ‘ನೀತಿನಿರಂತರ ಪ್ರತೀತ’, ಎಂಬೆಲ್ಲ ಪದಗಳಿಂದ ಗೌರವ ಗಳಿಸಿಕೊಂಡಿತು.

‘ಅಂತರಂಗ ರಿಪು’ಗಳನ್ನು ಗೆದ್ದು ‘ಜಯಾವತಾರಿ’ ಎನಿಸಿದ ನೃಪತುಂಗನು ‘ನಿಲಯೈಕವೃತ್ತಿ’ಪರನೂ ಆಗಿದ್ದನು. ಗೃಹಸ್ಥನಾಗಿದ್ದರೂ ‘ವ್ಯಸನ ವ್ಯಪೇತ’ನಾಗಿದ್ದನಂತೆ! ‘ಅಂತಃಪುರ’ದವರಿಗೆ ಅವನು ‘ಮನೋವಲ್ಲಭ’, ‘ಕಾಂತೋತ್ಕರ’, ‘ಕಮಲಾಕರ ಬೋಧಕ’. ‘ಶ್ರೀಸಂಪನ್ನ’ನಾದುದು ಮಾತ್ರವಲ್ಲದೆ, ‘ವಿನೋದಶೀಲ’ನೂ, ‘ಅಸಹಾಸ ಸಾಹಸವಿನೋದ’ನೂ, ‘ಸರಸಾಶ್ರಯ’ನೂ ಆಗಿದ್ದನು. ‘ಮಹಾಕಾವ್ಯ’ದ ಪ್ರಧಾನ ವಸ್ತುಗಳಲ್ಲೊಂದಾದ ಅರಸನ ‘ಉದ್ಯಾನಲೀಲಾ’, ‘ಜಲಕ್ರೀಡಾ ವಿನೋದ’, ‘ಮದನಮಾದ್ಯ-ದ್ಯಾವನೋದ್ಯಾನ’, ‘ರಮಣಿರಣಿತಗೋಷ್ಠಿ’ ಮೊದಲಾದವುಗಳಿಗೆ ಈ ಕಾವ್ಯದಲ್ಲಿ ಅಭಾವವಿಲ್ಲ. ‘ಶ್ರೀಧರ್ಮಕಾಮಾರ್ಥ ಮೋಕ್ಷ’ಗಳನ್ನು ಕರಗತ ಮಾಡಿಕೊಂಡಿದುದರಿಂದಲೇ ಅವನು ‘ಪರಮ ಸುಖಪದ’ ಗಳಿಸಿಕೊಳ್ಳಲು ಸಾಧ್ಯವಾಯಿತು.

ನೃಪತುಂಗನು ಆಳಿದ ಸಾಮ್ರಾಜ್ಯಕ್ಕೆ ಮೇರೆಗಳಿದ್ದವು. ಆದರೆ ಅವನ ಮನೋಲೋಕಕ್ಕೆ ಮೇರೆಗಳಿರಲಿಲ್ಲ. ಈ ಕಾರಣ ಅವನು ‘ಅನುಪಮ’ನೆಂದೂ,

‘ವಿಶ್ವಲೋಕ’ನೆಂದೂ ಖ್ಯಾತಿಗೊಂಡನು. ದೈವೀಸಂಭೂತನಾದ. ಅವನು ‘ನರಲೋಕಚಂದ್ರ’. ‘ನವಮಲೋಪಾಲ’, ‘ವೀರನಾರಾಯಣ’, ‘ಭಾಸುರ’, ‘ಮಹೇಶ್ವರ’, ‘ವಾಗೀಶ್ವರ’, ಎಂಬೆಲ್ಲ ಪದಗಳಿಂದ ಸ್ತುತಿಸಲ್ಪಟ್ಟನು. ಇವೆಲ್ಲವೂ ಒಗ್ಗೂಡಿ ಅವನನ್ನು ‘ನಿರತಿಶಯಭಾವ’, ‘ಪರಮಾನುಭಾವ’, ‘ಪರಮೋದಯ’, ‘ಪ್ರವರಮೂರ್ತಿ’, ‘ಪುರುಷೋತ್ತಮ’, ‘ಮಹೋದಯ’, ‘ಮಹಾತ್ಮ’ ಎಂದಲ್ಲದೆ ‘ಮಹಾವಿಭೂತಿ’ಯೂ ಎಂದೆನಿಸಿದುವು.

**ಆಕರ ಟಿಪ್ಪಣಿ :**

೧. ೧-೧, ೪೪, ೪೫, ೧೪೭, ೧೫೦ ವ; ೨-೧, ೨, ೪೫, ೧೦೦, ೧೦೭, ೧೫೫ ವ; ೩-೧, ೯೯, ೧೦೮, ೨೦೮, ೨೨೦, ೨೨೫, ೨೩೧, ೨೩೨ ವ. ಈ ಅರಸನ ಶಿರೂರು ಶಾಸನದಲ್ಲಿ ಬರುವ (ಕ್ರಿ.ಶ. ೮೬೬) ‘ನೃಪತುಂಗ ನಾಮಾಂಕಿತ ಲಕ್ಷ್ಮೀವಲ್ಲಭ’ನೆಂಬ ‘ಶ್ರೀಮದ್-ಅಮೋಘವರ್ಷ ನೃಪತುಂಗ ನಾಮಾಂಕಿತನ್’ ಎಂಬ ಉಲ್ಲೇಖಗಳೊಡನೆ ಹೋಲಿಸಿ ನೋಡಿ– ಇಐ (ಎಪಿಗ್ರಾಫಿಯಾ ಇಂಡಿಕಾ) VII, ಪು. ೨೦೨

೨. ೩-೧, ೨೧೮. ಅಲ್ಲದೆ ನೋಡಿ ೨-೧೦೩ (‘ಸೂಚ್ವಿನಮೋಷವೆಂಬುದುಂ’), ೨-೧೦೪ (‘ಮನೋನಯನ ವಲ್ಲಭನೊಳ್ ಮನದೊಲಂಪಿನಿಂ ನೆರೆವೆನ್-ಅಮೋಘಂ’) ಮತ್ತು ೨-೧೦೫ (‘ಬರಿಪೆನಮೋಘಮ್-ಇಂದ್-ಉಪವನಾಂತರದಲ್ಲಿಗೆ’). ಕೊನೆಯ ಮೂರು ಪ್ರಯೋಗಗಳು ನೃಪತುಂಗನನ್ನೇ ಉದ್ದೇಶಿಸಿ ಮಾಡಿದವು ಎಂದು ನಿಶ್ಚಿತವಾಗಿ ಹೇಳಲು ಬಾರದು.

೩. ಉದಾಹರಣೆಗೆ ಶಿರೂರು ತಾಮ್ರಪಟ. ನೋ. ಮೇಲಿನ ಉಲ್ಲೇಖ.

೪. ೩-೧

೫. ಇಐ XXV, ಶಾ. ಸಂ. ೧೪, ಪು. ೧೦೬, ೧೧೨. ಅಲ್ಲದೆ ನೋ. ಇಐ XXXVI, ಶಾ. ಸಂ. ೮

೬. ಇಐ III, ಪು. ೫೪; IV, ಪು. ೧೦೩; ಐಎ (ಇಂಡಿಯನ್ ಏಂಟಿಕ್ವೇರಿ) XVI, ಪು. ೧೩೪, XXXV, ಪು. ೧೦೬, XXXVI, ಪು. ೫೮ ಮಂತಾಗಿ. ಅಲ್ಲದೆ ನೋ. ಇಐ III, ಸಂ. ೨೯; XXXVI ೨೮ ಮತ್ತು ೨೯; XXXIV, ಸಂ. ೧೯; XXXVI, ಶಾ. ಸಂ. ೮ ಮತ್ತು ೨೯; XXV, ಶಾ. ಸಂ. ೧೪

೭. ಈ ವಿಶೇಷಣವನ್ನು ಪ್ರಧಾನವಾಗಿ ಮೊದಲನೆಯ ಮತ್ತು ಇಮ್ಮಡಿ ಕೃಷ್ಣರಿಗೆ (ಇಐ VI, ಪು. ೧೮೯; I, ಪು. ೫೯) ಮತ್ತು ಮುಮ್ಮಡಿ ಇಂದ್ರ (ಜೆಬಿಬಿಆರ್‌ಏಎಸ್– ಜರ್ನಲ್ ಆಫ್ ಬಾಂಬೆ ಬ್ರ್ಯಾಂಚ್ ಆಫ್ ರಾಯಲ್ ಏಸಿಯಾಟಿಕ್ ಸೊಸೈಟಿ– XVIII, ಪು. ೨೫೯; ಇಐ IX, ಪು. ೨೪, XXXII, ಪು. ೪೫)ನಿಗೆ ಅನ್ವಯಿಸಿದಂತೆ ಕಂಡುಬರುವುದು.

೮. ನೃಪತುಂಗನನ್ನು ‘ದೇವ’ ಎಂದು ಕರೆದಿರುವ ಶಾಸನಗಳಿಗೆ ನೋ. ಕನ್ಹೇರಿ (ಐಎ XIII, ಪು. ೧೩೬ (ಕ್ರಿ.ಶ. ೮೫೧), ದಿವ್ಹೋಲಿ ಮತ್ತು ಕರ್ಹಾಡ (ಇಐ IV, ಪು. ೨೨೯), ಶಿರೂರು (ಇಐ VII, ಪು. ೧೦೧-೮) ಮುಂತಾದ ಶಾಸನಗಳನ್ನು.

೯. ಇಐ XVIII ಶಾ. ಸಂ. ೨೬

೧೦. ಸೌಇಇ (ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್) ಶಾ. ಸಂ. ೬

೧೧. ಇಐ III, ಪು. ೧೦೬; ಐಎ XIII, ಪು. ೬೯; ಇಐ IV, ಪು. ೩೩೬, ೩೪೬

೧೨. ಇಐ VI, ಪು. ೨೫

೧೩. ಎಕ (ಎಪಿಗ್ರಾಫಿಯ ಕರ್ನಾಟಿಕಾ) VII, ಸೊರಬ್ ೯ ಮತ್ತು ೬೮

೧೪. ಸುಲೈಮಾನ್‌ನು ಕ್ರಿ.ಶ. ೯೦೮ ರಲ್ಲಿ ದಾಖಲಿಸಿದುದನ್ನು ಸಿರಾಫ್‌ನ ಅಬೂಝೈದುಲ್ ಹಸನ್ ಕ್ರಿ.ಶ. ೯೧೬ ರಲ್ಲಿ ಪರಿಷ್ಕರಿಸಿ ಪೂರ್ತಿಗೊಳಿಸಿದನು. ಇಲಿಯಟ್, ಹಿಸ್ಟರಿ ಆಫ್ ಇಂಡಿಯಾ, ಸಂ. ೧, ಪು. ೩-೪, ೧೩, ೧೯-೨೪. ಅಲ್ಲದೆ ನೋ. ರೀವ್, ಪಿ.ಬಿ.ಎಸ್. ಹಿಸ್ಟರಿ ಆಫ್ ದಿ ರಾಷ್ಟ್ರಕೂಟಾಸ್ (ರಾಠೋಡಾಸ್), ಜೈಪುರ, ೧೯೯೭. ಪು. ೩೯. ಸೋಲಂಕಿ (ಚಾಳುಕ್ಯ)ವಲ್ಲಭ ಕೀರ್ತಿವರ್ಮನನ್ನು ಸೋಲಿಸಿ ದಂತಿವರ್ಮನು ಈ ಬಿರುದನ್ನು ಧರಿಸಿದನೆಂಬ ವಾದವೂ ಉಂಟು. ನೋ. ರೀವ್, ಪು. ೪೨

● ●

**ಡಾ. ಷ. ಶೆಟ್ಟರ್** : ಡಾ. ಎಸ್. ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ ಕ್ಯಾಂಪಸ್, ಬೆಂಗಳೂರು - ೫೬೦ ೦೧೨

# ಸಿ.ಪಿ.ಕೆ. ಅವರ ಕಾವ್ಯ

## ಮಾಧವ ಕುಲಕರ್ಣಿ

ಸಿ.ಪಿ.ಕೆ. ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಡಾ. ಸಿ. ಪಿ. ಕೃಷ್ಣಕುಮಾರರ 'ಆಯ್ದ ನೂರೊಂದು ಕವನ'ಗಳನ್ನು ಕುರಿತು ಈ ಲೇಖನ. 'ಸಿಪಿಕೆ ಸಮಗ್ರ ಕವಿತೆ' ಎಂಬ ಅವರ ಸಮಗ್ರ ಕವಿತೆಗಳ ಸಂಗ್ರಹದ 'ಅರಿಕೆ'ಯಲ್ಲಿ ಅವರು ಹೀಗೆ ಹೇಳಿದ್ದಾರೆ : ''ನವೋದಯ, ನವ್ಯಗಳ ಸಂಧಿವಶೆಯಲ್ಲಿ ಕಣ್ತೆರೆದ ನನ್ನ ಕಾವ್ಯ ಇಂದಿನ ದಲಿತ-ಬಂಡಾಯೋತ್ತರ (?) ಘಟ್ಟದ ವರೆಗೂ ಹರಿದು ಬಂದಿದೆ.'' ಸಿ.ಪಿ.ಕೆ. ಯವರ ಕಾವ್ಯಸಂದರ್ಭದಲ್ಲಿ ಅವರ ಈ ಮಾತನ್ನು ಸೂಕ್ಷ್ಮವಾಗಿ ಗಮನಿಸಬೇಕು. ಅವರು ''ಸಂಧಿವಶೆಯಲ್ಲಿ'' ಎಂಬ ಪದವನ್ನು ಉಪಯೋಗಿಸಿದ್ದಾರೆ. ಆದರೆ 'ಸಂಧಿ'ಗಿಂತ ಇಂದು 'ಸಂದಿಗ್ಧ' ಎಂಬ ಪದ ವಿಮರ್ಶಕನಾದ ನನಗೆ ಹೆಚ್ಚು ಉಚಿತವಾಗಿ ತೋರುತ್ತದೆ. ಯಾಕೆ ಎಂಬುದನ್ನು ಸ್ವಲ್ಪದರಲ್ಲಿ ವಿವರಿಸುತ್ತೇನೆ. ಕುವೆಂಪು ಮತ್ತು ಬೇಂದ್ರೆಯವರು ನವೋದಯ ಕಾವ್ಯದ ಎರಡು ದೊಡ್ಡ ಸಾಧನೆಗಳಿಗೆ ಇನ್ನೊಂದು ಹೆಸರುಗಳಷ್ಟೆ. ಇದಾದ ನಂತರ ಬಂದ ಅಡಿಗರ ಕಾವ್ಯ– ಕಾರಣಗಳೇನೆ ಇರಲಿ– ಹೆಚ್ಚು ಕ್ಲಿಷ್ಟ , ಮತ್ತು ಸರಳತೆಯಿಂದ ದೂರ ಸರಿದ ಕಾವ್ಯ. ಕುವೆಂಪು ಮತ್ತು ಬೇಂದ್ರೆಯವರು ಕಾವ್ಯವನ್ನು ಕಟ್ಟಿಕೊಂಡೇ ಹುಟ್ಟಿದಂತೆ ತೋರಿದರೆ, ಅಡಿಗರ ಕಾವ್ಯ ಚಿಂತನಪರತೆಯನ್ನು ತನ್ನ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡೇ ಬೆಳೆಯಿತು. ಕಾವ್ಯವು ಹೀಗೆ ತನ್ನ ನೆಲೆಗಳಿಂದಲೇ ಪಲ್ಲಟಗೊಂಡಾಗ ಎರಡು ಧ್ರುವಗಳ ನಡುವೆ ಬೆಳೆಯುವ ಕಾವ್ಯವು ಒಂದು ವಿಚಿತ್ರ ಬಗೆಯ ಸಂದಿಗ್ಧವನ್ನು ಎದುರಿಸಬೇಕಾಗುತ್ತದೆ. ಇದು ಕನ್ನಡದಲ್ಲಿ ಮಾತ್ರ ಸಂಭವಿಸಿದ ಸಂದಿಗ್ಧವಲ್ಲ. ಇದು ಎಲ್ಲ ಭಾಷೆಗಳಲ್ಲೂ ಮಹಾ ಲೇಖಕರು ಅದ್ಭುತವನ್ನು ನಿರ್ಮಿಸಿದ ನಂತರ ಉಂಟಾದ ನಿರ್ವಾತದಿಂದ ಉದ್ಭವವಾದ ಸಂದಿಗ್ಧವೇ ಆಗಿದೆ. ಇದನ್ನು ಎದುರಿಸಿದ ರೀತಿಯನ್ನು ನಾವು ಜಿ. ಎಸ್. ಶಿವರುದ್ರಪ್ಪನವರ ಕಾವ್ಯದಲ್ಲಿ ಮತ್ತು ಚೆನ್ನವೀರ ಕಣವಿಯವರ ಕಾವ್ಯದಲ್ಲಿ ಹೇಗೆ ಕಾಣುತ್ತೇವೆಯೊ ಹಾಗೆಯೇ ಆ ಸಂದಿಗ್ಧವನ್ನು ಎದುರಿಸಿದ ಇನ್ನೊಂದು ಪರಿಯನ್ನು ಸಿ.ಪಿ.ಕೆ.ಯವರ ಕಾವ್ಯದಲ್ಲಿ ಕಾಣುತ್ತೇವೆ.

ಕ್ಲಿಷ್ಟತೆಯಿಂದ ದೂರವಾಗುವುದೆಂದರೆ ಅಭಿವ್ಯಕ್ತಿಯಲ್ಲಿ ಸರಳತೆಯನ್ನು ತರುವುದೇ ಆಗಿದೆ. ಈ ಸರಳತೆಯು 'ಮಾತಿ'ಗೆ ಸಮೀಪವಾಗುತ್ತ ಹೋಗುತ್ತದೆ. 'ಸಂದಿಗ್ಧ ಕಾಲ'ದಲ್ಲಿ ಮಾತು ಕಾವ್ಯದ ಜೀವಾಳವಾಗುವುದಕ್ಕೆ ಮೂಲತಃ ಇದೇ ಕಾರಣವಾಗಿರುತ್ತದೆ. 'ಮಾತು' ಗದ್ಯಕ್ಕೆ ಸಮೀಪವಾದರೂ ಅದರಲ್ಲಿಯ ಲಯಗಾರಿಕೆಯ ಅಂಶಗಳನ್ನು ಅರ್ಥಪೂರ್ಣವಾಗಿ ಕಾವ್ಯದಲ್ಲಿ ಪ್ರಯೋಗಿಸುವುದರಲ್ಲಿ ಮತ್ತು ಇಂಥ ಪ್ರಯೋಗಗಳಲ್ಲಿ ಯಶಸ್ಸನ್ನು ಕಾಣುವುದರಲ್ಲಿ ಸಂದಿಗ್ಧ ಕಾವ್ಯದ ಅಗ್ನಿಪರೀಕ್ಷೆ ನಡೆಯುತ್ತದೆ. ಸಿ.ಪಿ.ಕೆ.ಯವರ ಕಾವ್ಯ ಕೂಡ ಇಂಥ ಪರೀಕ್ಷೆಯನ್ನು ಎದುರಿಸುತ್ತದೆ. ಈ ಅರ್ಥದಲ್ಲಿ ಅವರ ಕಾವ್ಯ ಸಮಕಾಲೀನ ಮತ್ತು ಕಾವ್ಯಸಂದರ್ಭದ ಎಚ್ಚರದೊಡನೆ ಬರೆದ ಕಾವ್ಯವಾಗಿದೆ.

ಭಾವಗೀತೆಯ ಲಯವನ್ನು ತನ್ನ ಒಡಲಲ್ಲಿಟ್ಟುಕೊಂಡು ಮಾತಿಗೆ ಸಮೀಪವಾಗುವ ಕಾವ್ಯ ಸಂದರ್ಭದ ಅನಿವಾರ್ಯತೆಯನ್ನು ಸಿ.ಪಿ.ಕೆ.ಯವರು ತಮ್ಮ ಕಾವ್ಯದುದ್ದಕ್ಕೂ

ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಇವರ ಒಟ್ಟು ಪರಿಣಾಮವೇನೆಂದರೆ ದೈನಂದಿನ ಬದುಕಿನ ಹಲವಾರು ಅಂಶಗಳು ಅವರ ಕಾವ್ಯದ ಅನಿವಾರ್ಯ ಅಂಶಗಳಾಗುತ್ತವೆ ಮತ್ತು ದೈನಂದಿನ ಬದುಕಿನ ಪಾತಳಿಯ ಭೂಮಿಕೆಯಿಂದ ಅನೂಹ್ಯಗಳತ್ತ ಅವರು ಬೆರಗಿನಿಂದ ನೋಡುತ್ತಾರೆ. ಈ ಬೆರಗು ಒಮ್ಮೊಮ್ಮೆ ಮುಗ್ಧತೆಗೆ ದಾರಿ ಮಾಡಿಕೊಡುತ್ತದೆ. ಈ ಮುಗ್ಧತೆಯೇ ಅವರ ಕಾವ್ಯಕ್ಕೆ ವಿಶೇಷವಾದ ಮೆರುಗನ್ನೂ ನೀಡಿದೆ. ಪ್ರಾರಂಭದಲ್ಲಿ ಬರುವ 'ಹಿಂದೊಮ್ಮೆ ಇಲ್ಲಿದ್ದೆ ನಾನು!' ಎಂಬ ಕವಿತೆಯಲ್ಲಿ ನನ್ನ ಈ ಮಾತುಗಳು ಕಾವ್ಯರೂಪವನ್ನು ಹೇಗೆ ಪಡೆದಿವೆ ಎಂಬುದನ್ನು ಕಾಣಬಹುದು. ಸತ್ತವರು ಆಕಾಶದ ಚುಕ್ಕಿಗಳಾಗುತ್ತಾರೆಂಬ ಒಂದು ನಂಬಿಕೆಯಿದೆ. ಬಾಲ್ಯದಲ್ಲಿ ಈ ನಂಬಿಕೆಯು ಗಾಢವಾಗಿಯೇ ಇರುತ್ತದೆ. 'ಬಿಟ್ಟು ಹೋದ' ಮನೆಯೊಂದು ಈಗ 'ಕ್ಷೌರದ ಸಲೂನಾ'ಗಿ ಪರಿವರ್ತಿತವಾಗಿದೆ. ಆ ಮನೆಯಲ್ಲಿ ಕವಿಯು ಹಿಂದೆ ಕಂಡ ಜೀವನೋತ್ಸಾಹವು ಕವಿತೆಯಲ್ಲಿ ಬಹು ಸುಂದರವಾಗಿ ಚಿತ್ರಿತವಾಗಿದೆ :

> ನಿತ್ಯ ಮಂದಾಸನದಿ ಜೋಡಿ ತಣ್ಣೊಡರಿಲ್ಲಿ
> ಕುಡಿಯಾಡಿಸಿತ್ತು;
> ಧೂಪಧೂಮದ ತೆರೆಯ ನರುಗಂಪು ಗಾಳಿಯಲಿ
> ಬೆರೆಯುತಿತ್ತು!
> ಆರತಿಯ ಬೆಳಗು
> ಘಂಟೆಗಳ ಮೊಳಗು
> ದಿವಸ ದಿವಸವು ಇಲ್ಲಿ ನಡೆಯುತಿರಲು...

ಈ ಉತ್ಸಾಹಕ್ಕೆ ಮೊದಲು, ಈಗ ಈ ಮನೆಯಲ್ಲಿಯ 'ಜೇಡರ ಬಲೆ' ಮತ್ತು ಈ ಮನೆಯು ಸೆಲೂನಾಗಿ ಪರಿವರ್ತಿತಗೊಂಡಿರುವ ಅವನತಿಯ ಚಿತ್ರವಿದೆ. ಇಲ್ಲಿಯೇ "ಹಿಂದೊಮ್ಮೆ ಇಲ್ಲಿದ್ದೆ ನಾನು" ಎಂಬ 'ಮಾತಿ'ದೆ. ಕವನದ ಕೊನೆಗೆ :

> ಈ ಮನೆಯ ಯಜಮಾನ ಬರುವ ಹೊತ್ತೋ ಏನೊ–
> ಆಗಸದ ಕೋಟಿ ಚಿಕ್ಕೆಯ ಪಣತಿ ಬೆಳಕಿನಲಿ
> ನಾನಿನ್ನು ಮರಳಬಹುದು

ಎಂಬ ಸಾಲುಗಳಿವೆ. ಅಂದರೆ 'ಹಿಂದೊಮ್ಮೆ ಇಲ್ಲಿದ್ದ'ವನೊಬ್ಬನು ಆಗಸದ ಚುಕ್ಕೆಯಾಗಿ, ಈಗ ಮತ್ತೊಮ್ಮೆ ಅದೇ ಮನೆಯನ್ನು ಕಂಡು "ಶಿವಶಿವಾ ಎಂಥ ಗತಿ?" ಎಂದು ಮರುಗುವ ಈ ಚಿತ್ರದಲ್ಲಿ 'ಮಾತು' ಭಾವಗೀತೆಯಾಗುವುದರ ಜೊತೆಗೇ ಕವನದ ಕೊನೆಯು ಪ್ರಾರಂಭದ ವಿವರಗಳಿಗೆ ಹೊಸ ಅರ್ಥಗಳನ್ನು ನೀಡುವ ಉತ್ತಮ ಕಾವ್ಯದ ಅಂಶಗಳನ್ನು ಹೊಂದಿದೆ. ಈ ಕವನವನ್ನು ಇಲ್ಲಿಯ ಇನ್ನೊಂದು ಪದ್ಯ 'ಒಂದು ಕವನದ ಮೇಲೆ'ಯೊಡನೆ ಹೋಲಿಸಿ ನೋಡಿದರೆ ಸಿ.ಪಿ.ಕೆ.ಯವರ ಕಾವ್ಯವಸ್ತುವಿನ ಹಿಂದೆ ಕೆಲಸ ಮಾಡುವ ಕೆಲವು ಮೂಲ ಅಂಶಗಳು ಗಮನಕ್ಕೆ ಬರಬಹುದು. ಕವನ ಹೀಗೆ ಪ್ರಾರಂಭವಾಗುತ್ತದೆ :

> ಕಾಲು ಶತಮಾನದ ಹಿಂದೆ ಕವಯಿತ್ರಿ ಶಿಷ್ಯೆಯೊಬ್ಬಳು
> ನನ್ನ ಮೇಲೆ, 'ನಿನ್ನನ್ನೆ ಕುರಿತು' ಎಂದು
> ಬರೆದೊಂದು ಕವನ– "ನೀನು ಮನ್ಮಥ....ನನ್ನೆದೆ

ಮಿನುಗುತ್ತದೆ'' ಇತ್ಯಾದಿ ಇತ್ಯಾದಿ– ಈಗ ಬಂದಿದೆ ನನ್ನ ಗಮನಕ್ಕೆ;
ಕೆಂಡದಂತಲ್ಲ, ಮಾಣಿಕ್ಯದಂತೆ!

ಇಲ್ಲಿಯ 'ಮಾತಿನ' ಲಯಗಾರಿಕೆಯನ್ನು ಸೆರೆಹಿಡಿದಿರುವ ರೀತಿಯೊಡನೆ 'ಕಾಲ'ದ ಪರಿಣಾಮವು ಜೀವನದ ಮೇಲೆ ಹೇಗಾಗುತ್ತದೆಂಬುದನ್ನು ಕೆದಕುವ ಪ್ರಯತ್ನವಿದೆ ಎಂಬುದನ್ನು ಗಮನಿಸಬೇಕು. 'ಕಾಲ' ಮತ್ತು 'ಅದರ ಪರಿಣಾಮ' ಇವು ಸಿ.ಪಿ.ಕೆ.ಯವರ ಕಾವ್ಯವನ್ನು ನಿಯಂತ್ರಿಸುವ ಮೂಲವಸ್ತುಗಳೆಂದು ನನಗನ್ನಿಸಿದೆ. ಈ ಕವಯಿತ್ರಿ ಶಿಷ್ಯೆಯು ಬರೆದ ಕವನವನ್ನು ಕೇಂದ್ರವಲ್ಲಿಟ್ಟುಕೊಂಡು ಕವಿಯು ತನ್ನಲ್ಲಾದ ಬದಲಾವಣೆಯನ್ನು ಗುರುತಿಸಿಕೊಳ್ಳ ತೊಡಗುತ್ತಾನೆ. ಹೀಗೆ ಕಾಲದ ಪರಿಣಾಮವು ಅವಳ ಮೇಲೆ ಹೇಗಾಗಿರಬಹುದೆಂಬುದನ್ನೂ ಊಹಿಸುತ್ತಾನೆ. ಹಾಗೆಯೇ ತನ್ನ ಕೈಯಲ್ಲಿ ಆ ಪದ್ಯ ಈಗ ಸಿಕ್ಕಿರುವುದರಿಂದ ಪ್ರಯೋಜನಕ್ಕೆ ಬಾರದ ಮಾಣಿಕ್ಯದಂತಾಗಿದೆ ಎಂದೂ ಧ್ವನಿಸುತ್ತಾರೆ. ಅವಳ ನೆನಪು ಮತ್ತು ಕಾಲದ ಪರಿಣಾಮ ಸೇರಿ ಕವಿಯು ಹಿಗೆ ಹೇಳುವಂತೆ ಪ್ರೇರೇಪಿಸಿವೆ :

ಹಿಂಬಾಲಿಸಿ ಬಂದ ಮುಪ್ಪು ತವಕಿಸುತ್ತಿದೆ ನನ್ನನ್ನು
ಅಪ್ಪಿ ಮುದ್ದಿಸುವುದಕ್ಕೆ!

ತನ್ನನ್ನು ಮುಪ್ಪು ಆವರಿಸಿದರೂ ಪದ್ಯಕ್ಕೆ ಮುಪ್ಪಿಲ್ಲವೆಂಬ ಆಶಯವನ್ನು ಕವಿಯು ಕವನದ ಕೊನೆಗೆ ವ್ಯಕ್ತಪಡಿಸುತ್ತಾರೆ. ಈ ಪದ್ಯವು ಅಶ್ಲೀಲವಾಗುವ ಮತ್ತು ವಸ್ತುವಿನಲ್ಲೇ ದುರ್ಬಲವಾಗುವ ಸಾಧ್ಯತೆಗಳನ್ನು ಹೊಂದಿದೆ. ಆದರೆ ಪಕ್ವವಾದ ಮನಸ್ಸೊಂದು ಜೀವನದ ಘಟನೆಯೊಂದಕ್ಕೆ ಕಾವ್ಯ ರೂಪವನ್ನು ತೊಡಿಸುವಾಗ ಆ ಘಟನೆಯಿಂದ ಉದ್ಭವವಾಗುವ 'ಜೀವನ ನಿಷ್ಠೆ'ಯನ್ನು ಹೇಗೆ ಸೆರೆಹಿಡಿಯಬಹುದೆಂಬುದಕ್ಕೆ ಈ ಪದ್ಯವು ಒಳ್ಳೆಯ ಉದಾಹರಣೆಯಾಗಿದೆ.

ಇಲ್ಲಿರುವ ಇಂಥ ಕವನಗಳೊಡನೆ ಸಿ.ಪಿ.ಕೆ.ಯವರು 'ಗಡಿಯಾರ'ಗಳನ್ನು ಕುರಿತು ಬರೆದ ಕವನಗಳನ್ನು ಹೋಲಿಸಿದರೆ, 'ಕಾಲ'ವು ಕಾವ್ಯವಸ್ತುವಾಗಿ ಅವರ ಮನಸ್ಸನ್ನು ಹೇಗೆ ಆವರಿಸಿಕೊಂಡಿದೆ ಎಂಬುದು ಇನ್ನಷ್ಟು ಸ್ಪಷ್ಟವಾಗುತ್ತದೆ. ಇದಕ್ಕೆ ಉದಾಹರಣೆಯಾಗಿ 'ಗಡಿಯಾರದಂಗಡಿ' ಮತ್ತು 'ಅಲಾರಂ' ಎಂಬ ಎರಡು ಪದ್ಯಗಳನ್ನು ನೋಡಬಹುದು. 'ಗಡಿಯಾರದಂಗಡಿ'ಯಲ್ಲಿಯ ವಿವಿಧ ಬಗೆಯ ಗಡಿಯಾರಗಳು ಮತ್ತು ಅವುಗಳ ಮುಳ್ಳುಗಳು ತೋರಿಸುವ ವಿವಿಧ ದಿಕ್ಕುಗಳ ವರ್ಣನೆಯಿಂದ ಈ ಕವನ ಪ್ರಾರಂಭವಾಗುತ್ತದೆ. ಕೆಟ್ಟ ಗಡಿಯಾರಗಳನ್ನು ರಿಪೇರಿ ಮಾಡಲು ''ಯುಗ ಯುಗದಿ ಹುಟ್ಟಿ ಬಂದರು ಎನಿತೊ ತಾಂತ್ರಿಕರು.'' ಆದರೂ ''ಯಾವ ಪುಂಗಿಗು ಹಾವು ಮಣಿಯಲಿಲ್ಲ.'' ಕವಿಯು ಕೊನೆಗೆ ಈ ಪ್ರಶ್ನೆ ಕೇಳುತ್ತಾರೆ :

ಮತ್ತೆ ಕೆಡದಂತೆ ಸರಿಪಡಿಸಬಹುದೇ ನಿಮ್ಮ
ಯಾವುದಾದರು ಒಂದು ಕುಶಲ ಬೆರಳು?

ಈ ಗಡಿಯಾರಗಳು ರಿಪೇರಿಯಾಗದಿದ್ದರೆ ಎಂದೆಂದಿಗೂ ಅವಕ್ಕೆ ಅದೇ ಗತಿಯೇನು ಎಂಬ ಪ್ರಶ್ನೆಯೊಂದಿಗೆ ಮುಕ್ತಾಯವಾಗುವ ಈ ಪದ್ಯದಲ್ಲಿಯ ಕೊನೆಗೆ ಎರಡು ಪದಗಳಾದ ''ಹಗಲು, ಇರುಳು''- ಇವುಗಳು ಇಡೀ ಪದ್ಯಕ್ಕೆ ''ಕಾಲ''ವೆಂಬ ಕಾವ್ಯವಸ್ತುವಿನ ಸ್ಪರ್ಶ

ನೀಡುತ್ತವೆ. "ಅಲಾರಂ" ಪದ್ಯದಲ್ಲಿ ಕಾಲವನ್ನು ಸೂಚಿಸುವ ಅಲಾರಾಂನ್ನು ಮಾಡಿದವರೂ ಮಾನವರು ಮತ್ತು ಅದರ ಬಾಯಿ ಮುಚ್ಚಿಸುವ 'ಶೂರ'ರೂ ಸಾವು ಎಂಬ ಮಾತಿದೆ. ಅದಕ್ಕೆ ಕಾರಣವೆಂದರೆ : "ಯಾವ ಸವಿಗನಸ ತುಂಡರಿಸಿತೋ ಏನೊ?" ಆದರೆ ಕವನ ಹೀಗೆ ಕೊನೆಯಾಗುತ್ತದೆ : "ಕೂಗುತಿದೆ ಗಡಿಯಾರ ನಿತ್ಯ/ಸಾಗಿಯೇ ಸಾಗುತಿವೆ ಸ್ವಪ್ನ!" ಹೀಗೆ 'ಜೀವನ' ಮತ್ತು 'ಕಾಲ' ಒಂದನ್ನೊಂದು ಸಂಧಿಸದ ಸಮಾನಾಂತರ ರೇಖೆಗಳಂತೆ ಸಾಗಿವೆ ಎಂಬ ವಸ್ತು ಸಿ.ಪಿ.ಕೆ.ಯವರ ಹಲವಾರು ಕವನಗಳಲ್ಲಿ ಕಂಡುಬರುತ್ತದೆ.

ಸಿ.ಪಿ.ಕೆ.ಯವರ ಕಾವ್ಯದ ಇನ್ನೊಂದು ಮುಖ್ಯವಾದ ಕಾವ್ಯವಸ್ತುವೆಂದರೆ, ಮಾನವ ಮತ್ತು ಪ್ರಕೃತಿಯ ಮಧ್ಯೆ ಇರುವ ಸಂಬಂಧ. ಈ ಸಂಬಂಧದಲ್ಲಿಯ ಸಾಮ್ಯ, ವೈಷಮ್ಯ ಮತ್ತು ವೈರುಧ್ಯಗಳನ್ನು ಅವರ ಕೆಲವು ಕವನಗಳು ಸುಂದರವಾಗಿ ಸೆರೆಹಿಡಿಯುತ್ತವೆ. ಈ ಸಂಬಂಧವನ್ನು ಕುರಿತು ಯೋಚಿಸುತ್ತಿರುವಾಗಲೇ ಈ ಕವಿಯ ಆಧ್ಯಾತ್ಮಿಕ ನಿಲುವುಗಳು ಕೂಡ ಸೆಲೆಯೊಡೆಯುವಂತೆ ತೋರುತ್ತದೆ. 'ಪ್ರಕೃತಿ', 'ಅನಂತ-ಪೃಥ್ವೀ', 'ಒಂದಿರುಳು' ಮುಂತಾದ ಪದ್ಯಗಳಲ್ಲಿ ಇದನ್ನು ಕಾಣಬಹುದು. ಬೆಳದಿಂಗಳಿನ ಸೊಬಗು ಚಳಿಗಾಲದಲ್ಲಿ ಹೇಗಿರುತ್ತದೆಂದು 'ಒಂದಿರುಳು' ಪದ್ಯದಲ್ಲಿ ವರ್ಣಿತವಾಗಿದೆ. ಆದರೆ ಸೊಬಗಿನ 'ಒಂದು ಕ್ಷಣ'ವನ್ನು 'ನಿದ್ರೆ' ಮತ್ತು 'ಕನವರಿಕೆ'ಗಳು ಹೇಗೆ ಮುಚ್ಚಿ ಹಾಕುತ್ತವೆ ಎಂಬುದು ಕೂಡ ಇದೇ ಸೌಂದರ್ಯದ ಒಂದು ಭಾಗವಾಗಿದೆ ಎಂಬ ಅಂಶ ಕವನದಲ್ಲಿ ವ್ಯಕ್ತವಾಗಿದೆ. ಎಲ್ಲೋ ಒಂದು ಕಡೆ ಈ ಸೌಂದರ್ಯದಲ್ಲಿಯೇ ದೈವತ್ವದ ಸ್ಪರ್ಶ ಅಡಗಿದೆ ಎಂಬ ವಿಚಾರದ ಮಿಂಚು ಸುಳಿದು ಹೋಗುತ್ತದೆ. ಇಂಥ ಪದ್ಯಗಳಲ್ಲಿ ಸಿ.ಪಿ.ಕೆ.ಯವರು ಈ ವಿಷಯ ವಸ್ತುವನ್ನು ಸ್ಪರ್ಶಿಸುತ್ತಾರೆ ಮತ್ತು ಅದು ಗಟ್ಟಿಯಾಗಿ ಗಾಢ ರೂಪವನ್ನು ತಳೆಯುವುದಿಲ್ಲ. ಈ ಮಾತನ್ನು ಏಕೆ ಹೇಳಬೇಕಾಗಿದೆಯೆಂದರೆ, ಒಂದಿಲ್ಲೊಂದು ರೀತಿಯಲ್ಲಿ ಮನುಷ್ಯ-ಪ್ರಕೃತಿಯ ಸಂಬಂಧ ಮತ್ತು ಮನುಷ್ಯ-ಭಗವಂತನ ಸಂಬಂಧ ಇಲ್ಲಿಯ ಹಲವಾರು ಕವನಗಳ ತಳಹದಿಯೇ ಆಗಿದೆ.

ವ್ಯಕ್ತಿಗಳನ್ನು ಕುರಿತು ಬರೆದ ಕೆಲವು ಮಹತ್ವದ ಕವನಗಳೂ ಈ ಸಂಕಲನದಲ್ಲಿವೆ. ಬೇಂದ್ರೆ, ಕುವೆಂಪು, ಮಾಸ್ತಿ, ಪು.ತಿ.ನ., ಎ. ಆರ್. ಕೃಷ್ಣಶಾಸ್ತ್ರೀ, ಗಾಂಧಿ, ನೆಹರು ಇವರುಗಳನ್ನು ಕುರಿತ ಪದ್ಯಗಳು ಗಮನಾರ್ಹವಾಗಿವೆ. ವ್ಯಕ್ತಿಚಿತ್ರಗಳನ್ನು ನೀಡುವಲ್ಲಿ ಸಿ.ಪಿ.ಕೆ.ಯವರು ಸಿದ್ಧಹಸ್ತರು. ಈ ಪದ್ಯಗಳು ಎಲ್ಲಿಯೂ 'ವ್ಯಕ್ತಿ ಆರಾಧನೆ'ಯ ಮಟ್ಟಕ್ಕೆ ಇಳಿಯುವುದಿಲ್ಲ. ಹಾಗೆಯೇ ಆಯಾ ವ್ಯಕ್ತಿಗಳ ವಿಶೇಷತೆಯನ್ನು ದಾಖಲಿಸುವುದರಲ್ಲಿ ಸೋಲುವುದಿಲ್ಲ. ಈ ಪದ್ಯಗಳು ಇನ್ನೂ ಒಂದು ದೃಷ್ಟಿಯಿಂದ ಮಹತ್ವದವಾಗಿ ತೋರುತ್ತವೆ. ಎಲ್ಲವನ್ನು ಸ್ವೀಕರಿಸುವ ಮತ್ತು ಜೀವನದ ವೈವಿಧ್ಯಮಯತೆಯನ್ನು ಹೊರಗೆ ನಿಂತು ನೋಡಿ ನೋವಾಗದ ರೀತಿಯಲ್ಲಿ ವ್ಯಕ್ತಪಡಿಸುವ ಒಂದು ವಿಶೇಷವಾದ ಸಾಂಸ್ಕೃತಿಕ ಸ್ಪರ್ಶವನ್ನು ಈ ಪದ್ಯಗಳಲ್ಲಿ ಕಾಣುತ್ತೇವೆ. ಸಮಾಜ ಮತ್ತು ರಾಜಕೀಯ ವಿಷಯಗಳನ್ನು ಕುರಿತು ಬರೆಯುವಾಗ ಸಿ.ಪಿ.ಕೆ. ಯವರ ಪದ್ಯಗಳಲ್ಲಿ ವ್ಯಂಗ್ಯ ಮತ್ತು ಮೂದಲಿಕೆಗಳು ಅಲ್ಲಲ್ಲಿ ಕಂಡುಬರುತ್ತವೆ. ಆದರೆ ಅವರು ಆಯ್ದುಕೊಂಡ ಬರಹಗಾರರು, ಕವಿಗಳು ಮತ್ತು ರಾಜಕೀಯ ವ್ಯಕ್ತಿಗಳು ಇಂಥ ವ್ಯಂಗ್ಯ ಮತ್ತು ಮೂದಲಿಕೆಗೆ ಇಲ್ಲಿಯ ಯಾವ ಪದ್ಯದಲ್ಲಿಯೂ ಒಳಗಾಗುವುದಿಲ್ಲ ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ಅಂದರೆ ಸಮಾಜದಲ್ಲಿಯ ಅಂಕುಡೊಂಕುಗಳಿಗೆ ಕಾರಣವು

ಸಮಾಜ ರಚನೆಯಲ್ಲಿಯೇ ಇದೆಯೇ ಹೊರತು ವ್ಯಕ್ತಿಗಳಲ್ಲಿಲ್ಲ ಎಂಬ ಮಾತು ಇಂಥ ಕವನಗಳಲ್ಲಿ ಬಹುತೇಕ ಕಡೆ ಧ್ವನಿತವಾಗಿದೆ. ಹಾಗೆಯೇ ಈ ವ್ಯಕ್ತಿಗಳ ಸಾಧನೆಯ ಬೆಳಕಲ್ಲಿ ವರ್ತಮಾನವನ್ನು ಅಳೆಯುವ ಪ್ರಯತ್ನವನ್ನೂ ಇಲ್ಲಿಯ ಕೆಲವು ಕವನಗಳು ಮಾಡುತ್ತವೆ.

ಸಿ.ಪಿ.ಕೆ.ಯವರ ಕವನಗಳ ಇನ್ನೊಂದು ಗುಣವೆಂದರೆ 'after thought.' ಒಂದು ವಸ್ತುವನ್ನು ಅಥವಾ ವಿಷಯವನ್ನು ಪ್ರಸ್ತುತಪಡಿಸಿದ ಮೇಲೆ ಅದರ ಇನ್ನೊಂದು ಮುಖ ಅಥವಾ ಆ ಹೇಳಿಕೆಯ 'ವ್ಯಂಗ್ಯದರ್ಶನ' ಕವಿಗೆ ತಟ್ಟನೆ ಹೊಳೆಯುತ್ತದೆ. ಆಗ ಅಂಥ ಭಾವನೆಗಳು ಕಂಸಗಳಲ್ಲಿ ಅಭಿವ್ಯಕ್ತಿ ಪಡೆಯುತ್ತವೆ. ಇದು ಒಂದು ರೀತಿಯಿಂದ ಕವಿಯ ಮನಸ್ಸು ಸದಾ fluid ಅವಸ್ಥೆಯಲ್ಲಿದೆ ಎಂಬುದಕ್ಕೆ ನಿದರ್ಶನವಾಗಿದೆ ಎಂದೇ ನನ್ನ ಭಾವನೆ. ಇಂಥ ಪ್ರಕ್ರಿಯೆ ನಡೆದಾಗಲೆಲ್ಲ ಸಾಮಾನ್ಯವಾಗಿ ವ್ಯಂಗ್ಯದ ಅಂಶವೇ ಹೆಚ್ಚಾಗಿ ಕಂಡುಬರುತ್ತದೆ.

ಸಿ.ಪಿ.ಕೆ.ಯವರ ಕಾವ್ಯಶಕ್ತಿಯು ಅವರ ಸುನೀತಗಳಲ್ಲಿ ಅಡಗಿದೆ. ಆದರೆ ಇಲ್ಲಿಯೂ 'ಕಾಲ' ಮತ್ತು 'ಜೀವನ'ದಂಥ ಕಾವ್ಯವಸ್ತುಗಳು ಸುನೀತಗಳನ್ನು ಆವರಿಸಿಕೊಂಡಿವೆ. 'ರಕ್ಷಣೆ' ಎಂಬ ಸುನೀತ ನನ್ನ ಮನವನ್ನು ಬಹುವಾಗಿ ತಟ್ಟಿದೆ. ಇಲ್ಲಿ ಸಿ.ಪಿ.ಕೆ.ಯವರ ಆಧ್ಯಾತ್ಮಿಕ ಚಿಂತನೆ ಹೆಚ್ಚು ಸ್ಪಷ್ಟಗೊಂಡಿದೆ.

ಕಳೆದು ಹೋಗಿರುವಾತ್ಮ ಮರಳಿ ಮುಂದೊಮ್ಮೆ ಬರ-
ಬಹುದು: ಆನಂದದಶೆ ದಶಕಗಳ ತರುವಾಯ
ಪ್ರಾಪ್ತವಾದೀತು

ಎಂದು ಪ್ರಾರಂಭವಾಗುವ ಈ ಸುನೀತದಲ್ಲಿ ಆತ್ಮವು ಮರಳಿ ಬರುವ ಚಿತ್ರದೊಡನೆ, ಅದು ಮರಳಿ ಬಂದಾಗ ಮತ್ತೆ ವಾಸಿಸಲು ಮನೆಯನ್ನು ಭದ್ರವಾಗಿಡಬೇಕೆಂಬ ಕಳಕಳಿ ಇದೆ. ಈ ಸುನೀತವು ಹೀಗೆ ಕೊನೆಯಾಗುತ್ತದೆ :

ಉರಿವ ನಕ್ಷತ್ರಗಳ ಹೃದಯದಲಿ ನೋಟವನು
ನಾಟಿ, ಆರದ ಹಾಗೆ ಬೆಂಕಿ ಎಚ್ಚರ ವಹಿಸಿ,
ಕಾದುಕೊಳಬೇಕು: ಯಜ್ಞಕೆ ಸಮನಿಸುವುದು ಯಶ!
ವಚನ ಹುರುಳಿಲ್ಲದ್ದೆ?– "ಕಾಯವೇ ಕೈಲಾಸ!"

ನಕ್ಷತ್ರ, ಆತ್ಮ, ಮರುಹುಟ್ಟು ಇವೆಲ್ಲವುಗಳು ಮತ್ತೆ 'ಹಿಂದೊಮ್ಮೆ ಇಲ್ಲಿದ್ದೆ ನಾನು!' ಎಂಬ ಪದ್ಯವನ್ನೇ ನೆನಪಿಗೆ ತರುತ್ತವೆ. ಈ ವಿಷಯಗಳು ಮತ್ತು ನಂಬಿಕೆಗಳು ಸಿ.ಪಿ.ಕೆ.ಯವರ ಮನದಾಳದಲ್ಲಿ ಬಹು ಗಾಢವಾಗಿ ಬೇರೂರಿರುವಂತೆ ಕಾಣುತ್ತದೆ.

'ಮಾ ನಿಷಾದ' ಮತ್ತು 'ಮರುಕ'ದಂಥ ಸುನೀತಗಳಲ್ಲಿ ಸಿ.ಪಿ.ಕೆ.ಯವರ ಸುನೀತ ಶೈಲಿಯು ಹೆಚ್ಚು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಮೊದಲಿನ ಭಾಗದಲ್ಲಿ ತರ್ಕವೊಂದು ಮೂಡಿ, ಮುಂದಿನ ಭಾಗದಲ್ಲಿ ಆ ತರ್ಕದ ಪರಿಣಾಮವು ಫಲಿತಗೊಂಡು ಕೊನೆಯ ಭಾಗವು ಉಪಸಂಹಾರಾತ್ಮಕ ಪಲ್ಲವಿಯೊಡನೆ ಕೊನೆಯಾಗುತ್ತದೆ. ಇದು ಸಿ.ಪಿ.ಕೆ.ಯವರ ಹೆಚ್ಚಿನ ಸುನೀತಗಳ ಸ್ವರೂಪವಾಗಿದೆ. "ಇತಿಹಾಸ," "ಪುಸ್ತಕ ವರ್ಷ", "ನೋವು", "ಕುರುಡು" ಸುನೀತಗಳ ಸ್ವರೂಪ ಇದೇ ಆಗಿದೆ. 'ನೋವು' ಎಂಬ ಸುನೀತದಲ್ಲಿ ಮತ್ತೆ ಮುಂತಾದ ಸುನೀತಗಳ ಸ್ವರೂಪ ಇದೇ ಆಗಿದೆ.

'ಹುಟ್ಟು' 'ಮರುಹುಟ್ಟು'ನ ಮಾತಿದೆ. ಒಟ್ಟಾರೆಯಾಗಿ ಇಲ್ಲಿಯ ಸುನೀತಗಳನ್ನು ನೋಡಿದರೆ, ಸುನೀತಗಳನ್ನು ಬರೆಯುವಾಗ ಸಿ.ಪಿ.ಕೆ.ಯವರಲ್ಲಿ ವ್ಯಂಗ್ಯವು ಮಾಯವಾಗಿ, ಸಾಮಾಜಿಕ ಕಾವ್ಯವಸ್ತುಗಳು ಗೌಣವಾಗಿ, ಆತ್ಮಗತವಾದ ಮಾತುಗಳು ಗಟ್ಟಿಯಾದ ಕಾವ್ಯರೂಪವನ್ನು ಪಡೆದಿರುವುದು ಕಂಡುಬರುತ್ತದೆ. ಈ ಸುನೀತಗಳ ಬಂಧದಲ್ಲಿರುವ ಬಿಗಿ ಅಚ್ಚರಿ ಹುಟ್ಟಿಸುವಷ್ಟು ಸಬಲವಾಗಿದೆ.

ತಮ್ಮ 'ಸಮಗ್ರ ಕಾವ್ಯ'ದ ಅರಿಕೆಯ ಮಾತಿನಲ್ಲಿ ಸಿ.ಪಿ.ಕೆ.ಯವರು ಹೀಗೆ ಹೇಳಿದ್ದಾರೆ : "ಅಂದಂದಿನ ಕಾವ್ಯ 'ಚಳವಳಿ'ಗೆ ನನ್ನ ಕವಿತೆ ಸ್ಪಂದಿಸುತ್ತ ಬಂದಿದ್ದರೂ, ಒಟ್ಟಿನಲ್ಲಿ ಇವನ್ನು ಸಮನ್ವಯ ಕವಿತೆಯೆಂದೇ ಕರೆಯಬಹುದು.'ಸಮನ್ವಯ' ಎಂಬ ಮಾತಿನಲ್ಲಿರಬಹುದಾದ ಅನಪೇಕ್ಷಣೀಯ ಅರ್ಥವನ್ನು ನಿವಾರಿಸಿ, ಯಾವುದೇ ಪಂಥ, ಸಿದ್ಧಾಂತ, ವಾದಗಳಿಗೆ ಅಂಟಿಕೊಳ್ಳದ ನನ್ನದು ಬದ್ಧ ಕವಿತೆಯಲ್ಲ, ಮುಕ್ತಕವಿತೆ ('ಶುದ್ಧ ಕವಿತೆ' ಎಂದರೂ ತಪ್ಪಾಗದು). ಬದುಕಿಗಷ್ಟೇ ಅದರ ಬದ್ಧತೆ." ಬದುಕಿಗೆ ಬದ್ಧವಾಗಿದ್ದುಕೊಂಡು ಆಯಾ ಕಾಲದ ಕಾವ್ಯವನ್ನೂ ಮೈಗೂಡಿಸಿಕೊಂಡು ಸಿ.ಪಿ.ಕೆ.ಯವರ ಕಾವ್ಯ ಎದ್ದು ಬಂದಿದೆ ಎಂಬುದಕ್ಕೆ ಈ ಆಯ್ದ ಕವನಗಳ ಸಂಗ್ರಹದಲ್ಲಿ ಹಲವಾರು ಉದಾಹರಣೆಗಳು ದೊರೆಯುತ್ತವೆ. ಪ್ರಕೃತಿ ಮತ್ತು ಮಾನವನ ಸಂಬಂಧವನ್ನು ಪರೀಕ್ಷಿಸುವಲ್ಲಿ ತೋರುವ ರೋಮ್ಯಾಂಟಿಕ್ ಧೋರಣೆಗಳು, ಆತ್ಮಗತವಾಗುವಲ್ಲೆಲ್ಲ ತೋರುವ ನವ್ಯದ ಛಾಯೆಗಳು ಮತ್ತು ಸಾಮಾಜಿಕ ಕಳಕಳಿಯಲ್ಲಿ ವ್ಯಕ್ತವಾಗುವ ವ್ಯಂಗ್ಯದ ಮೊನಚಿನಲ್ಲಿಯ ಬಂಡಾಯದ ಧೋರಣೆಗಳು ಸಮ್ಮಿಳಿತವಾಗಿ ಇಲ್ಲಿಯ ಕವನಗಳು ಸಿದ್ಧಗೊಂಡಿವೆ. ಒಂದು ಕಾಲದ ಸಾಹಿತ್ಯದ ಉತ್ತಮ ಗುಣಗಳನ್ನು ಮೈಗೂಡಿಸಿಕೊಂಡು ಬರೆಯುತ್ತ ಹೋಗುವುದು ತೆರೆದ ಮನಸ್ಸಿನ ಕವಿಯ ಅನಿವಾರ್ಯವೂ ಹೌದು. ಹಲವಾರು ಶತಮಾನಗಳನ್ನು ಏಕಕಾಲದಲ್ಲಿ ಬದುಕುತ್ತಿರುವ ಮನಸ್ಸು ನಮ್ಮದು. ಹಾಗೆ ಬದುಕುತ್ತಿರುವಾಗ ಸಾಹಿತ್ಯದ ಒಂದು ಪಂಥಕ್ಕೆ ಅಂಟಿಕೊಳ್ಳುವುದು ಅಭಿವ್ಯಕ್ತಿಯಲ್ಲಿ ಸೀಮಿತತನದ ಅಪಾಯವನ್ನು ಎದುರಿಸಬೇಕಾಗುತ್ತದೆ.

ಪ್ರಾಯೋಗಿಕ ವಿಮರ್ಶೆಯು ನಮ್ಮಲ್ಲಿ ಸಾಹಿತ್ಯೇತರ ಕಾರಣಗಳಿಂದಾಗಿ ಪ್ರಾಯಶಃ ಬೆಳೆಯಲಿಲ್ಲ. ಆ ವಿಮರ್ಶೆಯು ಒಂದು ಮಟ್ಟದ ವರೆಗಾದರೂ ಬೆಳೆದಿದ್ದರೆ, ಪ್ರತಿಯೊಬ್ಬ ಕವಿಯ ಗುಣ-ವಿಶೇಷಗಳನ್ನು ವ್ಯಕ್ತಪಡಿಸಬಹುದಾದ ವಿಮರ್ಶಾ ಪದಗುಚ್ಛಗಳು ನಿರ್ಮಾಣ ಗೊಳ್ಳುತ್ತಿದ್ದವು. ಎಲ್ಲರೂ ಮಹಾಕವಿಗಳಾಗಲು ಸಾಧ್ಯವಿಲ್ಲ. ಆದರೆ ಕಾವ್ಯ ಬರೆದವರು ಒಂದು ಮಟ್ಟ ಮುಟ್ಟಿದೊಡನೆ ವ್ಯಕ್ತವಾಗುವ ಅವರ ವಿಶೇಷ ಒಲವುಗಳನ್ನು ಮತ್ತು ಅವರ ಕಾವ್ಯದ ಅನೂಹ್ಯ ಆಯಾಮಗಳನ್ನು ಸೆರೆಹಿಡಿಯಲು ವಿಮರ್ಶಕರು ಹೊಸ ಪದಗುಚ್ಛಗಳಿಗಾಗಿ ತಡಕಾಡುವ ಆವಶ್ಯಕತೆ ಉಂಟಾಗಬೇಕು. ಈ ತಡಕಾಟದಲ್ಲಿಯೇ ಕವಿಯ ಮತ್ತು ವಿಮರ್ಶಕರ ಬೆಳವಣಿಗೆಯ ಹುಟ್ಟು ಅಡಗಿದೆ. ಪ್ರಾಯೋಗಿಕ ವಿಮರ್ಶೆಯ ಬೆಳವಣಿಗೆ ಯಲ್ಲಿ ಇಂಥ ಒಂದು ಸಾಧ್ಯತೆ ಇತ್ತು. ಸಿ.ಪಿ.ಕೆ.ಯವರಂಥ ಕವಿಗಳ ಕಾವ್ಯಕ್ಕೆ ಸ್ಪಂದಿಸುವಾಗ ಈ ಅಂಶವು ನನ್ನನ್ನು ಹೆಚ್ಚಾಗಿ ಈ ವಿಷಯವನ್ನು ಕುರಿತು ಚಿಂತಿಸುವಂತೆ ಮಾಡುತ್ತದೆ.

ಸಿ.ಪಿ.ಕೆ.ಯವರು 'ಕಾಲ' ಮತ್ತು 'ಕಾಲದಾಟೆಯ' ವಿಷಯಗಳನ್ನು ಕುರಿತು ಗಂಭೀರವಾಗಿ ಆಲೋಚಿಸಿದ್ದಾರೆ. ಇದು ಅಧ್ಯಾತ್ಮದ ಸೀಮೆಯ ಪ್ರಾರಂಭ. ಮನುಷ್ಯನ

'ಇರುವು'. ಅವರ ಅರ್ಥ ಮತ್ತು ಸಾವಿನ ನಂತರದ ಬದುಕು ಇವು ಯಾವಾಗಲೂ ಒಳ್ಳೆಯ ಕಾವ್ಯದ ಕೇಂದ್ರವಲ್ಲಿದ್ದುಕೊಂಡು ಅಂಥ ಕಾವ್ಯವನ್ನು ನಿಯಂತ್ರಿಸುತ್ತವೆ. ಸಿ.ಪಿ.ಕೆ.ಯವರ ಕಾವ್ಯದ ಕೇಂದ್ರವಲ್ಲಿದ್ದುಕೊಂಡು ಅಂಥ ಕಾವ್ಯವನ್ನು ನಿಯಂತ್ರಿಸುತ್ತವೆ. ಸಿ.ಪಿ.ಕೆ.ಯವರ ಕಾವ್ಯದ ಕೇಂದ್ರದಲ್ಲಿ ಈ ವಸ್ತುಗಳು ಸಬಲವಾಗಿ ನಿಂತಿವೆ. ಅದಕ್ಕಾಗಿಯೇ ಅವರು ನಮ್ಮ ಮಧ್ಯೆ ಬದುಕುತ್ತಿರುವ ಮಹತ್ವದ ಕವಿಗಳಲ್ಲಿ ಒಬ್ಬರು ಎಂದು ನನಗನ್ನಿಸಿದೆ. ಅಧ್ಯಾತ್ಮದ ಹೊಳಹುಗಳು ಇನ್ನಷ್ಟು ಖಚಿತಗೊಂಡು, ಅವುಗಳಿಗೆ ತಕ್ಕ ಪ್ರತಿಮೆಗಳು ಅವರಿಗೆ ಒದಗತೊಡಗಿದರೆ ಅವರ ಸುನೀತಗಳು ಕನ್ನಡ ಕಾವ್ಯಕ್ಕೆ ಖಂಡಿತವಾಗಿಯೂ ಹೊಸ ಆಹ್ಲಾದದ ಗಾಳಿಯನ್ನು ತರುತ್ತವೆ.

● ●

**ಮಾಧವ ಕುಲಕರ್ಣಿ** : ಇಡಬ್ಲ್ಯೂಎಸ್ ೧೫೫, ೬ನೇ ಮುಖ್ಯರಸ್ತೆ, ಮೊದಲ ಹಂತ, ಹೆಬ್ಬಾಳ್, ಮೇಟಗಳ್ಳಿ ಅಂಚೆ, ಮೈಸೂರು - ೫೭೦ ೦೧೬

## ದೇಶವನು ಪ್ರೀತಿಸಲೇಬೇಕು ಖರೆ, ಆದರೆ

**ಬಿ. ಟಿ. ದೇಸಾಯಿ**

೧

ಕೊನೆಗೊಮ್ಮೆ ಗಡಿಯಾಚೆ ಯವನರನು ಅಟ್ಟಿದ
ನಂದರ ಹುಟ್ಟಡಗಿಸಿ ಪಟ್ಟವನ್ನೇರಿದ
ಬಿಡಿ ರಾಜ್ಯಗಳ ಬೆಸೆದು ಸಾಮ್ರಾಜ್ಯ ಕಟ್ಟಿದ
ಆತ್ಮಶಾಂತಿಗೆ ಜೋತು ಸಲ್ಲೇಖನ ಹಿಡಿದ -
ಗುಡಿಸಲಲಿ ಗುಪ್ತಗುರು ಮರಮರಾ ಮರುಗಿದ :
'ದೇಶವನು ಪ್ರೀತಿಸಲು ಹೀಗೂ ಇವ ಮರೆತ'

೨

ರಾಜ್ಯದಂಚನು ಕೊಂಚ ಹಿಗ್ಗಿಸಬೇಕೆಂದ
ಮೊಂಡ ಜನರಿಗೆ ಬುದ್ಧಿ ಕಲಿಸಬೇಕೆಂದ
ದಯೆಯು ನಿರ್ದಯಿಯಾಗಿ ನೆತ್ತರ ಮುಕ್ಕಳಿಸಿದಳು
ಬಿಡಿ ರುಂಡಮುಂಡಗಳ ತೆಪ್ಪ ತೇಲಿದವು
ಪ್ರಿಯದರ್ಶಿ ಸಮದರ್ಶಿ ಧಮ್ಮ ಬೋಧಿಸಿದ
ಜೈತ್ರ ಯಾತ್ರೆಯಲ್ಲೂ ಜಿತರನ್ನು ಪೋಷಿಸಿದ
ದಡದಲ್ಲಿ ಅರೆಗಚ್ಚು ಕಾಳಿಂಗ ನರಳಿದ :
'ದೇಶವನು ಪ್ರೀತಿಸಲು ಬರದಂತೆ ಮಾಡಿದ'

೩

ಗಡಿಗುಂಟ ಕಟ್ಟಿದ್ದ ಶತ್ರು ಪಂಜರದ
ನಡುವೆ ಠಳಾಯಿಸಿತು ಬಿಡುಗಣ್ಣ ಸಿಂಹ
ಯಾರದೋ ಮಾನಕ್ಕೆ ನೂರಾರು ಸತಿಸುತರು
ಬೆಂಕಿಗೆ ನಾಲಗೆಯಾಗಿ ಹದವಾಗಿ ಬೆಂದರು
ಕಳಲಿದ ಕೆಂಡದ ಮುಂದೆ ಕುಳಿತು ರಾಣಾ ಅಂದ :
'ಮೊಗಲನು ಮಾಡಿದ ದೇಶ ಪ್ರೇಮದ ಹೆಣ ಛೆಂದ'

೪

ದಾಸ್ಯವನ್ನೆದುರಿಸಲು ದೇಶ ಒಡಮೂಡಿತು
ಮೂವತ್ತು ಮುಕ್ಕೋಟಿ ಒಕ್ಕೊರಲು ಹಾಡಿತು
ಸ್ವಾತಂತ್ರ್ಯ ಸಿಕ್ಕಿತೋ, ನೆತ್ತರ ಗುಡಿ ಹಾರಿತು
ನೌಖಾಲಿಯಲಿ ಮುದುಕ ಖಾಲಿ ತಿರುಗಾಡಿತು
ಯಾರಿಗೆ ಬೇಕಾಗಿದೆ ಇಂಥ ದೇಶ, ಛೇ, ಅಂದನೇ?
ಸ್ವಂತ ದೇಶದಲ್ಲೇ ದೇಸಿಗ ಇವನಾದನೇ!

೫

ನೆಹರೂನ ಗಂಗೆಯಲಿ ತೇಲಿಬಂದಿದೆ ದೇಶ
ಒಳಗಿನ ವಿಷಗಾಳಿ ಒಡಲ ಬಿರಿಯುತ್ತಿದೆ
ಸ್ಲೋಗನ್ನು ಸ್ಟೆನ್‌ಗನ್ನುಗಳ ಸಮ್ಮೇಳನ
ಭಿನ್ನತೆಯಲಿ ಐಕ್ಯತೆಯ ಮೊಳಗುತ್ತಿದೆ
ನನನಿನಗಾಗಿ ಅಲ್ಲ, ಆಳರಸರಿಗಾದರೂ
ದೇಶವನು ಪ್ರೀತಿಸಲೇಬೇಕು ಖರೆ, ಆದರೆ...

**ಟಿಪ್ಪಣಿಗಳು :**

೧. ಗುಪ್ತ ಗುರು : ಚಂದ್ರಗುಪ್ತ ಮೌರ್ಯನ ಗುರು ಚಾಣಕ್ಯ
೨. ಕಾಳಿಂಗ : ಕಲಿಂಗ ರಾಜ್ಯದ ಪ್ರಜೆ
೩. ಬಿಡುಗಣ್ಣ ಸಿಂಹ : ರಾಣಾ ಪ್ರತಾಪ ಸಿಂಹ
೪. ನೌಖಾಲಿಯಲಿ ಮುದುಕ : ಮಹಾತ್ಮಾ ಗಾಂಧೀ
೫. ಗಂಗೆಯಲಿ ತೇಲಿ ಬಂದಿದೆ : ನೆಹರೂ ತಮ್ಮ ಮೃತ್ಯುಪತ್ರದಲ್ಲಿ ಗಂಗೆಯ ವಿಶೇಷ ವರ್ಣನೆ ಮಾಡಿದ್ದಾರೆ. ಇಷ್ಟಾಗಿಯೂ, ಗಂಗಾನದಿಯ ದಡದಲ್ಲಿ ಶವಸಂಸ್ಕಾರ ಮಾಡುವವರು ಅರೆಬೆಂದ ಹೆಣಗಳನ್ನು ನದಿಯಲ್ಲಿಯೇ ಚೆಲ್ಲುತ್ತಾರಲ್ಲವೆ?

● ●

ಡಾ. ಬಿ. ಟಿ. ದೇಸಾಯಿ : ೨೩೦, ಅಮೃತಾ, ರಾಣಿ ಚನ್ನಮ್ಮನಗರ, ಧಾರವಾಡ - ೫೮೦ ೦೦೧

# ಜಾನ್ ಕೀಟ್ಸ್ ಮತ್ತು ಬೇಂದ್ರೆ

ಬಸವರಾಜ ಪಿ. ಡೋಣೂರ

ಇಂಗ್ಲಿಷ್ ಕಾವ್ಯಾಭ್ಯಾಸಿಗಳಿಗೆ ಹೇಗೆ ಜಾನ್ ಕೀಟ್ಸ್ ಅನಿವಾರ್ಯವೋ ಹಾಗೆಯೇ ಕನ್ನಡ ಕಾವ್ಯಾಭ್ಯಾಸಿಗಳಿಗೆ ಬೇಂದ್ರೆ ಅನಿವಾರ್ಯವಾಗಿದ್ದಾರೆ. ಕೀಟ್ಸ್ ಮತ್ತು ಬೇಂದ್ರೆ ಇವರ ಕಾವ್ಯಗಳ ಅಧ್ಯಯನ ಮಾಡುವುದು ನಿಜಕ್ಕೂ ಸಾಹಸದ ಕೆಲಸ, ಅಷ್ಟೇ ಸಂತೋಷದ, ಅಭಿಮಾನದ ಕೆಲಸವೂ ಆಗಿದೆ.

ಕಳೆದ ಶತಮಾನದಿಂದೀಚೆಗೆ ತೌಲನಿಕ ಅಧ್ಯಯನಕ್ಕೆ ಎಲ್ಲಿಲ್ಲದ ಮಹತ್ವ ಪ್ರಾಪ್ತವಾಗಿದೆ. ಸಾಹಿತ್ಯದಲ್ಲಿ ಮಾತ್ರವಲ್ಲದೆ ಇತರೆ ಜ್ಞಾನಶಾಖೆಗಳಲ್ಲೂ ತೌಲನಿಕ ಅಧ್ಯಯನವನ್ನು ಕೈಗೊಳ್ಳಲಾಗುತ್ತಿದೆ. ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಜಾಗತಿಕ ಮಟ್ಟದಲ್ಲಿ ಬೇಡಿಕೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಇಂಗ್ಲಿಷಿನ ಕೀಟ್ಸ್ ಮತ್ತು ಕನ್ನಡದ ಬೇಂದ್ರೆ ಇವರ ಕಾವ್ಯಗಳ ತೌಲನಿಕ ಅಧ್ಯಯನ ಕೈಕೊಳ್ಳುವ ಪ್ರಯತ್ನವನ್ನು ನಾನಿಲ್ಲಿ ಮಾಡುತ್ತಿದ್ದೇನೆ. ಆದರೆ ಇಂಥ ಅಧ್ಯಯನವನ್ನು ಎಲ್ಲರೂ ಸ್ವಾಗತಿಸುತ್ತಾರೆ ಎಂದು ಹೇಳುವಂತಿಲ್ಲ. ಬೇಂದ್ರೆಯವರ ಆರಂಭದ ಕಾವ್ಯದ ಮೇಲೆ (ನಂತರದ ಕೆಲ ಕಾವ್ಯದ ಮೇಲೂ) ಇಂಗ್ಲಿಷ್ ಕವಿಗಳ, ಅದರಲ್ಲೂ ಕೀಟ್ಸ್‌ನ ಪ್ರಭಾವ ಆಗಿದೆ ಎಂದು ಹೇಳಿದರೆ ಬೇಂದ್ರೆ ಕಾವ್ಯದ ಕೆಲವು ವಿಮರ್ಶಕರು ಒಪ್ಪದಿರಬಹುದು. ಬೇಂದ್ರೆ ಸ್ವತಂತ್ರ ಕವಿ; ಅವರ ಕಾವ್ಯದ ಬೇರು ಭಾರತೀಯ ಪರಂಪರೆಯಲ್ಲಿವೆ ಎಂದು ಹೇಳುವ ವಿಮರ್ಶಕರು ಅವರ ಕಾವ್ಯದ ಮೇಲೆ ಉಂಟಾದ ಪ್ರಭಾವವನ್ನು ಅಲ್ಲಗಳೆಯುತ್ತಾರೆ. ಆದರೆ ಬೇಂದ್ರೆಯವರು ಇಂಗ್ಲಿಷಿನ ನವೋದಯ ಕಾವ್ಯವನ್ನು ಗಂಭೀರವಾಗಿ ಮತ್ತು ಆಳವಾಗಿ ಅಧ್ಯಯನ ಮಾಡಿದ್ದರು ಮತ್ತು ಇಂಗ್ಲಿಷ್ ಕಾವ್ಯದ ಪ್ರಭಾವಕ್ಕೆ ಒಳಗಾಗಿದ್ದರು ಎಂದು ಹೇಳಿದರೆ ಬೇಂದ್ರೆಯವರ ಕಾವ್ಯಕ್ಕಾಗಲೀ, ಅವರ ಕವಿ ವ್ಯಕ್ತಿತ್ವಕ್ಕಾಗಲೀ ಅಪಚಾರವೆಸಗಿದಂತಾಗದು. ಬೇಂದ್ರೆಯವರ ಪ್ರತಿಭೆ ಎಲ್ಲ ವಿಧದ ಪ್ರಭಾವವನ್ನು ದಕ್ಕಿಸಿಕೊಂಡು 'ತನ್ನತನ'ವನ್ನು ಮೆರೆಯುವಷ್ಟು ದಾಪುಗಾಲು ಹಾಕಿತು ಎನ್ನುವುದು ಬಹಳ ಮಹತ್ವದ ಸಂಗತಿಯಾಗಿದೆ.

ಇಲ್ಲಿ ಬೇಂದ್ರೆಯವರ ಕಾವ್ಯದ ಮೇಲೆ ಉಂಟಾದ ಕೀಟ್ಸ್‌ನ ಪ್ರಭಾವವನ್ನು ಕುರಿತು ಮಾತ್ರ ಚರ್ಚಿಸುತ್ತಿಲ್ಲ. ಬೇಂದ್ರೆ ಮತ್ತು ಕೀಟ್ಸ್ ಇವರ ಕಾವ್ಯಗಳಲ್ಲಿಯ ಸಾಮ್ಯತೆಯನ್ನು ಕುರಿತು ಹೆಚ್ಚು ಗಮನ ಹರಿಸಲಾಗುತ್ತಿದೆ. ಕಾಲ, ದೇಶ, ಸಂಸ್ಕೃತಿ, ಭಾಷೆ, ಧರ್ಮಗಳಲ್ಲಿ ವಿಭಿನ್ನರಾದ ಈ ಕವಿಗಳ ಕಾವ್ಯಗಳಲ್ಲಿರುವ ಸಾಮ್ಯತೆ, ವಿಭಿನ್ನತೆ ಮತ್ತು ವಿಶಿಷ್ಟತೆಗಳನ್ನು ಕುರಿತು ಇಲ್ಲಿ ಚಿಂತನೆ ನಡೆಸಲಾಗಿದೆ.

ಬೇಂದ್ರೆಯವರ ಕಾವ್ಯದ ಮೇಲೆ ಕೀಟ್ಸ್‌ನ ಕಾವ್ಯದ ಪ್ರಭಾವವಲ್ಲದೆ ಶೆಲ್ಲಿ, ಶೇಕ್ಸ್‌ಪಿಯರ್, ಕಾಳಿದಾಸರಂಥ ಕವಿಗಳ ಪ್ರಭಾವವೂ ಆಗಿದೆ. ಲಕ್ಷ್ಮೀಶ ಬೇಂದ್ರೆ ಅವರಿಗೆ ಅತ್ಯಂತ ಪ್ರಿಯವಾದ ಕವಿ. ಸರ್ವಜ್ಞ, ವಚನಕಾರರು ಮತ್ತು ಶರೀಫರಂಥವರೂ ಬೇಂದ್ರೆಯವರ ಕಾವ್ಯದ ಭಾಷೆ, ಶೈಲಿ ಮತ್ತು ಲಯಗಳ ಮೇಲೆ ವಿಶಿಷ್ಟವಾದ ಪ್ರಭಾವ ಬೀರಿದ್ದಾರೆ.

ಬೇಂದ್ರೆಯವರು ಕೀಟ್ಸ್‌ನ ಕಾವ್ಯವನ್ನು ವಿಶೇಷವಾಗಿ ಮೆಚ್ಚಿಕೊಳ್ಳಲು ಕಾರಣ, ಅವರಿಬ್ಬರಲ್ಲೂ ಗಾಢವಾಗಿರುವ ಪ್ರಾಕೃತಿಕ ಪ್ರತಿಭೆ. ಕೀಟ್ಸ್‌ನನ್ನು ಬೇಂದ್ರೆಯವರು ಅಧ್ಯಯನ ಮಾಡಿ ಅವರಲ್ಲಿಯ ಹಲವು ಸಂಗತಿಗಳನ್ನು ಮೆಚ್ಚಿಕೊಂಡಿದ್ದರೆಂದು ಕಾಣುತ್ತದೆ. ``ಇಂಗ್ಲಿಷ್ ಕವಿಗಳಲ್ಲಿ ಕೀಟ್ಸ್ ಅವರಿಗೆ ಬಹಳ ಮೆಚ್ಚಿಗೆಯಾದ ಕವಿ. ಪುಣೆಯಲ್ಲಿದ್ದಾಗ ಕೀಟ್ಸ್‌ನ ಕವನ ಸಂಗ್ರಹವನ್ನು ಎದೆಗಿಟ್ಟುಕೊಂಡು''[೭] ಮಲಗುತ್ತಿದ್ದರೆಂದು ಕುರ್ತಕೋಟಿಯವರು ಹೇಳುತ್ತಾರೆ. ``ಇಂಗ್ಲಿಷ್ ರೋಮ್ಯಾಂಟಿಕ್ ಕಾವ್ಯ ಮತ್ತು ಕಾವ್ಯತತ್ತ್ವಗಳು ಬೇಂದ್ರೆಯವರನ್ನು ಪ್ರಭಾವಿಸಿದವು. ಆದರೆ, ಅವರು ಈ ಪ್ರಭಾವಗಳನ್ನು ಭಾರತೀಯ ಮತ್ತು ಕನ್ನಡದ ಸಂದರ್ಭದಲ್ಲಿಟ್ಟು ಪರೀಕ್ಷಿಸಿದ ನಂತರವೇ ಸ್ವೀಕರಿಸಿದರು''[೮] ಎಂದು ಜಿ. ಎಸ್. ಆಮೂರರು ಅಭಿಪ್ರಾಯಪಡುತ್ತಾರೆ. ಬೇಂದ್ರೆಯವರ ಮೇಲೆ ಉಂಟಾದ ಇಂಗ್ಲಿಷ್ ರೋಮ್ಯಾಂಟಿಕ್ ಕಾವ್ಯದ ಪ್ರಭಾವವನ್ನು ಬೇಂದ್ರೆ ಕಾವ್ಯದ ಬಗೆಗೆ ಬರೆದ ಬಹುತೇಕ ಮಹತ್ವದ ಲೇಖಕರು ಒಪ್ಪಿಕೊಳ್ಳುತ್ತಾರೆ.

ಹಾಗೆಂದು ಬೇಂದ್ರೆಯವರ ಯಾವ ಕವನದ ಸಾಲುಗಳಲ್ಲಿ ಇಂಗ್ಲಿಷಿನ ಯಾವ ಕವಿಯ ಸಾಲುಗಳ ಛಾಯೆ ಕಾಣುತ್ತದೆ ಎಂದು ಪರೀಕ್ಷಿಸುವುದು ಸೂಕ್ತವಾದ ಅಧ್ಯಯನ ಕ್ರಮ ಆಗಲಾರದು. ಯಾಕೆಂದರೆ ಈ ರೀತಿಯ ಅಧ್ಯಯನದಿಂದ ಬೇಂದ್ರೆ ಕಾವ್ಯಕ್ಕೆ ಅನ್ಯಾಯವಾಗುವ ಸಾಧ್ಯತೆಯಿದೆ. ``ಬೇಂದ್ರೆಯವರ 'ಚಂದ್ರ' ಕವನದ ಮೇಲೆ ಕೀಟ್ಸ್‌ನ Endymion, 'ನಿದ್ದೆ ಮತ್ತು ಲೀಲೆ'ಯ ಮೇಲೆ Sleep and Poetry ಮತ್ತು 'ಕೋಗಿಲೆ'ಯ ಮೇಲೆ Ode to a Nightingale ಕವನಗಳ ಪ್ರಭಾವವಿದೆ''[೯] ಎಂದು ಆಮೂರರು ಹೇಳುತ್ತಾರೆ. ಕವನದ ಆಶಯ ಮತ್ತು ವಿಷಯವಸ್ತುವಿನ ದೃಷ್ಟಿಯಿಂದ ಈ ಕವನಗಳ ಮಧ್ಯೆ ಸಾಮ್ಯ ಕಂಡುಬರುತ್ತದೇನೋ ನಿಜ. ಆದರೆ ಇದು ಆಕಸ್ಮಿಕವಾಗಿ ನಡೆದಿರಲೂಬಹುದು. ಸುಖ-ದುಃಖಗಳಿಗೆ, ಪಾಪ, ಪುಣ್ಯ, ಸ್ವರ್ಗ, ನರಕಗಳಂಥ ಕಲ್ಪನೆಗಳಿಗೆ ಜಗತ್ತಿನಾದ್ಯಂತ ಅನೇಕ ಕವಿಗಳು (ಸಾಮಾನ್ಯ ಜನರೂ ಕೂಡ) ಒಂದೇ ರೀತಿಯಲ್ಲಿ ಪ್ರತಿಕ್ರಿಯಿಸುವುದು ಸಾಧ್ಯವಿದೆ. ಸಂದರ್ಭ ಮತ್ತು ಸನ್ನಿವೇಶಗಳಲ್ಲಿಯ ಸಾಮ್ಯತೆ ಅವುಗಳಿಗೆ ನೀಡುವ ಪ್ರತಿಕ್ರಿಯೆಗಳಲ್ಲೂ ಕಂಡುಬರುವುದು ಸ್ವಾಭಾವಿಕ. ಈ ದೃಷ್ಟಿಯಿಂದ ಬೇಂದ್ರೆ ಕಾವ್ಯದ ಸಾಲುಗಳಿಗೂ ಇಂಗ್ಲಿಷ್ ಕವಿಗಳ ಕಾವ್ಯದ ಸಾಲುಗಳಿಗೂ ಸಂಬಂಧವಿದ್ದರೆ ಅದು ಆಕಸ್ಮಿಕವೇ ಸರಿ ಎಂದು ಹೇಳಬೇಕಾಗುತ್ತದೆ. ಹಾಗೆಂದು ಎಲ್ಲ ರೀತಿಯ ಪ್ರಭಾವವನ್ನು ತಳ್ಳಿ ಹಾಕಲು ಬರುವುದಿಲ್ಲ. ಈ ಸಂದರ್ಭದಲ್ಲಿ ಪ್ರಭಾವ ಮತ್ತು ಅನುಕರಣೆಗಳ ಮಧ್ಯದ ಅಂತರ ತಿಳಿಯುವುದು ಆವಶ್ಯಕ.

``ಶಿಲೆಯೊಳಗೆ ಸೆಲೆಯಾಗಿ ಹರಿದ ನೀರೇ'' ಎಂದು ವರ್ಣಿಸಿ ಇಂಗ್ಲಿಷ್ ರೊಮ್ಯಾಂಟಿಕ್ ಕವಿಯ ಪ್ರಭಾವವನ್ನು ಬೇಂದ್ರೆಯವರು ಸ್ಪಷ್ಟವಾಗಿ ಸೂಚಿಸಿದ್ದಾರೆ''[೧೦] ಎಂದು ಆಮೂರ ಅವರು ಬರೆಯುತ್ತಾರೆ. ಆದರೆ ಆಮೂರರು ಅಭಿಪ್ರಾಯಪಟ್ಟಂತೆ, ಬೇಂದ್ರೆಯವರ ಮೇಲೆ ಶೆಲ್ಲಿಯ ಪ್ರಭಾವ ಅಷ್ಟಾಗಿ ಆಗಿಲ್ಲ. ಈ ಕವನದ ಸಾಲಿನಲ್ಲಿ ಬೇಂದ್ರೆ ಶೆಲ್ಲಿಯ ಬಗ್ಗೆ ಕೇವಲ ಪ್ರಸ್ತಾಪ ಮಾಡಿದ್ದಾರೆ. ಬೇಂದ್ರೆ ಮತ್ತು ಶೆಲ್ಲಿ ವಿಭಿನ್ನ ದೃಷ್ಟಿಕೋನ ಹೊಂದಿದ ಕವಿಗಳು. ``Bendre is nothing if not concrete and Shelly is nothing if not abstract'' ಎಂದು ಕುರ್ತಕೋಟಿಯವರು ಹೇಳಿರುವುದರಲ್ಲಿ ತಥ್ಯವಿದೆ. ಶೆಲ್ಲಿ ಭೂಮಿಯನ್ನು ಆಕಾಶಕ್ಕೆ ಹೊತ್ತುಕೊಂಡು ಹೋದ ಕವಿ; ಬೇಂದ್ರೆ ಆಕಾಶವನ್ನು ಭೂಮಿಗೆ ಇಳಿಸಿದ ಕವಿ.

ಇದಲ್ಲದೆ ‘ಸೆರೆಯೊಂಬ ಹಿರಿ ಹಾವ ಹಿಡಿವ ಹದ್ದ’ ಎಂಬಲ್ಲಿಯ ಪ್ರತಿಮೆಯ ಮೂಲವನ್ನು ಶೆಲ್ಲಿಯ The Revolt of Islam ಮತ್ತು Alastor ಗಳಲ್ಲಿ ಹುಡುಕುವ ಆಮೂರರ ಕ್ರಮ ಒಪ್ಪಲಾಗದು. ಇದೇ ಕಾರಣದಿಂದಾಗಿ ‘ರವದಿ’ ಕವನದ ಮೇಲೆ Ode to the West Wind ಕವನದ ಪ್ರಭಾವವಿದೆ ಎಂದು ಹೇಳುವ ಆಮೂರರ ಅಭಿಪ್ರಾಯವನ್ನು ನಿರಾಕರಿಸಬೇಕಾಗುತ್ತದೆ.

ಆದರೆ, ಬೇಂದ್ರೆಯವರ ಕವನಗಳ ಮೇಲೆ ಕೀಟ್ಸ್‌ನ ಕಾವ್ಯ ಉಂಟುಮಾಡಿದ ಪ್ರಭಾವದ ಬಗ್ಗೆ ಆಮೂರರು ಹೇಳಿದ್ದನ್ನು ಒಪ್ಪಲೇಬೇಕಾಗುತ್ತದೆ. “ಹೊಸ ಹಾಡು ನಿನ್ನವೆಲ್ಲಿ ಹೋಗಿಹವೀಗ”[೫] ಎಂಬುದು ಕೀಟ್ಸ್‌ನ To Autumn ಕವನದ Where are the songs of Spring / Ay, where are they ? ಸಾಲನ್ನು ನೆನಪಿಗೆ ತರುತ್ತದೆ. ಅದರಂತೆಯೇ ಕೀಟ್ಸ್‌ನ Heard melodies are sweet but those unheard are sweeter ಎಂಬ ಸಾಲಿನ ತಾತ್ಪರ್ಯ ಬೇಂದ್ರೆಯವರ “ಅಂದ ಹಾಡಿಂದಲೂ ಬಂದ ಹಾಡಿನ ಸೊಗಸು /ಬಂದ ಗಂಧಕ್ಕಿಂತ ಬರಲಿರುವ ಹೂಗಂಪು ಆನಂದವದು, ಚೆಂದವದು”[೬] ಎಂಬ ಸಾಲಿನಲ್ಲಿ ಕಾಣಬಹುದು. ‘ಬಂದ’ ಎಂಬುದಕ್ಕೆ ಏನರ್ಥವಿಲ್ಲ? ಇದನ್ನು ಕೀಟ್ಸ್ ಸಾಲಿನ ಪ್ರತಿಧ್ವನಿಯೆನ್ನಬಹುದೇ?

ಕಾಳಿದಾಸ, ಕೀಟ್ಸ್ ಮತ್ತು ಬೇಂದ್ರೆಯವರಂಥ ಕವಿಗಳು ಕಾಮವನ್ನು ತಳ್ಳಿಹಾಕಿದವರಲ್ಲ. ಕಾಮ ಇವರ ಕಾವ್ಯದಲ್ಲಿಯ ಪ್ರಮುಖವಾದ ಧ್ವನಿಯಾಗಿದೆ. ಇವರು ಪ್ರೀತಿಯನ್ನು ಕೇವಲ ಅಧ್ಯಾತ್ಮದ ನೆಲೆಯಲ್ಲಿ, ಸೌಂದರ್ಯವನ್ನು ಆದರ್ಶದ ನೆಲೆಯಲ್ಲಿ ಗ್ರಹಿಸಿದವರಲ್ಲ. ಇವರು ಪ್ರಕೃತಿ ಪುರುಷರನ್ನು ಕುರಿತಾದ ಕಾವ್ಯವನ್ನು ರಚಿಸಿದವರು. ಬೇಂದ್ರೆ ಮತ್ತು ಕೀಟ್ಸ್ ಇವರ ಪ್ರಮುಖ ಧ್ವನಿ, ಕೀರ್ತಿನಾಥ ಕುರ್ತಕೋಟಿಯವರು ಅಭಿಪ್ರಾಯ ಪಟ್ಟಂತೆ, ಕಾಮಪ್ರಕೃತಿಯಾಗಿದೆ. “ಬೇಂದ್ರೆಯವರು ಕಾಮ-ಪ್ರೇಮಗಳಲ್ಲಿ ಅಪರಿಹಾರ್ಯವಾದ ವಿರೋಧವನ್ನು ಕಾಣುವುದಿಲ್ಲ”[೭] ಎಂದು ಆಮೂರರು ಅಭಿಪ್ರಾಯಪಡುತ್ತಾರೆ. ಕಾಮ ಪ್ರಕೃತಿಯ ಕುರಿತು ಕುರ್ತಕೋಟಿಯವರು ಬರೆದದ್ದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. “ಬೇಂದ್ರೆಯವರ ಪ್ರತಿಭೆ ದೊಡ್ಡ ಕವಿಗಳ ಪ್ರತಿಭೆಯ ಜಾತಿಯದು. ಅದರ ಮೂಲ ಪ್ರಕೃತಿ, ಕಾಮಪ್ರಕೃತಿ, ಆ ಕಾಮ ಒಮ್ಮೆ ದೇವಕಾಮವಾಗಿ, (ಕೀಟ್ಸ್ ಮಾತಿನಲ್ಲಿ) ‘ಹಣ್ಣುಗಳನ್ನು ತಿರುಳಿನಿಂದ ತುಂಬುವಂತೆ’ ಮಾಡಬಲ್ಲದು; ಪ್ರಕೃತಿಯ ಲೀಲೆಗಳಲ್ಲಿ, ಮನುಷ್ಯನ ಸುಖದುಃಖಗಳಲ್ಲಿ, ಸಂತಾನೋತ್ಸವದ ಸಂಭ್ರಮಗಳಲ್ಲಿ ಪಾಲುಗೊಳ್ಳಬಹುದು. ಇನ್ನೊಮ್ಮೆ ಜೀವದ ಅಭೀಪ್ಸೆಯಾಗಿ ಭೂಮಿಯ ಸಕಲ ಸತ್ವಗಳೊಂದಿಗೂ ಮೇಲೇರಬಲ್ಲದು. ಬ್ರಹ್ಮ, ಯಕ್ಷ, ರಾಕ್ಷಸ, ಅಪ್ಸರೆ, ಪಿಶಾಚಿ ಮುಂತಾದವರನ್ನು ಜೀವಂತವಾಗಿ ಸೃಷ್ಟಿಸಬಲ್ಲದು. ಪ್ರಣಯ ಸಮಾಧಿಯಲ್ಲಿಯೂ ಕಲ್ಪವೃಕ್ಷ ವೃಂದಾವನಗಳನ್ನು ಕಾಣಬಹುದು.”[೮] ಕುರ್ತಕೋಟಿಯವರು ಬೇಂದ್ರೆಯವರ ಕಾಮಪ್ರಕೃತಿಯನ್ನು ಈ ರೀತಿಯಾಗಿ ವಿವರಿಸಿದ್ದಾರೆ. ಅವರ ಕಾವ್ಯದ ಎಲ್ಲ ಸಿದ್ಧಿಗಳಿಗೂ ಕಾಮಪ್ರಕೃತಿಯೇ ಕಾರಣವೆಂದು ಇದರ ಅರ್ಥವಲ್ಲ. ಆದರೆ ಕಾಮಪ್ರಕೃತಿ ಅವರ ಕಾವ್ಯದ ಪ್ರಮುಖ ಧ್ವನಿಯಾದಂತೆ ಅದರ ಆಶಯವೂ ಧ್ವನಿಯೂ ಆಗಿದೆ ಎಂದು ಹೇಳಬಹುದು. “ಪ್ರಣಯ ಸಮಾಧಿಯಲ್ಲಿಯೂ ಕಲ್ಪವೃಕ್ಷ ವೃಂದಾವನಗಳನ್ನು ಕಾಣಬಹುದು” ಎಂಬ ಕುರ್ತಕೋಟಿಯವರ ಅಭಿಪ್ರಾಯವನ್ನು ವಿವರವಾಗಿ ನೋಡಬೇಕಿದೆ. ಪ್ರಣಯ ಸಮಾಧಿಯೆಂದರೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿದಾಗ ವ್ಯಕ್ತಿ ತಲುಪುವ ಸುಖದ ಅತ್ಯಂತಿಕ ಕ್ಷಣ. ಇದನ್ನು

ಕುರ್ತಕೋಟಿಯವರು ಕಾಮಪ್ರಕೃತಿ ಎಂದು ಕರೆದಿದ್ದಾರೆ. ಬೇಂದ್ರೆಯವರ ಕಾವ್ಯವನ್ನು ಕೇವಲ ಅಲೌಕಿಕ ನೆಲೆಯಲ್ಲಿ, ಅಧ್ಯಾತ್ಮದ ಪರಿಭಾಷೆಯಲ್ಲಿ ಅರ್ಥೈಸುವುದು ಎಷ್ಟು ಸರಿ ಎಂದು ಕೇಳುವ ಕಾಲ ಈಗ ಒದಗಿ ಬಂದಿದೆ. ಈ ಸಂದರ್ಭದಲ್ಲಿ ಕಾಮದ ಕುರಿತು ಬೇಂದ್ರೆಯವರು ಹೇಳಿದ ಮಾತುಗಳನ್ನು ನೋಡೋಣ : "ಕಾಮವೂ ಕಸ್ತೂರಿಯಂತೆ ಒಕ್ಕಾಲು ಮದ, ಮುಕ್ಕಾಲು ಮಣ್ಣು. ಆದರೂ ಮಗಮಗಿಸುವ ಸವಿಗಂಪು ! ಕಾಮ ಪ್ರೇಮ; ಕೆಸರು ಕಮಲವಿದ್ದಂತೆ. ಒಂದು ವಾಚ್ಯ, ಒಂದು ಧ್ವನಿ ಕಾವ್ಯದ ಭಾಷೆಯಲ್ಲಿ" ' ಎಂದು ಬೇಂದ್ರೆ ಬರೆಯುತ್ತಾರೆ. ಬೇಂದ್ರೆಯವರ ಈ ಮಾತುಗಳು ಅವರ ಮೊದಲ ಘಟ್ಟದ ಕಾವ್ಯವನ್ನು ಅರ್ಥಮಾಡಿಕೊಳ್ಳಲು ಬಹಳ ನೆರವು ನೀಡುತ್ತವೆ. ಕಾಮವನ್ನು ಕೆಸರಿಗೂ ಪ್ರೇಮವನ್ನು ಕಮಲಕ್ಕೂ ಬೇಂದ್ರೆ ಹೋಲಿಸಿದ್ದಾರೆ. ಆದರೆ ಕಾಮವನ್ನು ಹೊರತುಪಡಿಸಿ ಪ್ರೇಮವಾಗಲೀ, ಪ್ರೇಮವನ್ನು ಹೊರತುಪಡಿಸಿ ಕಾಮವಾಗಲೀ ಇರುವುದಿಲ್ಲ ಎಂದು ಅವರು ಹೇಳುತ್ತಾರೆ. ಅವರು ಒಂದನ್ನು (ಕಾಮವನ್ನು) ತುಚ್ಛೀಕರಿಸಿ ಇನ್ನೊಂದನ್ನು(ಪ್ರೇಮವನ್ನು) ವೈಭವೀಕರಿಸುವುದಿಲ್ಲ. ಬೇಂದ್ರೆಯವರು ಅಲೌಕಿಕತೆಯ ನೆಲೆಯಲ್ಲಿ, ಅಧ್ಯಾತ್ಮದ ನೆಲೆಗಟ್ಟಿನ ಮೇಲೆ, ನೈತಿಕತೆ ಮತ್ತು ಆದರ್ಶೀಕರಣದ ತಳಹದಿಯ ಮೇಲೆ ಅವರ ಕಾವ್ಯವನ್ನು ಬೆಲೆಗಟ್ಟುವವರಿಗೆ ಒಂದು ರೀತಿಯ ಕಿವಿಮಾತು ಹೇಳಿದ್ದಾರೆ. "ಬೇಂದ್ರೆಯವರು ಜೀವನವನ್ನೇ ಪ್ರೀತಿಸಿದವರು, ಕಾಮವನ್ನು ಪ್ರೀತಿಸಿದ್ದು ಸಹಜವೇ. ಆದುದರಿಂದಲೇ ಅವರು ಕಾಮವನ್ನು ವೈವಿಧ್ಯಪೂರ್ಣವಾಗಿ ವರ್ಣಿಸಲು ಸಾಧ್ಯವಾಗಿದೆ" ಎಂದು ಆರ್. ಜಿ. ಕುಲಕರ್ಣಿಯವರು ಅಭಿಪ್ರಾಯಪಟ್ಟರೆ, "ಬೇಂದ್ರೆಯವರ ಯಾವುದೇ ಪ್ರಣಯ ಕವನ, ಲೈಂಗಿಕ ಎಳೆತವನ್ನು ನಿರ್ಮಿಸುವುದಿಲ್ಲ. ಲೈಂಗಿಕ ಎಳೆತವು ಮೂಲಭೂತವಾಗಿದ್ದರೂ ಅದು ಅಪನತಿಕಾರಕ" ಎಂದು ವಾಮನ ಬೇಂದ್ರೆಯವರು ಅಭಿಪ್ರಾಯಪಡುತ್ತಾರೆ.

ಕುರ್ತಕೋಟಿಯವರನ್ನು ಹೊರತುಪಡಿಸಿ ಇನ್ನುಳಿದ ವಿಮರ್ಶಕರು ಬೇಂದ್ರೆಯವರ ಕಾವ್ಯದ ಮುಖ್ಯ ಧ್ವನಿಯಾಗಿರುವ ಕಾಮಪ್ರಕೃತಿಯನ್ನು ಗಂಭೀರವಾದ ಅಧ್ಯಯನಕ್ಕೆ ಒಳಪಡಿಸದಿರುವುದು ದುರದೃಷ್ಟಕರ ಸಂಗತಿ. ಬೇಂದ್ರೆ ಮೂಲಭೂತವಾಗಿ ಕವಿ ಎಂದು ತಿಳಿದರೆ ಅವರ ಕಾವ್ಯದಲ್ಲಿಯ ಕಾಮದ ಬಗ್ಗೆ ಇಷ್ಟು ತಲೆ ಕೆಡಿಸಿಕೊಳ್ಳುವ ಪ್ರಮೇಯವೇ ಬರುವುದಿಲ್ಲ. ಕಲೆ ಲೌಕಿಕವಾದುದು ಎಂದು ಒಪ್ಪಿಕೊಳ್ಳಲೇಬೇಕು. ಕಲೆಯ ಬಗ್ಗೆ ಒಂದು ಸುಭಾಷಿತದ ಅರ್ಥ ಹೀಗಿದೆ : It would be interesting to note that all art revolves round the feminine form whether it is conceived in the shape of Prikriti. ಶತಪಥ ಬ್ರಾಹ್ಮಣದಲ್ಲೂ ಈ ಬಗ್ಗೆ ಒಂದು ಮಾತು ಬರುತ್ತದೆ. "Creation, whether biological or intellectual, is essentially the work of art" ಎಂದು. ಇದನ್ನು ಪರೀಕ್ಷಿಸಿದರೆ ಕಲೆ, ಸಾಹಿತ್ಯದಲ್ಲಿ ಕಾಮ ನಿರ್ವಹಿಸುವ ಮಹತ್ವದ ಪಾತ್ರದ ಬಗ್ಗೆ ಸ್ಪಷ್ಟವಾಗಿ ತಿಳಿಯುತ್ತದೆ.

ಬೇಂದ್ರೆಯವರ ಕಾವ್ಯದ ಹಲವು ಮಗ್ಗಲುಗಳ ಕುರಿತು ಕನ್ನಡದಲ್ಲಿ ಮೌಲಿಕವಾದ ವಿಮರ್ಶೆ ಬಂದಿದೆ. ಅವರ ಕಾವ್ಯದ ಸತ್ವವನ್ನು ಕುರ್ತಕೋಟಿಯವರು ತಮ್ಮ ಹಲವು ಕೃತಿಗಳಲ್ಲಿ ಸಮರ್ಥವಾಗಿ ಸುದೀರ್ಘವಾಗಿ ಮಾಡಿದ್ದಾರೆ. ಅವರು ಬೇಂದ್ರೆ ಕಾವ್ಯದಲ್ಲಿಯ `ಶ್ರಾವಣ ಪ್ರತಿಭೆ' ಕುರಿತು ಪ್ರಸ್ತಾಪಿಸಿದ್ದಾರೆ. ಗೋಕಾಕರು ಬೇಂದ್ರೆಯವರ 'ಆರ್ಷದೃಷ್ಟಿ'ಯ ಕುರಿತು ಬರೆದಿದ್ದಾರೆ. ಅವರ ಕಾವ್ಯದಲ್ಲಿಯ `ಆಧ್ಯಾತ್ಮಿಕತೆ'ಯ ಕುರಿತು ಇನ್ನೂ ಹಲವರು ಬರೆದಿದ್ದಾರೆ.

'ಅರಳು ಮರಳು' ಕವನ ಸಂಕಲನದ ಮುನ್ನುಡಿಯಲ್ಲಿ ಕವಿ ಗೋಕಾಕರು ಹೀಗೆ ಬರೆಯುತ್ತಾರೆ: "ಇಲ್ಲಿ ಮುಖ್ಯವಾದುದು ಕವಿಯ ಆರ್ಷದೃಷ್ಟಿ. ಹೀಗೆಂದೊಡನೆ ಬೇಂದ್ರೆಯವರನ್ನು ಋಷಿಗಳೆಂದು ನಾನು ಕರೆದೆನೆಂದು ನೂರು ಆಕ್ಷೇಪಣೆಗಳು ಏಳಬಹುದು. ಬೇಂದ್ರೆಯವರು ಸಾಧಕರು ನಿಜ. ಅದಕ್ಕಿಂತಲೂ ಹೆಚ್ಚೆಂದು ಅವರೇ ಒಪ್ಪುವುದಿಲ್ಲ."[೧೮] ಗೋಕಾಕರು ಬಹಳ ಎಚ್ಚರಿಕೆಯಿಂದ ಈ ಮಾತುಗಳನ್ನು ಆಡಿದ್ದಾರೆ. ಬೇಂದ್ರೆಯವರು ಋಷಿಯ ದೃಷ್ಟಿ ಹೊಂದಿದವರು, ಆದರೆ ಅವರು ಋಷಿಗಳಲ್ಲ ಎನ್ನುವುದು ಅವರ ಮಾತಿನ ತಾತ್ಪರ್ಯ. ಬೇಂದ್ರೆಯವರನ್ನು ಋಷಿಗಳೆಂದು ಕರೆದರೆ ಅವರ ಕಾವ್ಯಕ್ಕೆ ಬೀಳುವ ಪೆಟ್ಟಿನ ಅಂದಾಜು ಗೋಕಾಕರಿಗೆ ಇದ್ದಿತು ಎನ್ನಿಸುತ್ತದೆ. 'ಅರಳು ಮರಳು' ೧೯೫೭ ರಲ್ಲಿ ಪ್ರಕಟಗೊಂಡಿತು, 'ನಾಕು ತಂತಿ' ೧೯೬೪ ರಲ್ಲಿ ಪ್ರಥಮ ಮುದ್ರಣ ಕಂಡಿತು. ಈ ಅವಧಿಯಲ್ಲಿ ಬೇಂದ್ರೆಯವರು ತಮ್ಮ ಕಾವ್ಯವನ್ನು ವಿವರಿಸುವ ರೀತಿಯಲ್ಲಿ ಬಹಳ ಬದಲಾಗಿದ್ದರು. ಅವರು ತಮ್ಮ ವ್ಯಕ್ತಿತ್ವದ ಬಗೆಗೆ, ತಮ್ಮ ಕಾವ್ಯದ ವ್ಯಕ್ತಿತ್ವದ ಬಗೆಗೆ ವಿಚಿತ್ರವಾದ ಕಲ್ಪನೆಗಳನ್ನು ಕಂಡುಕೊಂಡಿದ್ದರು. "ಭೋಗಸಾಧನೆಯ ಕವನಭಾಂಡಾರವೂ ಇದೆ. ಯೋಗಸಾಧನೆಯ ಕವನ ಮಾರ್ಗವೂ ಇದೆ" ಎಂಬಂತಹ ಬೇಂದ್ರೆಯವರ ಮಾತುಗಳನ್ನು ನಾವು ಬಹಳ ಎಚ್ಚರಿಕೆಯಿಂದ ಪರೀಕ್ಷಿಸಬೇಕಾಗುತ್ತದೆ. 'ನಾಕು ತಂತಿ'ಯ ಮುನ್ನುಡಿಯಲ್ಲಿ ಅವರು ಈ ಮಾತುಗಳನ್ನು ಆಡಿದ್ದಾರೆ. ಲೌಕಿಕ ಜಗತ್ತಿನ ಬಗೆಗಿನ ಕಾವ್ಯವೂ ಇದೆ; ಅಲೌಕಿಕ ಅನುಭಾವದ ಕುರಿತಾದ ಕಾವ್ಯವೂ ಇದೆ; ತಮ್ಮದು ಎರಡನೆಯ ರೀತಿಯ ಕಾವ್ಯ ಎಂದು ಅವರು ಹೇಳಿಕೊಂಡಂತೆ ತೋರುತ್ತದೆ.

" 'ಅಂಬಿಕಾತನಯದತ್ತ'ನ ಕವನಗಳಿಗೆ ಸ್ವಾಗತ ನೀಡುತ್ತ ಬಂದಿರುವ ಸಹೃದಯರಿಗೆಲ್ಲ 'ಬೇಂದ್ರೆ' ಆಭಾರಿಯಾಗಿದ್ದಾನೆ; ತನ್ನ ಲಿಪಿಕಾರಕತೆಯ ಕಾಯಕ ವ್ಯರ್ಥವಲ್ಲವೆಂದು, ತನ್ನ ಸ್ವಚ್ಛಂದ ಗಮಕ ಕೇವಲ ನಿಷ್ಫಲವೆಂದು" ಬೇಂದ್ರೆಯವರು ಅಂಬಿಕಾತನಯದತ್ತರ 'ನಾಕು ತಂತಿ' ಕವನ ಸಂಕಲನದ ಮುನ್ನುಡಿಯಲ್ಲಿ ಬರೆಯುತ್ತಾರೆ. ಅಂಬಿಕಾತನಯದತ್ತ ಬೇರೆ, ಬೇಂದ್ರೆ ಬೇರೆ ಎಂದು ಬೇಂದ್ರೆಯವರು ಹೇಳುತ್ತಾರೆ. ಇಂಥ ಮಾತುಗಳು ಓದುಗರನ್ನು, ವಿಮರ್ಶಕರನ್ನು ಹಾದಿ ತಪ್ಪಿಸಬಹುದು.

ಕಾವ್ಯರಚನೆ ನೂರಕ್ಕೆ ನೂರರಷ್ಟು ಎಚ್ಚರದಲ್ಲಿ ನಡೆಯುವ ಪ್ರಕ್ರಿಯೆ ಅಲ್ಲವಾದರೂ ನೂರಕ್ಕೆ ನೂರು ಅಪ್ರಜ್ಞಾವಸ್ಥೆಯ ಅಥವಾ ಅರೆಪ್ರಜ್ಞೆಯ ಸ್ಥಿತಿಯಲ್ಲಿ ಸಂಭವಿಸುವಂಥ ಘಟನೆಯೂ ಅಲ್ಲ. ಸೃಷ್ಟಿಕ್ರಿಯೆಯಲ್ಲಿ ತೊಡಗಿದಾಗ ಬಾಹ್ಯ ಜಗತ್ತು ಕಣ್ಮರೆಯಾದಂತೆ ತೋರಿದರೂ ಕಲಾಕಾರ ಜಗತ್ತಿನ ಆಗುಹೋಗುಗಳಿಗೆ ಸಂಪೂರ್ಣ ಕುರುಡಾಗುವುದಿಲ್ಲ. ಬಾಹ್ಯ ಜಗತ್ತಿಗೆ ಕುರುಡಾಗಿ ಕಾವ್ಯ ರಚಿಸಲು ಸಾಧ್ಯವೇ ? ಸೃಷ್ಟಿಸುವ ಕ್ರಿಯೆಯಲ್ಲಿ, ಸೃಷ್ಟಿಸುವ ವಸ್ತುವಿನಲ್ಲಿ ಇನ್ನಿಲ್ಲದಂತೆ ಒಂದಾಗಿ ಬೆಸೆಯಬಹುದು, ಅಷ್ಟೆ. "ನಿನ್ನ ಸ್ಪರ್ಶವೂ ಸಾಕು ಹೊಸ ಸೃಷ್ಟಿಯೇ ಬರಬಹುದು" ಎಂದು ಬೇಂದ್ರೆಯವರೇ ಹಾಡಿದ್ದಾರೆ.

ಮೇಲೆ ಉದ್ಧರಿಸಿದ ಬೇಂದ್ರೆಯವರ ಮಾತುಗಳನ್ನು, ಆ ಮೊದಲು ಪ್ರಸ್ತಾಪಿಸಿದ ಗೋಕಾಕರ ಅಭಿಪ್ರಾಯವನ್ನು ಕೆ. ಎಸ್. ನಾರಾಯಣಾಚಾರ್ಯರು ತಪ್ಪಾಗಿ ಭಾವಿಸಿದ್ದಾರೆ. ಅವರು ಹೀಗೆ ಬರೆಯುತ್ತಾರೆ : " 'ಅರಳು ಮರಳು' ಸಂಕಲನದ ಮುನ್ನುಡಿಯಲ್ಲಿ ಗೋಕಾಕರು 'ಇಲ್ಲಿ ಮುಖ್ಯವಾದುದು ಕವಿಯ ಆರ್ಷದೃಷ್ಟಿ' ಎಂದು ಬರೆದು, ಹೀಗೆಂದೊಡನೆಯೇ

'ಬೇಂದ್ರೆಯವರನ್ನು ಋಷಿಗಳೆಂದು ನಾನು ಕರೆದೆನೆಂದು ನೂರು ಆಕ್ಷೇಪಣೆಗಳು ಏಳಬಹುದು' ಎಂದು ಸಂಕೋಚದ, ಕ್ಷಮಾಯಾಚನೆಯ ಸ್ವರದಲ್ಲಿ ಬರೆದರು ! ಆಮೇಲೆ ಕನ್ನಡ ಕಾವೇರಿ ತುಂಗೆಯರು ಬಹಳ ಪ್ರವಹಿಸಿದ್ದಾಗಿದೆ. ಈಗ ಸಂಕೋಚವಿಲ್ಲದೆ, non-apologetic ಎಂಬ ರೀತಿಯಲ್ಲಿ ಈ ಗ್ರಂಥ ಬೇಂದ್ರೆಯವರನ್ನು ಋಷಿಯೆಂದೇ ಗುರುತಿಸಿ ಗೌರವಿಸಲು ಯತ್ನಿಸಿದೆ."[೧೧] ನಾರಾಯಣಾಚಾರ್ಯರ ಬರಹದ ರೀತಿ ವಿಮರ್ಶೆಯ ಎಲ್ಲ ಸೌಜನ್ಯವನ್ನು ಮೀರಿದೆ. ಅವರು ಡಿ. ಆರ್. ನಾಗರಾಜ, ನಾಡಿಗೇರ ಮುಂತಾದ ಲೇಖಕರ ಕುರಿತು ಆಡುವ ಮಾತು ಅವರ ವಿಮರ್ಶೆಯ ಕುಬ್ಜತನವನ್ನು ಎತ್ತಿ ತೋರಿಸಿದಂತೆ ಅವರ ಆಲೋಚನಾಕ್ರಮದ ಹಿಂದಿನ ಉದ್ದೇಶವನ್ನು ಪ್ರಕಟಪಡಿಸುತ್ತದೆ. "ಬೇಂದ್ರೆಯವರು ನಿಸ್ಸಂದೇಹವಾಗಿ ಕನ್ನಡದ ಈ ಶತಮಾನದ ಏಕಮೇವ ಋಷಿಗಳು"[೧೨] ಎಂದು ಬಣ್ಣಿಸುವುದರ ಮೂಲಕ ನಾರಾಯಣಾಚಾರ್ಯರು ಬೇಂದ್ರೆ ಕಾವ್ಯಕ್ಕೆ ಅನ್ಯಾಯ ಮಾಡಿದ್ದಾರೆ. ನಾರಾಯಣಾಚಾರ್ಯರ ವಾದವನ್ನು ಸಮರ್ಥಿಸಿದ ಎನ್ಕೆಯವರನ್ನು ಬೇಂದ್ರೆ ಕಾವ್ಯ ಕ್ಷಮಿಸಲಾರದು. 'ಬೇಂದ್ರೆ ಕಾವ್ಯದಲ್ಲಿ ಅಧ್ಯಾತ್ಮದ ನೆಲೆ ಮತ್ತು ಆರ್ಷದೃಷ್ಟಿ' ಗ್ರಂಥ ಬೇಂದ್ರೆಯವರ ಕಾವ್ಯದ ಮೇಲೆ ಹೊಸ ಬೆಳಕು ಚೆಲ್ಲುವುದಿಲ್ಲ. ಆದರೆ ಬೇಂದ್ರೆ ಕಾವ್ಯದ ಓದುಗರನ್ನು ತಪ್ಪು ದಾರಿಗೆ ಕೊಂಡೊಯ್ಯುತ್ತದೆ. ಇಂಥ ಸಂದರ್ಭದಲ್ಲಿ ಬೇಂದ್ರೆಯವರ ಕಾವ್ಯವನ್ನು ಕುರಿತು ಮುಕ್ತವಾದ ಅಧ್ಯಯನ ಹಾಗೂ ಸೃಜನಶೀಲವಾದ ಸಂವಾದ ಹೆಚ್ಚು ಹೆಚ್ಚು ನಡೆಯಬೇಕಿದೆ.

ಬೇಂದ್ರೆ ಕೀಟ್ಸ್ ಇವರ ವ್ಯಕ್ತಿತ್ವಗಳ ನಡುವಿನ ಸಂಬಂಧ ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಬೇಂದ್ರೆ ೮೧ ವರ್ಷಗಳ ಸುದೀರ್ಘವಾದ ಜೀವನ ನಡೆಸಿದರೆ ಕೀಟ್ಸ್ ೨೬ ವರ್ಷ ಪೂರ್ಣಗೊಳಿಸುವ ಮುಂಚೆಯೇ ತೀರಿಹೋದನು. ಕೀಟ್ಸ್‌ನ ಕಾವ್ಯಪ್ರತಿಭೆ ಸಂಪೂರ್ಣವಾಗಿ ಅರಳುವ ಮೊದಲೇ ಅವನು ಸಾವಿಗೆ ತುತ್ತಾದ. ಆದರೆ ಬೇಂದ್ರೆಯವರು 'ಅರಳು ಮರಳು' ದಾಟಿ ಹೋಗಿ 'ನಾಕು ತಂತಿ'ಗಳನ್ನು ಮೀಟುತ್ತ ತಮ್ಮ ಪ್ರತಿಭೆಯ ಪೂರ್ಣ ಸ್ವರೂಪವನ್ನು ಪ್ರದರ್ಶಿಸಿದರು.

ಇವರ ಬದುಕು ಮತ್ತು ಕಾವ್ಯಗಳಲ್ಲಿಯ ಕೆಲವು ಸಮಾನ ಸಂಗತಿಗಳ ಪಟ್ಟಿಯೊಂದನ್ನು ಇಲ್ಲಿ ಕೊಡಬಹುದಾಗಿದೆ :

೧. ಇಬ್ಬರದೂ ಅನುಭವಜನ್ಯ ಕಾವ್ಯ; ಇಬ್ಬರ ಕೆಲವು ಕವನಗಳ ವಸ್ತುವಿನ ಮೂಲ ಅವರ ಬದುಕು,
೨. ಇಬ್ಬರೂ ಬಹು ಬೇಗನೇ ತಮ್ಮ ತಂದೆಯನ್ನು ಕಳೆದುಕೊಂಡರು,
೩. ಇಬ್ಬರೂ ಕೌಟುಂಬಿಕ ತೊಂದರೆಗಳನ್ನು, ಆರ್ಥಿಕ ಸಂಕಷ್ಟಗಳನ್ನು ಅನುಭವಿಸಿದರು,
೪. ಇಬ್ಬರೂ ಪ್ರಕೃತಿ-ಪುರುಷ ಸಂಬಂಧ ಕುರಿತು ಚಿಂತಿಸಿದರು,
೫. ಇಬ್ಬರೂ ಸೌಂದರ್ಯವನ್ನು ಮೆಚ್ಚಿ ಆರಾಧಿಸಿದರು,
೬. ಇಬ್ಬರೂ ಅಗಾಧವಾದ ಕಾವ್ಯಪ್ರತಿಭೆ ಹೊಂದಿದ್ದರು.

ಇಬ್ಬರ ಮಧ್ಯೆ ಕೆಲವು ವ್ಯತ್ಯಾಸಗಳೂ ಇದ್ದವು. ಕೀಟ್ಸ್ ಭಗ್ನಪ್ರೇಮಿ; ದಾಂಪತ್ಯಸುಖ ಅನುಭವಿಸಲಿಲ್ಲ. ಆದರೆ ಬೇಂದ್ರೆ ಸುಖದಾಂಪತ್ಯ ನಡೆಸಿದರು. ಅವರ ಬಾಳಿನಲ್ಲಿ ಬಡತನ, ಸಾವುಗಳು ಘಟಿಸಿದರೂ ದಾಂಪತ್ಯ ಮಾತ್ರ ಸಮರಸದಿಂದ ಕೂಡಿತ್ತು.

ಕೀಟ್ಸ್ ೧೭೯೫ ರ ಅಕ್ಟೋಬರ್‌ನಲ್ಲಿ ಜನಿಸಿದನು. ಅವನ ತಂದೆ ಟಾಮಸ್ ಕೀಟ್ಸ್ ಕಾಸ್ತಾರನಾಗಿದ್ದ. ಅವನ ತಾಯಿ ಫ್ರಾನ್ಸಿಸ್ ಜೆನ್ನಿಂಗ್ ಒಳ್ಳೆಯ ಸ್ತ್ರೀ ಆಗಿರಲಿಲ್ಲ. ಅವರ ಹಿರಿಯ ಮಗ ಕೀಟ್ಸ್. ಅವನಿಗೆ ಜಾರ್ಜ್, ಟಾಮ್ ಮತ್ತು ಎಡ್ವರ್ಡ್ (ಬಾಲ್ಯದಲ್ಲಿಯೇ ಅಸುನೀಗಿದನು) ಎಂಬ ಮೂರು ಜನ ತಮ್ಮಂದಿರೂ ಹಾಗೂ ಫ್ರಾನ್ಸಿಸ್ ಮೇರಿ ಎಂಬ ಸಹೋದರಿಯೂ ಇದ್ದಳು. ಕೀಟ್ಸ್ ತನ್ನ ಹತ್ತನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ತಬ್ಬಲಿಯಾದ. ಗಾಯದ ಮೇಲೆ ಬರೆ ಎಳೆದಂತೆ ಅವನ ತಾಯಿ ಗಂಡ ಸತ್ತ ಎರಡು ತಿಂಗಳೊಳಗಾಗಿಯೇ ರಾವ್‌ಲಿಂಗ್ಸ್ ಎಂಬಾತನನ್ನು ಮರುಮದುವೆಯಾದಳು. ನಂತರದಲ್ಲಿ ಅವನ ತಾಯಿ ಕ್ಷಯಕ್ಕೆ ಬಲಿಯಾದಳು. ಆಗ ಕೀಟ್ಸ್ ತನ್ನ ಸಹೋದರ ಸಹೋದರಿಯರ ಪಾಲನೆಪೋಷಣೆ ಮಾಡುವ ಹೊಣೆಯನ್ನು ಹೊರಬೇಕಾಯಿತು. ಕೀಟ್ಸ್ ಆರ್ಥಿಕವಾಗಿ ಹೇಳಲಾಗದ ಯಾತನೆ ಅನುಭವಿಸಿದ. ಅವನು ವೈದ್ಯಕೀಯ ಶಿಕ್ಷಣ ಬಿಟ್ಟುಕೊಟ್ಟು ಕಾವ್ಯರಚನೆಗೆ ತೊಡಗಿದ. ತನ್ನ ಓರ್ವ ಸಹೋದರ ಜಾರ್ಜನನ್ನು ಅಮೇರಿಕಾಗೆ ಓದಲು ಕಳಿಸಿದ. ಆದರೆ ಇನ್ನೋರ್ವ ಸಹೋದರ ಟಾಮ್ ಕ್ಷಯಕ್ಕೆ ಬಲಿಯಾದನು. ಕೀಟ್ಸ್ ಫ್ಯಾನಿ ಬ್ರೌನ್ ಎಂಬಾಕೆಯನ್ನು ಪ್ರೀತಿಸಿದ. ಆದರೆ ಅಷ್ಟರಲ್ಲಿ ಅವನೇ ಕ್ಷಯಕ್ಕೆ ತುತ್ತಾದ. ಉಲ್ಬಣಗೊಳ್ಳುತ್ತಿರುವ ರೋಗದಿಂದಾಗಿ ಕೀಟ್ಸ್‌ನಿಗೆ ಫ್ಯಾನಿ ಬ್ರೌನ್‌ಳನ್ನು ಮದುವೆಯಾಗಲು ಸಾಧ್ಯವಾಗಲಿಲ್ಲ. ತನ್ನ ಕಾವ್ಯಕ್ಕೆ ಕಟುವಾದ ವಿಮರ್ಶೆ ಬಂದಿದ್ದರಿಂದ ಕೀಟ್ಸ್‌ನ ಮನಸ್ಸಿಗೆ ನೋವಾಯಿತು. ಕ್ಷಯ ಅವನ ದೇಹದಲ್ಲಿಯ ಚೈತನ್ಯವನ್ನು ನುಂಗಿತು. ಅವನು ರಕ್ತ ಉಗುಳಿದ. ಅದನ್ನು death warrant ಎಂದು ಬಣ್ಣಿಸಿದ. ವೈದ್ಯರು ಉಷ್ಣಪ್ರದೇಶಕ್ಕೆ ಹೋಗಿ ಇರಲು ಕೀಟ್ಸ್‌ನಿಗೆ ಹೇಳಿದರು. ಅವನು ಇಟಲಿಗೆ ಪ್ರಯಾಣ ಬೆಳೆಸಿದ. ಮಾರ್ಗಮಧ್ಯೆ ಶೀತ ಹತ್ತಿತು. ಇಟಲಿಗೆ ಹೋದ ಕೆಲವು ದಿನಗಳಲ್ಲಿಯೇ ಅವನು ತನ್ನ ದೇಹ ಬಿಟ್ಟ.

ಕಾವ್ಯದ ಬಗ್ಗೆ ಕೀಟ್ಸ್‌ನ ನಿಲುವುಗಳನ್ನು ತಿಳಿಯುವುದರಿಂದ ಅವನ ಕಾವ್ಯದ ಅಭ್ಯಾಸಕ್ಕೆ ಅನುಕೂಲವಾಗುತ್ತದೆ. ತನ್ನದೊಂದು ಪತ್ರದಲ್ಲಿ ಕೀಟ್ಸ್ ಹೀಗೆ ಬರೆಯುತ್ತಾನೆ : "ನನಗೆ ಹೃದಯದ ಒಲುಮೆ ಪ್ರೀತಿಗಳ ಪರಿಶುದ್ಧತೆಯಲ್ಲೂ ತುಂಬ ವಿಶ್ವಾಸ; ಅಂತೆಯೆ ಕಲ್ಪಕ ಶಕ್ತಿಯ ಸತ್ಯತೆಯಲ್ಲೂ. ಮಾನವನ ಕಲ್ಪನೆ ಯಾವುದನ್ನು ಸುಂದರವೆಂದು ಬಗೆಯುತ್ತದೆಯೋ ಅದು ಸತ್ಯವೂ ಅಹುದು (ಅದು ಈ ಮುಂಚೆ ಅಸ್ತಿತ್ವದಲ್ಲಿ ಇದ್ದಿರಬಹುದು ಅಥವಾ ಇಲ್ಲದಿದ್ದಿರಬಹುದು). ನನ್ನದು ಪ್ರೇಮದ ಬಗ್ಗೆ ಇರುವ ದೃಷ್ಟಿಯೇ ಮಾನವೀಯ ಹೃದಯದ ಎಲ್ಲ ರಾಗ-ಅನುರಾಗಗಳ ಬಗೆಗೂ ಆಗಿದೆ. ತಮ್ಮ ಪಾರಮ್ಯ ಸ್ಥಿತಿಯಲ್ಲಿ ಅವು ಅಪ್ಪಟ ಸೌಂದರ್ಯವನ್ನೇ ನಿರ್ಮಿಸುವ ಸೃಜನಶೀಲತೆಯನ್ನು ಹೊಂದಿದವು ಆಗಿರುತ್ತವೆ. ಅದೆಂತೆ ಇರಲಿ, ನನಗೆ ವೈಚಾರಿಕ ಬದುಕಿನ ಬದಲು ಸಂವೇದನಾಶೀಲತೆಯ ಬದುಕು ಆಪ್ಯಾಯಮಾನ. ಪ್ರತಿಭೆ ಗ್ರಹಿಸಿದ್ದೆಲ್ಲ ಸತ್ಯವಾದುದು" (೧೮೧೭ ನವೆಂಬರ್ ೨೨) ಎಂದು ಕೀಟ್ಸ್ ಹೇಳುತ್ತಾನೆ. ಹಾಗೆಯೇ ಕವಿಯ ಬಗ್ಗೆ ಅವನು ತನ್ನದೇ ಆದ ಅಭಿಪ್ರಾಯ ಹೊಂದಿದ್ದನು. ಇನ್ನೊಂದು ಕಡೆ ಕೀಟ್ಸ್ ಹೀಗೆ ಬರೆಯುತ್ತಾನೆ : "ಕವಿ ಭೌತಿಕ ಜಗತ್ತಿನಲ್ಲಿ ಅತ್ಯಂತ ಅಕಾವ್ಯಜೀವಿ. ಯಾಕೆಂದರೆ ಆತನಿಗೆ ವಿಭಿನ್ನ ವ್ಯಕ್ತಿತ್ವ ಇರುವುದಿಲ್ಲ. ಕವಿಗೆ ತನ್ನದೆ ಆದ ವ್ಯಕ್ತಿತ್ವ ಇಲ್ಲ ಎಂದು ಕೀಟ್ಸ್ ಸ್ಪಷ್ಟವಾಗಿ ನಂಬಿದ್ದನು. ಇದನ್ನು ಅವನು ತನ್ನ 'Negative capability' (ಸುಶಕ್ತ ಸಂವೇದನಾಶೀಲತೆ) ಸಿದ್ಧಾಂತದಲ್ಲಿ ಬಹಳ ಸ್ಪಷ್ಟವಾಗಿ ವಿವರಿಸಿದ್ದಾನೆ :

“ಅದಕ್ಕೆ ಸ್ವಂತಿಕೆ ಇಲ್ಲ– ತಾನು ತಾನಾಗಿದ್ದುದು ಅಲ್ಲ. ಅದಕ್ಕೆ ವಿಭಿನ್ನ ಅಸ್ತಿತ್ವ ಇಲ್ಲ– ಅದಕ್ಕೆ ಬೆಳಕೂ ಅಷ್ಟೆ ಕತ್ತಲೂ ಅಷ್ಟೆ. ಅದು ಆನಂದಾತಿರೇಕದಲ್ಲಿ (ಅದು ಒಳ್ಳೆಯದಿರಲಿ ಕೆಟ್ಟದ್ದಿರಲಿ) ಲೋಲಾಡುವಂಥದು. ಅದು ಸಮಾನೋಲ್ಲಾಸದಿಂದ ಖಳನಾಯಕನನ್ನು ಕಲ್ಪಿಸಬಹುದು. ಹಾಗೆಯೇ ಸಾಧ್ವಿಯನ್ನು ಕಲ್ಪಿಸಬಹುದು. ತತ್ವಜ್ಞಾನಿಗೆ ಆಘಾತ ನೀಡಬಹುದಾದದ್ದು ಗೋಸುಂಬೆ ಜಾತಿಯ ಕವಿಗೆ ಪೂರ್ಣಪ್ರಮಾಣದ ಉಲ್ಲಾಸವೇ ಸರಿ.” ಟಿ. ಎಸ್. ಎಲಿಯಟ್ ತನ್ನ ‘ವ್ಯಕ್ತಿತ್ವನಿಃಶೇಷ ಸಿದ್ಧಾಂತ’ವನ್ನು ಕೀಟ್ಸ್‌ನ Negative capability ಯ ಆಧಾರದ ಮೇಲೆ ರೂಪಿಸಿದ್ದಾನೆ ಎಂದು ತೋರುತ್ತದೆ. ಕೀಟ್ಸ್ ಇನ್ನೊಂದೆಡೆ ಕಾವ್ಯಸೃಷ್ಟಿಯ ಕುರಿತು ಹೀಗೆ ಬರೆದಿದ್ದಾನೆ : “ವೃಕ್ಷಕ್ಕೆ ಎಲೆಗಳು ಎಷ್ಟು ಸಹಜವಾಗಿ ಬರುತ್ತವೆಯೋ ಅಷ್ಟು ಸಹಜವಾಗಿ ಕಾವ್ಯ ಬರದಿದ್ದಲ್ಲಿ ಅದು ಬರುವುದೇ ಬೇಡ” ಎಂದು. ಕೀಟ್ಸ್ ಎಲ್ಲ ವಸ್ತುವಿನಲ್ಲೂ ಸೌಂದರ್ಯತತ್ತ್ವವನ್ನು ಪ್ರೀತಿಸಿದ್ದಾಗಿ, “ಪ್ರತಿಯೊಂದು ವಸ್ತುವಿನಲ್ಲೂ ಸೌಂದರ್ಯತತ್ವವನ್ನು ನಾನು ಪ್ರೀತಿಸಿದ್ದಿದೆ” ಎಂದು ಹೇಳಿದ್ದಾನೆ.

ಕೀಟ್ಸ್‌ನ ಕಾವ್ಯ ಐಂದ್ರಿಯಕವಾದುದು. ಆದರೆ ಅವನ ಸೌಂದರ್ಯತತ್ತ್ವಕ್ಕೆ ಬೌದ್ಧಿಕತೆಯ ಆಯಾಮವೂ ಇದೆ. ಅವನು ಗ್ರೀಕ್,ಪೇಗನ್ ಮತ್ತು ಪುರಾತನ ಕಲೆಯ ಪರಿಚಯ ಮಾಡಿಕೊಂಡಿದ್ದ. ಗ್ರೀಕ್ ಸಂಸ್ಕೃತಿ ಕೀಟ್ಸ್‌ನ ಪ್ರತಿಭೆಯ ಒಂದು ಭಾಗವಾಗಿತ್ತು. ಸ್ಪೆನ್ಸರ್, ಚಾಪ್‌ಮನ್, ಫ್ಲೆಚರ್ ಮತ್ತು ಮಿಲ್ಟನ್‌ರನ್ನು ಕೀಟ್ಸ್ ಆಳವಾಗಿ ಅಧ್ಯಯನ ಮಾಡಿದ್ದ. ಶೇಕ್ಸ್‌ಪಿಯರ್‌ನನ್ನು ಅವನು ಬಹಳ ಇಷ್ಟಪಟ್ಟಿದ್ದ. ತನ್ನ ಸಮಕಾಲೀನರಲ್ಲಿ ಕೀಟ್ಸ್ ವರ್ಡ್ಸ್‌ವರ್ತ್‌ನನ್ನು ವಿಶೇಷವಾಗಿ ಕೊಂಡಾಡಿದನು. ಅವನ ಮೇಲೆ ಲೀ ಹಂಟ್‌ನ ಪ್ರಭಾವ ಕೂಡ ಸಾಕಷ್ಟಾಗಿತ್ತು.

ಕೀಟ್ಸನ ಕಾವ್ಯದ ಬಗ್ಗೆ ಶ್ರೀ ಅರವಿಂದರು ಬರೆಯುವಾಗ ಒಂದು ವಾಕ್ಯದ ಅವತರಣಿಕೆ ಇದೆ. “ಕೀಟ್ಸನ ಕಾವ್ಯದಲ್ಲಿ ಐಂದ್ರಿಯಕ ಸೌಂದರ್ಯ, ಕಾಲ್ಪನಿಕ ಸೌಂದರ್ಯ, ಬೌದ್ಧಿಕ ಸೌಂದರ್ಯ ಮತ್ತು ಆದರ್ಶ ಸೌಂದರ್ಯ ಎಂಬ ನಾಲ್ಕು ಮುಖದ ದರ್ಶನವಿದೆ. ಈ ವಾಕ್ಯದ ಪರಿಣಾಮವಾಗಿ ನನ್ನ ಜೀವನಕ್ಕೆ ಚತುರ್ಮುಖತೆಯನ್ನು ಕಂಡುಕೊಂಡೆ.”[೧೩] ಈ ಕಲ್ಪನೆ ಬೇಂದ್ರೆಯವರನ್ನು ಬಲವಾಗಿ ಪ್ರಭಾವಿಸಿತ್ತು. ಈ ಚತುರ್ಮುಖ ಸೌಂದರ್ಯವನ್ನು ಶ್ರುತಿಗೊಳಿಸಲು ಬೇಂದ್ರೆ ಪ್ರಯತ್ನಪಟ್ಟರು. ಅರವಿಂದರ ಚತುರ್ಮುಖ ಸೌಂದರ್ಯ ಕಲ್ಪನೆ ಮತ್ತು ಕೀರ್ತಿನಾಥ ಕುರ್ತಕೋಟಿಯವರ ಕಾಮಪ್ರಕೃತಿ ಕಲ್ಪನೆಯ ಚೌಕಟ್ಟಿನಲ್ಲಿಟ್ಟು ಕೀಟ್ಸ್ ಮತ್ತು ಬೇಂದ್ರೆಯವರ ಕೆಲವು ಕವನಗಳನ್ನು ಅಭ್ಯಾಸ ಮಾಡುವುದು ಸಮಂಜಸವಾದೀತು.

ಹೊಂಗದಲು ಹೊಯ್ದಾಡಿ / ಮೊಲು ನೆಲ್ಲು ತಲೆದೂಗಿ / ಅದರಲ್ಲಿ ಬಾ ಸುಮ್ಮನೀಸಾಡಿ /
ತೆನೆ ಹಾಲು ದಕ್ಕಲಿ / ಕಕ್ಕಿಸಬೇಡದನು / ನಿನ್ನ ನಂಜಿನ ಸೆರಗ ಬೀಸಾಡಿ

ಬೇಂದ್ರೆಯವರ ‘ಚಳಿಯಾಕೆ’ ಕವನದ ಒಂದು ಪದ್ಯ ಇದು. ಈ ಕವನದಲ್ಲಿ ಕವಿ ಚಳಿಯನ್ನು ಒಂದು ಒಯ್ಯಾರದ ಹೆಣ್ಣಾಗಿ ಚಿತ್ರಿಸಿದ್ದಾನೆ. ಸೀಗೆ ಹುಣ್ಣಿವೆಯ ಮುಂಚೆ ಬರುವ ಸೋಗಿನ ಚಂದ್ರ(painted moon)ನಂತೆ ಚಳಿಯಾಕೆ ಬರುತ್ತಾಳೆ ಎಂದು ಕವಿ ಹೇಳುತ್ತಾನೆ. ಈಕೆ ಹೊನ್ನ ಮತ್ತು ಸೇವಂತಿಗೆಯ ಹೂಗಳನ್ನು ಮುಡಿದು, ಜಡೆಯಲ್ಲಿ ಬಂಗಾರ ಹಾಕಿಕೊಂಡು, ಬೆಳ್ಳಿ ಸೇವಂತಿಗೆಯ ಬಳಿಯನ್ನು ತೊಟ್ಟು ಬಂದಿದ್ದಾಳೆಂದು ಕವಿ ಹೇಳುತ್ತಾನೆ. ಇಲ್ಲಿ ಗದ್ದೆಯಲ್ಲಿ ಹೊನ್ನಿನ ಕದಲು ಹೊಯ್ದಾಡುವಂತೆ ನೆಲ್ಲು ಹೊಯ್ದಾಡುತ್ತದೆ

ಎಂದು ಹೇಳುವ ಕವಿ, ಆ ಚಳಿಯಾಕೆಗೆ ಅಲ್ಲಿ ಸುಮ್ಮನೆ ಈಜಾಡಿ ಬರಲು ಹೇಳುತ್ತ, ತನ್ನ ನಂಜಿನ ಸೆರಗು ಬೀಸಿ ನೆಲ್ಲು ತೆನೆಹಾಲು ಕಕ್ಕುವಂತೆ ಮಾಡಬೇಡ ಎಂದು ಆಕೆಗೆ ಕೇಳಿಕೊಳ್ಳುತ್ತಾನೆ. ನೆಲ್ಲಿಗೆ ತೆನೆಹಾಲು ದಕ್ಕಲಿ ಎಂದು ಕವಿ ಬಯಸುತ್ತಾನೆ. ನೆಲ್ಲಿನ ತೆನೆಯ ಹಾಲಿನ ಬಗೆಗಿರುವ ಕವಿಯ ಕನಿಕರ, ಸಹಾನುಭೂತಿ, ಪ್ರೀತಿ ಅನನ್ಯವಾದುದು. ಈ ಪ್ರೀತಿ ಟಾಮಸ್ ಹಾರ್ಡಿಯ ಅಥವಾ ಕಾಳಿದಾಸನ ಪ್ರೀತಿಗೆ ಸಮಾನವಾದುದು. ಕೀಟ್ಸ್‌ನ To Autumn ಕವನವನ್ನು ನಾವು ಬೇಂದ್ರೆಯವರ 'ಚಳಿಯಾಕೆ'ಗೆ ಹೋಲಿಸಬಹುದು.

Season of mists and mellow fruitfulness !
Close bosom friend of the maturing sun;
Conspiring with him how to load and bless
With fruit the vines that round the thatch-eves run
To blend with apples the moss'd cottage-trees,
And fill all fruit with ripeness to the core,
To swell the gourd and plump the hazel shells
With a sweet kernel; to set budding more,
And still more, later flowers for the bees,
Until they think warm days will never cease
For summer has o'er brimm'd their clammy cells

'ಕೀಟ್ಸ್‌ನ To Autumn ಕವನದಲ್ಲಿಯ ಒಂದು ಭಾಗ ಇದಾಗಿದ್ದು, ಇಲ್ಲಿ ಕವಿ ಶರತ್ಕಾಲದ ವರ್ಣನೆಯನ್ನು ಮಾಡುತ್ತಾನೆ. 'ಚಳಿಯಾಕೆ'ಯಲ್ಲಿ ಹೇಗೆ ಬೇಂದ್ರೆ ಚಳಿಗೆ ಮನುಷ್ಯನ ವ್ಯಕ್ತಿತ್ವ ತಂದುಕೊಟ್ಟಿದ್ದಾರೆಯೋ ಹಾಗೇ ಕೀಟ್ಸ್ ಶರತ್ಕಾಲಕ್ಕೆ ವ್ಯಕ್ತಿತ್ವ ತುಂಬಿದ್ದಾನೆ. ಶರತ್ಕಾಲವು ಸೂರ್ಯನ ಜೊತೆ ಸೇರಿ ಹಣ್ಣಿನಲ್ಲಿ ರಸ ತುಂಬಿ ಅದು ಮಾಗುವಂತೆ ಮಾಡುತ್ತದೆಂದು ಕೀಟ್ಸ್ ಹೇಳುತ್ತಾನೆ. "ಎಲ್ಲ ಹಣ್ಣುಗಳನ್ನು ತಿರುಳಿನಿಂದ ತುಂಬುವುದು ಶರತ್ಕಾಲ" ಎಂದು ಕವಿ ಬಣ್ಣಿಸುತ್ತಾನೆ. ಕುಂಬಳಕಾಯಿ ಅಥವಾ ಸೋರೆಕಾಯಿಯನ್ನು ದೊಡ್ಡದನ್ನಾಗಿ ಮಾಡುವುದು ಶರತ್ಕಾಲ. ಕುಂಬಳಕಾಯಿಯ ಹೊಟ್ಟೆಯನ್ನು ದೊಡ್ಡದು ಮಾಡುವ, ಹಣ್ಣುಗಳನ್ನು ತಿರುಳಿನಿಂದ ತುಂಬುವ ಶಕ್ತಿಗೆ ಕಾಮಪ್ರಕೃತಿ ಅಥವಾ ದೇವಕಾಮ ಎಂದು ಕರೆಯಬಹುದು.

ಕಾಮಪ್ರಕೃತಿ ಕೀಟ್ಸ್ ಮತ್ತು ಬೇಂದ್ರೆ ಕಾವ್ಯಗಳಲ್ಲಿ ಹೇಗೆ ಕೆಲಸ ಮಾಡುತ್ತದೆ ಎನ್ನುವುದಕ್ಕೆ ಮೇಲೆ ಉದ್ಧರಿಸಿದ ಕವನಗಳು ಉತ್ತಮ ಉದಾಹರಣೆಯಾಗಿವೆ.

ಇನ್ನೊಂದು ನೆಲೆಯಲ್ಲೂ ನಾವು ಬೇಂದ್ರೆ ಮತ್ತು ಕೀಟ್ಸ್‌ನ ಕಾವ್ಯಗಳಲ್ಲಿಯ ಸಮಾನ ಅಂಶವನ್ನು ಗುರುತಿಸಬಹುದು. ಇವರ ಕಾವ್ಯವನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿದರೆ ಹೇಗೆ ಕೀಟ್ಸ್ ಮತ್ತು ಬೇಂದ್ರೆ ಹಂತಹಂತವಾಗಿ ಬೆಳೆಯುತ್ತ ಹೋದರು ಎನ್ನುವುದು ತಿಳಿಯುತ್ತದೆ. ಆದರೆ ಇಲ್ಲಿ ಒಂದು ಮುಖ್ಯವಾದ ವ್ಯತ್ಯಾಸವನ್ನು ನಾವು ಕಾಣಬಹುದು. ಅದೇನೆಂದರೆ ಕೀಟ್ಸ್‌ನ ಪ್ರತಿಭೆಯ ಬೆಳವಣಿಗೆ ಆರೇಳು ವರ್ಷದ ಅವಧಿಯಲ್ಲಿ ಭರಭರನೆ ಆಗಿ ಒಮ್ಮೆಲೆ ಇಲ್ಲದಾಗಿ ಹೋಯಿತು. ಆದರೆ ಬೇಂದ್ರೆಯವರ ಬೆಳವಣಿಗೆ ನಿರಂತರವಾಗಿ ನಡೆದು ಅಂತಿಮ ಘಟ್ಟದ ವರೆಗೂ ತನ್ನ ಸಾತತ್ಯವನ್ನು ಉಳಿಸಿಕೊಂಡು ಬಂದಿತು. ಈ ಒನ್ನೆಲೆಯಲ್ಲಿ ಇವರ ಕಾವ್ಯದ ಅಧ್ಯಯನ ಮಾಡಬಹುದು.

ನನ್ನ ಪಾಡ ನನಗಿರಲಿ ಅದರ ಹಾಡನಷ್ಟೇ / ಹೇಳುವೆನು ರಸಿಕ ನಿನಗೆ / ಕಲ್ಲು ಸಕ್ಕರೆಯಂಥ ನಿನ್ನೆದೆಯು ಕರಗಿದರೆ / ಅದರ ಸವಿಯ ಹನಿಸು ನನಗೆ ಎಂದು ಬೇಂದ್ರೆಯವರು ತಮ್ಮ ಕಾವ್ಯರಸಿಕರಿಗೆ ತಮ್ಮ ಕಾವ್ಯದ ಆಶಯದ ಬಗ್ಗೆ ಸೂಚನೆ ಕೊಡುತ್ತಾರೆ. ಇದು ನಿಜವಾದ ಕವಿಯ ಲಕ್ಷಣವೂ ಆಗಿದೆ. A poet has no identity ಎಂದು ಹೇಳುವ ಕೀಟ್ಸ್‌ನಿಗೂ ಮೇಲಿನ ಬೇಂದ್ರೆಯವರ ಪದ್ಯಕ್ಕೂ ಸಂಬಂಧವಿದೆ. ಇಬ್ಬರ ಆಶಯವೂ ಒಂದೇ ಆಗಿದೆ. ಕಾವ್ಯದಲ್ಲಿ ಬರೀ ವೈಯಕ್ತಿಕ ಬದುಕಿನ ವಿವರಗಳನ್ನು ತುಂಬದೆ ಶುದ್ಧ ಕಾವ್ಯ ರಚಿಸುವ ತೀವ್ರ ಹಂಬಲ ಇಬ್ಬರಲ್ಲೂ ಕಾಣುತ್ತದೆ. "ಇದು ಬರೀ ಬೆಳಗಲ್ಲೋ ಅಣ್ಣಾ" ಎಂದು ತಾವು ಕಂಡ ಬೆಳಗಿನ ಬೆಳಕಿನ ಆಚೆಯ ಸತ್ಯವನ್ನು ಹೇಳುವ ಬೇಂದ್ರೆ, ಅಲೌಕಿಕ ಅನುಭಾವದ ಅನುಭವವನ್ನು "ಬೆಳಕಿಗಿಂತ ಬೆಳ್ಳಗೆ ಇತ್ತ / ಗಾಳಿಗಿಂತ ತೆಳ್ಳಗೆ ಇತ್ತ / ಜಡಿಯಿಂದಿಳಿದ ಗಂಗಿ ಹಾಂಗ / ಚೆಂಗನೆ ನೆಗದಿತ್ತ" ಎಂದು ಬಣ್ಣಿಸುತ್ತ ಸೃಷ್ಟಿ, ಸ್ಥಿತಿ, ಲಯಗಳನ್ನು ಉಷೆಯಲ್ಲಿ ಕಾಣುತ್ತಾರೆ.

ಸೃಷ್ಟಿ ನಿನ್ನ ಪಾದದೊಳಿದೆ / ಸ್ಥಿತಿ ನಿನ್ನೀ ಮೋದದೊಳಿದೆ
ಲಯವಿನ್ನೂ ನಾದದೊಳಿದೆ /ಬಿನದ ಶಕ್ತಿ ಬಾರೆ
ದಿನದ ಮುಕ್ತಿ ಬಾರೆ (ಉಷಾಸೂಕ್ತ, ಅರಳು ಮರಳು)

ಬೇಂದ್ರೆಯವರು ಬದುಕಿನಲ್ಲಿ ಹೊಸ ಮಾರ್ಗ ಹುಡುಕಿಕೊಂಡು ಹೋದವರು. ಹಾಗೆಯೇ ಕಾವ್ಯದಲ್ಲಿ ಕೂಡ ಹೊಸತನ ಕಂಡುಕೊಳ್ಳಲು ಹವಣಿಸಿದವರು. ಅವರ ಈ ತುಡಿತವನ್ನು ಈ ಕೆಳಗಿನ ಸಾಲುಗಳಲ್ಲಿ ಕಾಣಬಹುದು.

ಕಟ್ಟಿಟ್ಟ ಹಾದಿಯದ ಚಿಕ್ಕೆಗಳ ಜನ್ಮವೂ / ಬೇಡ ನನಗೆ ಅಮರ ಮಂದಿಯಲ್ಲಿ
ಇರುವೆಯಾಗುತ ನನ್ನ ಹಾದಿ ಹುಡುಕುವೆ ನಾನೆ / ಯಾವುದಾದರೂ ಸಂದಿಗೊಂದಿಯಲ್ಲಿ
(ನನ್ನ ಪಾಡಿನ ಪಲ್ಲವಿಗಳು)

ಈ ರೀತಿಯಾಗಿ ಹೊಸ ಹಾದಿ ಹಿಡಿದು ಸಾಗಿದ ಬೇಂದ್ರೆ ನಿಜಕ್ಕೂ ಅದ್ಭುತವಾದ ಸಾಧನೆ ಮಾಡಿದರು. ಬದುಕಿನ ಅರ್ಥವನ್ನು ಕಾವ್ಯದ ಮೂಲಕ ಕಂಡುಕೊಂಡರು. ಅದನ್ನು ತಮ್ಮದೊಂದು ಕವನದಲ್ಲಿ ಹೀಗೆ ಹೇಳುತ್ತಾರೆ.

ಸ್ಪರ್ಶದಿಂದೆಚ್ಚತ್ತ ದರ್ಶನದ ಬೆಳಕಿನಲಿ / ಕಂಡೆ. ನಾದದ ಹಾದಿ. ಮರಣಗಳ ತವರು. ನಿಧಿ
ನಕ್ಷತ್ರ ದೃಷ್ಟಿಗೋಚರವೆ ಕಣ್ ಪಿಳುಕಿನಲ್ಲಿ ?/ಆ ತಿರೋಭಾವಕ್ಕು ತಪ್ಪದು ಅನುಗ್ರಹದ ವಿಧಿ
ಶಬ್ದ ಶ್ರುತಿಯಾದಾಗ. ಮಾತು ಕೃತಿಯಾದೀತು (ಮಾತು ಕೃತಿ, ನಾಕು ತಂತಿ)

ಕೀಟ್ಸ್ ಕೂಡ ತನ್ನ ಕಡಿಮೆ ಅವಧಿಯ ಬದುಕಿನುದ್ದಕ್ಕೂ ಹೊಸವನ್ನು ಕಂಡುಕೊಳ್ಳಲು ಅವಿರತವಾಗಿ ಪ್ರಯತ್ನಿಸಿದ. Ode to a Nightingale ನಲ್ಲಿ ಸೌಂದರ್ಯದ ನಾಶದ ಬಗ್ಗೆ ಕವಿ ಹೇಳುತ್ತಾನೆ. "ಈ ಭುವಿಯಲ್ಲಿ ಚಿಂತನೆಯೆಂಬುದೇ ಹೆಣಭಾರ. ಸೀಸಿನಂತೆ ಜೋತುಬಿದ್ದ ಕಣ್ಣುರೆಪ್ಪೆಯ ನಿರಾಸೆ. ಇಲ್ಲಿ ಚೆಲುವು ತನ್ನ ಕಂಗಳ ಮಿಂಚನ್ನು ಉಳಿಸಿಕೊಳ್ಳಲಾಗದೋ, ಹಾಗೂ ಇಂದು ಚಿಗುರಿದ ಪ್ರೇಮ ನಾಳೆಯಿಂದಾಚೆಗೆ ಬಿಸುಸುಯ್ಯುವುದಿಲ್ಲ." ಕೀಟ್ಸ್ ಸುಂದರ ಸ್ತ್ರೀಯ ಕಣ್ಣಿನಲ್ಲಿಯ ಬೆಳಕು ನಶಿಸಿ ಹೋಗುವಂತೆ ಪ್ರೀತಿಯೂ ಕೂಡ ಅಲ್ಪಾವಧಿಯಲ್ಲಿಯೇ ನಶಿಸಿಹೋಗುತ್ತದೆ ಎಂದು ತಿಳಿಸುತ್ತಾನೆ. ಆದರೆ Endymion ಬರೆಯುವ ಹೊತ್ತಿಗೆ ಜಾನ್ ಕೀಟ್ಸ್ ಎಂದಿಗೂ ನಾಶವಾಗದ ಸತ್ಯವನ್ನು

ಕಂಡುಕೊಂಡಿದ್ದನು. "A thing of beauty is a joy forever" (ಸುಂದರ ವಸ್ತುವೊಂದು ಸದಾಕಾಲದ ಆನಂದದ ಬುಗ್ಗೆ) ಎಂಬ ಸಿದ್ಧಾಂತವನ್ನು ಕೀಟ್ಸ್ ಸ್ವತಃ ದರ್ಶಿಸಿದ, ನಮಗೆ ದರ್ಶಿಸಿದ. ನಿರಂತರವಾಗಿ ಸಂತೋಷ ಕೊಡುವುದೇ ಸೌಂದರ್ಯ ಎಂದು ಹೇಳುತ್ತಾನೆ ಆತ. ಆದರೆ ನಿರಂತರವಾಗಿ ಆನಂದ ಕೊಡುವ ವಸ್ತು ಪ್ರಕೃತಿಯಲ್ಲಾಗಲಿ, ಬದುಕಿನಲ್ಲಾಗಲಿ ಸಿಗುವುದಿಲ್ಲ. ಅದು ಕಲೆಯಲ್ಲಿ, ಕಾವ್ಯದಲ್ಲಿ ಸಿಗುತ್ತದೆಂಬ ದೃಢ ನಿರ್ಧಾರಕ್ಕೆ ಕೀಟ್ಸ್ ಬರುತ್ತಾನೆ. ಇಂದ್ರಿಯಗ್ರಾಹ್ಯವಾದ ಜಗತ್ತಿಗಿಂತ ಮಿಗಿಲಾದ ಸತ್ಯವನ್ನು ಅರಸಿಹೋಗುತ್ತಾನೆ. ಒಂದು ಕ್ಷಣ ಇಂದ್ರಿಯಗಳನ್ನು ತಣಿಸುವ ವಸ್ತುಗಳಾಚೆ ತನ್ನ ದೃಷ್ಟಿ ಹರಿಸುತ್ತಾನೆ. ಈ ಹುಡುಕಾಟವನ್ನು, ಉತ್ಕಟ ಅನ್ವೇಷಣೆಯನ್ನು ನಾವು ಕೀಟ್ಸ್‌ನ ಈ ಕೆಳಗಿನ ಸಾಲುಗಳಲ್ಲಿ ಕಾಣಬಹುದು :

"And can I ever bid these joys farewell ?
Yes, I must pass them for a nobler life
Where I may find the agonies, the strife
of human hearts" (Sleep and Poetry)

ಈ ಎಲ್ಲ ಆನಂದಗಳಿಗೆ ನಾನು / ವಿದಾಯ ಹೇಳಬಹುದೆಲ ಬಹುದು
ಅವುಗಳಿಂದಾಚೆಗಿನ ಲೋಕಕ್ಕೆ, / ಎಲ್ಲಿ ಮನುಜ ಹೃದಯದ ಮಿಡಿತ
ಅಳುಕು, ದುಗುಡ, ದುಃಖಗಳ ಧ್ವನಿಗೆ / ಸ್ಪಂದಿಸಬಹುದೋ ಆ ಉದಾತ್ತ
ಜೀವನಕ್ಕೆ ಕೈ ಚಾಚಬೇಕು.

ಕೀಟ್ಸ್ Nobler Life ಕಂಡುಕೊಳ್ಳಲು ಪ್ರಯತ್ನಪಟ್ಟ. ಆದರೆ ಅವನು Nobler Life ಆ ಉದಾತ್ತ ಜೀವನವನ್ನು ಸಂಪೂರ್ಣವಾಗಿ ತನ್ನ ಕೈವಶ ಮಾಡಿಕೊಳ್ಳುವ ಮುಂಚೆಯೆ ತಾನೇ ವಿಧಿವಶನಾದ. ಕೀಟ್ಸ್ ದೀರ್ಘ ಕಾಲ ಬದುಕಿದ್ದರೆ ಅವನು ತನ್ನ ಗುರಿ ತಲುಪುತ್ತಿದ್ದ ಎನ್ನಬಹುದು. ಆದರೆ ಬೇಂದ್ರೆಯವರ ಕಾವ್ಯದಲ್ಲಿ ಮಾತು ಕೃತಿಯಾಯಿತು.

ಬೇಂದ್ರೆ ಮತ್ತು ಜಾನ್ ಕೀಟ್ಸ್ ಅಪರೂಪದ ಕವಿಗಳು. ಜಾತಿ, ಮತ, ಪಂಥ, ಭಾಷೆ, ಧರ್ಮದ ಎಲ್ಲೆಯನ್ನು ಮೀರಿ ಇವರು ಕಾವ್ಯ ರಚಿಸಿದ್ದಾರೆ. ಇವರ ಜಾತಿ 'ಕವಿಯ ಜಾತಿ'; ಇವರ ಧರ್ಮ 'ಕಾವ್ಯ ಧರ್ಮ' ಮತ್ತು ಇವರ ಉದ್ಯೋಗ 'ಕಾವ್ಯೋದ್ಯೋಗ'. ಇಂಥ ಕವಿಗಳ ಅಧ್ಯಯನ ನಮ್ಮ ಭಾವ-ಬುದ್ಧಿ ಎರಡನ್ನೂ ಪುನೀತಗೊಳಿಸುತ್ತದೆ.

**ಆಕರ ಟಿಪ್ಪಣಿ :**

೧. ಬಾರೊ ಸಾಧನಕೇರಿಗೆ
೨. ಭುವನದ ಭಾಗ್ಯ, ೩. ಅದೇ, ೪. ಅದೇ, ೫. ಅದೇ, ೬. ಅದೇ, ೭. ಅದೇ
೮. ಯುಗಧರ್ಮ ಹಾಗೂ ಸಾಹಿತ್ಯದರ್ಶನ, ೯. ಕಾಮಕಸ್ತೂರಿ : ಮುನ್ನುಡಿ
೧೦. ಕೆ. ಎಸ್. ನಾರಾಯಣಾಚಾರ್ಯ. ಬೇಂದ್ರೆ ಕಾವ್ಯದಲ್ಲಿ ಆರ್ಷದೃಷ್ಟಿ. ೧೧. ಅದೇ, ೧೨. ಅದೇ
೧೩. ಬೇಂದ್ರೆ, ಅಂಬಿಕಾತನಯದತ್ತರ ಸಮಗ್ರ ಕಾವ್ಯ ಸಿದ್ಧಾಂತ, ಸಂಪುಟ ೬

ಡಾ. ಬಸವರಾಜ ಪಿ. ಡೋಣೂರ, ಹಿರಿಯ ಉಪನ್ಯಾಸಕ, ಇಂಗ್ಲಿಷ್ ಅಧ್ಯಯನ ವಿಭಾಗ
ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ - ೫೮೬ ೧೦೧

# ಮಹಾಭಾರತದ ದ್ರೌಪದೀ ವಸ್ತ್ರಾಪಹರಣ ಪ್ರಸಂಗ

ಎಸ್. ಎಸ್. ಹಿರೇಮಠ

ತಮ್ಮ ಸಂಕೇತ ಮತ್ತು ಪ್ರತಿಮೆಗಳ ಮೂಲಕ ರಾಮಾಯಣ ಮಹಾಭಾರತಗಳು ಇಂದಿನ ವರೆಗೂ ಭಾರತೀಯನ ನೈತಿಕ ಮತ್ತು ಸಾಮಾಜಿಕ ಪ್ರಜ್ಞೆಗಳ ಬದುಕನ್ನು ಪ್ರಭಾವಿಸಿಕೊಂಡೇ ಬಂದಿವೆ. ಮಹಾಭಾರತ ಕ್ರಿ. ಶ. ಪೂರ್ವ ೫೦೦ ರ ಸುಮಾರು ರಚನೆಗೊಂಡಿರಬಹುದೆಂದು ವಿದ್ವಾಂಸರ ಅಭಿಮತ. ಅದು ಒಬ್ಬನ ಅಥವಾ ಒಂದೇ ಕಾಲದ ಸೃಷ್ಟಿಯಲ್ಲ. ಅನೇಕ ಜನ ಬ್ರಾಹ್ಮಣ ವಿದ್ವಾಂಸರು (?) ಹಲವು ಶತಮಾನಗಳ ಕಾಲ ಅದನ್ನು ಕಟ್ಟುತ್ತಲೇ ಬಂದಿದ್ದಾರೆ. ಬಹು ದೊಡ್ಡ ಗ್ರಂಥವಾದ್ದರಿಂದ ಅದರ ವಿವೇಚನೆ ಸುಲಭವೇನಲ್ಲ. ಪಂಪ, ಕುಮಾರವ್ಯಾಸರಿಂದ ಅದು ಕನ್ನಡದಲ್ಲಿ ಮರುಹುಟ್ಟು ಪಡೆದ ರೀತಿ ಪ್ರತ್ಯೇಕವಾದ ಚರ್ಚೆ. ೧೦ ನೇ ಶತಮಾನದ ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ೭ ನೇ ಆಶ್ವಾಸದಲ್ಲಿ ಸಂಕ್ಷಿಪ್ತವಾಗಿ ಈ ಪ್ರಸಂಗ ಪ್ರಾಪ್ತವಾಗಿದೆ. ಆದರೆ ಮೂಲ ಕೃತಿಯ ಅನುಸರಣೆ ಪಂಪನಿಗಿಂತ ಹೆಚ್ಚಿದ್ದರೂ ಕ್ರಿ. ಶ. ೧೫-೧೬ ನೇ ಶತಮಾನದ ಒತ್ತಡವೇ ಅಲ್ಲಿಯೂ ಕೆಲಸ ಮಾಡಿದೆ.

ಸಭಾಪರ್ವದ ದ್ರೌಪದೀ ವಸ್ತ್ರಾಪಹರಣ ಪ್ರಸಂಗ ದಾಸ-ದಾಸಿಯರ ಸ್ಥಿತಿಯ ಕುರಿತು ಪರೋಕ್ಷವಾದ ಮಾಹಿತಿಗಳನ್ನು ನೀಡುವುದರಿಂದ ನಮ್ಮ ಕುತೂಹಲವನ್ನು ತೀವ್ರವಾಗಿ ಕೆರಳಿಸುತ್ತದೆ. ಅಲ್ಲಿ ಅನೇಕ 'ಧರ್ಮ'ಗಳ (ಸ್ತ್ರೀ ಧರ್ಮ, ದಾಸಿ ಧರ್ಮ, ಕ್ಷತ್ರಿಯ ಧರ್ಮ ಇತ್ಯಾದಿ) ಕುರಿತ ಚರ್ಚೆಯೂ ಇದೆ.

ಜೂಜು ರಾಜರ ಪ್ರತಿಷ್ಠೆಯ 'ಧರ್ಮ' ಕರ್ಮವೇ ಆಗಿದ್ದರಿಂದ, ಧರ್ಮರಾಯ ಜೂಜಾಡಿ ಸೋಲುತ್ತಾನೆ. ಏನೇನು ಸೋಲುತ್ತಾನೆಂದು ಮಹಾಭಾರತ ದೊಡ್ಡ ಪಟ್ಟಿಯನ್ನೇ ಕೊಡುತ್ತದೆ. ಕೊನೆಗೆ ತನ್ನನ್ನು ಸೋತ ನಂತರ ತನ್ನ ಧರ್ಮಪತ್ನಿ ದ್ರೌಪದಿಯನ್ನು ಪಣಕ್ಕಿಟ್ಟು ಸೋಲುತ್ತಾನೆ. ದ್ರೌಪದಿ ರಜಸ್ವಲೆಯಾಗಿ ಒಂದೇ ಬಟ್ಟೆಯನ್ನುಟ್ಟುಕೊಂಡಿದ್ದರೂ ಈಗ 'ದಾಸಿ'ಯಾದುದರಿಂದ ದುಶ್ಶಾಸನ ಆಕೆಯನ್ನು ಆಸ್ಥಾನಕ್ಕೆ ಎಳೆದು ತರುತ್ತಾನೆ. ಯಾರೂ ಅದನ್ನು ವಿರೋಧಿಸುವುದಿಲ್ಲ.

ದಾಸ-ದಾಸಿಯರನ್ನು ಒಡೆಯರು, ಪ್ರಭುಗಳು (ಒಟ್ಟಾರೆ ಶೋಷಕ ವರ್ಗ) ತಮ್ಮ ಮನಸಿಚ್ಛೆಯಂತೆ ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳಬಹುದಿತ್ತು. ಮಾನವೀಯತೆಯ, ಕರುಣೆಯ ಒಂದು ತೊಟ್ಟನ್ನೂ ಅವರ ಪರವಾಗಿ ಶೋಷಕ ವರ್ಗ ದಯೆಗೆಯ್ಯುವಂತಿರಲಿಲ್ಲ. ಇದು ಬಹಳ 'ಸೂಕ್ಷ್ಮ ವಿಷಯ' ಎಂದು ಭೀಷ್ಮ ಹೇಳುವುದು ಇವಕ್ಕಾಗಿ. ಎಷ್ಟೆಲ್ಲ ಮೊರೆಯಿಟ್ಟರೂ ದ್ರೌಪದಿಯನ್ನು ಯಾರೂ ಕಾಪಾಡುವುದಿಲ್ಲ. ಇದಕ್ಕೆ ಕಾರಣ ಆಕೆಗೂ ಗೊತ್ತಿದೆ. ದಾಸಿಯಾದ ನಂತರ ಆಕೆಯನ್ನು ಎಷ್ಟು ಹಿಂಸಿಸಿದರೂ, ಅಪಮಾನ ಮಾಡಿದರೂ, ಕೊನೆಗೆ ಕೊಂದರೂ ಅದು ಅಪರಾಧವಾಗುವಂತಿರಲಿಲ್ಲ.

ಧರ್ಮರಾಯ ತನ್ನಿಡಿಯನ್ನು ಸೋತುದರಿಂದ ದುರ್ಯೋಧನನ ಗುಂಪಿಗೆ ತುಂಬ ಖುಷಿ. ಪಾಂಡವರನ್ನು ಅಪಮಾನ ಮಾಡಿ ತಮಾಷೆ ನೋಡಿ ಸುಖ ಪಡುತ್ತಾರೆ ಅವರು.

ಅದಕ್ಕೆ ದ್ರೌಪದಿ ಒಂದು ಆಟದ ಗೊಂಬೆಯಾಗುತ್ತಾಳೆ. ಒಂದು ದುರ್ಬಲವಾದ ತರ್ಕದ ಎಳೆಯನ್ನು ಹಿಡಿದು ವಿದುರ ಮತ್ತು ದ್ರೌಪದಿ ಈ ಕಂಟಕದಿಂದ ಪಾರಾಗಲು ಯತ್ನಿಸುತ್ತಾರೆ. ಅದು– ಧರ್ಮರಾಯ ತನ್ನನ್ನು ಮೊದಲು ಪಣವಿಟ್ಟು ಸೋತ ನಂತರವಷ್ಟೇ, ಶಕುನಿ ನೆನಪಿಸಿದ್ದರಿಂದ ದ್ರೌಪದಿಯನ್ನು ಪಣಕ್ಕಿಡುತ್ತಾನಲ್ಲ ಇದು ದ್ರೌಪದಿಯನ್ನು 'ದಾಸಿ' ಮಾಡಲಾರದು ಎಂದು. ತಾನು ಸ್ವತಃ ದಾಸನಾದ ನಂತರ ತನ್ನ ಹೆಂಡತಿಯ ಮೇಲಿನ ಹಕ್ಕನ್ನು ಆತ ಕಳೆದುಕೊಳ್ಳುತ್ತಾನೆ; ಆಕೆಯನ್ನು ಪಣಕ್ಕೊಡ್ಡುವ ಹಕ್ಕು ಅವನಿಗೆ ಉಳಿಯುವುದಿಲ್ಲ ಎಂದು ವಿದುರ, ದ್ರೌಪದಿಯರ ತರ್ಕ.

ಈ ಇಡೀ ಪ್ರಸಂಗ ಮಹಾಭಾರತದ ಕಾಲದ ದಾಸ-ದಾಸಿಯರ (ಗುಲಾಮ) ನ್ಯಾಯ-ಅನ್ಯಾಯ, ಹಕ್ಕು-ಬಾಧ್ಯತೆಗಳ ಕುರಿತ ಅದ್ಭುತವಾದ ಚರ್ಚೆಯಾಗಿ ಮಾರ್ಪಡುತ್ತದೆ. ದ್ರೌಪದಿ ಬಲಿಪಶುವಾದರೂ ಚರ್ಚೆಯ ಪ್ರಧಾನ ಪಾತ್ರಧಾರಿಯಾಗುತ್ತಾಳೆ. ತುಂಬ ಸಹನೆಯಿಂದಲೇ ಆಕೆ ತನ್ನ ಗಂಡಂದಿರ 'ಧರ್ಮ'ದ ಸಾರಾಸಾರವನ್ನು ಆಲೋಚಿಸಲು ಯತ್ನಿಸುತ್ತಾಳೆ. ಭೀಷ್ಮ, ದ್ರೋಣ ಮೊದಲಾದ ಘಟಾನುಘಟಿಗಳಿಗೂ ಈ ಪ್ರಸಂಗ ನುಂಗಲಾರದ ತುತ್ತು. ಕೊನೆಯ ವರೆಗೂ ಯಾರೂ ಬಾಯಿ ಬಿಡಲಾರದ ಸಂಕಟ. ಧರ್ಮದ ಪ್ರತಿಮೂರ್ತಿ ಎಂದು ಹೇಳಲಾಗುವ ಧರ್ಮರಾಜನೂ ಕೂಡ ಕಡು ಮೌನಿ. ಕೊನೆಗೆ ಕರ್ಣ, ವಿಕರ್ಣ, ಧೃತರಾಷ್ಟ್ರಾದಿಗಳೇ ನಾನಾ ಬಗೆಯ ಪರಿಹಾರ ಮಾರ್ಗಗಳನ್ನೂ ಸೂಚಿಸುತ್ತಾರೆ.

ದೊರೆಗಳು ದಾಸರಾಗುವ ಈ ಪ್ರಸಂಗ ಒಟ್ಟಾರೆ ಆ ಕಾಲದ ವ್ಯವಸ್ಥೆಯಲ್ಲಿ ಶೋಷಿತರ ಬಗೆಗಿನ 'ಧರ್ಮ' ಅಥವಾ 'ನೀತಿ'ಯ ಕುರಿತು ಶೋಷಕರ ಅಪರೂಪದ ವ್ಯಾಖ್ಯಾನವಾಗುತ್ತದೆ. ಅವರ ದೃಷ್ಟಿಕೋನಕ್ಕೆ ಹಿಡಿದ ಕನ್ನಡಿಯಾಗುತ್ತದೆ. ಕನ್ನಡ ಸಾಹಿತ್ಯ ಕೃತಿಗಳಲ್ಲೂ ಇಂಥದೇ ಅದ್ಭುತ ಪ್ರಸಂಗಗಳು ಹರಿಹರನ 'ನಂಬಿಯಣ್ಣನ ರಗಳೆ'ಯಲ್ಲಿ ಮತ್ತು ಅವನ ಅಳಿಯ ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿವೆ. ಒಡೆಯನಾದವ ತನ್ನ ದಾಸನಿಗೆ (ಗುಲಾಮ) ಆಕಳನ್ನು ಕೊಲ್ಲು, ಬ್ರಾಹ್ಮಣನನ್ನು ಇರಿ, ಹೆಂಡತಿ ಮಕ್ಕಳನ್ನು ಹೊಡೆ, ತಂದೆ ತಾಯಿಗಳನ್ನು ಕೊಲ್ಲು, ಹಾವು ಹಿಡಿ, ಬೆಂಕಿಗೆ ಬೀಳು ಮುಂತಾಗಿ ಹೇಳಿದರೂ ಅವನ್ನೆಲ್ಲ ಮಾಡಬೇಕಾಗುತ್ತದೆಂದು ಹರಿಶ್ಚಂದ್ರ ವೀರಬಾಹುಕನಿಗೆ ಹೇಳುತ್ತಾನೆ. ಇಲ್ಲಿ ಸ್ವಲ್ಪ ಮಟ್ಟಿನ ಅತಿಶಯೋಕ್ತಿ ಇದೆ ಎಂದುಕೊಂಡರೂ ದಾಸರು, ಒಡೆಯರಿಗಾಗಿ ಪಂಚಮಹಾಪಾತಕಗಳನ್ನು ಮಾಡಲಿಕ್ಕೂ ಸಿದ್ಧರಿರಬೇಕಿತ್ತು.

ಮಹಾಭಾರತದ ಈ ಪ್ರಸಂಗವನ್ನು ಇಲ್ಲಿ ವಿವರವಾಗಿ ಗಮನಿಸಬೇಕು–

ಸಭಾಪರ್ವದಲ್ಲಿ ದ್ಯೂತಪರ್ವ ಪ್ರಾರಂಭವಾಗುವುದು ರಾಜಸೂಯ ಯಾಗ ಮಾಡಿ ಸಾರ್ವಭೌಮನಾದ ಧರ್ಮರಾಯನ ಐಶ್ವರ್ಯ, ಪ್ರಭಾವಗಳನ್ನು ಕಂಡು ಮತ್ತು ಮಯನು ನಿರ್ಮಿಸಿದ ಅರಮನೆಯಲ್ಲಿ ಕೊಳವೆಂದು ತಿಳಿಯದೇ ಬಿದ್ದು, ಬಾಗಿಲೆಂದು ಭ್ರಮಿಸಿ ಗೋಡೆಗೆ ತಲೆ ಚಚ್ಚಿಸಿಕೊಂಡು ಪಾಂಡವರಿಂದ ಅಪಹಾಸ್ಯಕ್ಕೀಡಾದ ದುರ್ಯೋಧನ ಕರುಬುವುದರಿಂದ. ಆತ ಒಂದು ಹಂತದಲ್ಲಿ ಆತ್ಮಹತ್ಯೆಗೂ ಎಳಸುತ್ತಾನೆ. ಶಕುನಿ ಅವನನ್ನು ಸಮಾಧಾನ ಮಾಡಿ ಜೂಜಿನ ಯೋಜನೆ ಹಾಕುತ್ತಾನೆ. ಜೂಜಾಟದಲ್ಲಿ ಧರ್ಮರಾಜನಿಗೆ ವಿಪರೀತ ಆಸೆ. ಆದರೆ

ನೈಪುಣ್ಯವಿಲ್ಲ. ಪ್ರತಿಯಾಗಿ ಶಕುನಿ ಅದರಲ್ಲಿ ಮಹಾನಿಪುಣ. ಧೃತರಾಷ್ಟ್ರನನ್ನು ಒಪ್ಪಿಸಿ ಅವರು ಪಾಂಡವರನ್ನು ಕರೆಸುತ್ತಾರೆ.

ದುರ್ಯೋಧನ ಧರ್ಮಜನ ರಾಜಸೂಯದ ವರ್ಣನೆ ಮಾಡುವಾಗ ಹೇಳುತ್ತಾನೆ– ೮೮ ಸಾವಿರ ಸ್ನಾತಕರಿಗೆ ಧರ್ಮಜ ಆಶ್ರಯವಿತ್ತಿದ್ದಾನೆ. ಒಬ್ಬೊಬ್ಬರಿಗೆ ೩೦ ಮಂದಿ ದಾಸಿಯರಿರುತ್ತಾರೆ. ಸಾವಿರಾರು ಬ್ರಾಹ್ಮಣರು ಬಂಗಾರದ ಪರಾತಗಳಲ್ಲಿ ಮೃಷ್ಟಾನ್ನ ಭೋಜನ ಮಾಡುತ್ತಾರೆ. ಒಂದು ಲಕ್ಷ ಜನ ಬ್ರಾಹ್ಮಣರು ಊಟ ಮಾಡಿದ ಕೂಡಲೇ ಅದರ ಸಂಕೇತವಾಗಿ ಶಂಖ ಊದುವುದು ನಿಯಮ. ಈ ಶಂಖನಾದ ಕ್ಷಣಕ್ಷಣಕ್ಕೂ ಕೇಳಿಬರುತ್ತಿತ್ತು. (ಇಲ್ಲಿರುವ ಎಲ್ಲ ಉದ್ಧರಣೆಗಳು ಬೆಂಗಳೂರಿನ 'ಭಾರತ ದರ್ಶನ ಪ್ರಕಾಶನ'ದವರ 'ಶ್ರೀಮನ್ಮಹಾಭಾರತ' ಸಂಪುಟಗಳಲ್ಲಿಯವು. ಸಂ. : ೩, ಪು. : ೧೬೮೨.)

ಸಮುದ್ರ ತೀರದ ಶೂದ್ರ ರಾಜರು, ಕಾರ್ಪಾಸಿಕ ನಿವಾಸಿಗಳಾದ ಸಾವಿರಾರು ದಾಸಿಯರನ್ನು ಧರ್ಮರಾಜನಿಗೆ ಕಾಣಿಕೆ ಒಪ್ಪಿಸುತ್ತಾರೆ (೧೬೯೩). ಬೇಡರು ತಮ್ಮ ಜನಾಂಗದ ೧೧,೦೦೦ ದಾಸಿಯರನ್ನು ಕರೆತಂದಿದ್ದರು (೧೬೯೭). ಯಜ್ಞಸೇನ ಯಾಗಕ್ಕೆ ಪರಿಚಾರಿಕೆಯರಾಗಿ ೧೪,೦೦೦ ದಾಸಿಯರನ್ನು ಅರ್ಪಿಸುತ್ತಾನೆ (೧೬೯೯). ದುರ್ಯೋಧನ ತನ್ನ ತಂದೆಗೆ ತುಂಬ ದೀರ್ಘವಾಗಿ ರಾಜಸೂಯದ ವರ್ಣನೆ ಮಾಡುತ್ತಾನೆ. ಅವನ ಐಶ್ವರ್ಯವನ್ನು ಜೂಜಿನಿಂದ ಲಪಟಾಯಿಸಲು ಯೋಚಿಸುತ್ತಾನೆ. ರಾಜಸೂಯವನ್ನು ಮಾಡುವುದರಿಂದ ಚಕ್ರವರ್ತಿಯಾಗಿ ಏಳ್ಗೆಯ ಶಿಖರ ಮುಟ್ಟಿದ ಧರ್ಮರಾಜ ಜೂಜಿನಲ್ಲಿ ಸೋತು ಪಾತಾಳ ಕಂಡು 'ದಾಸ'ನಾಗಿ ಪರಿವರ್ತಿತನಾಗುವುದನ್ನು 'ವಿಧಿ ಲಿಖಿತ'ವೆಂದೇ ಹೇಳುತ್ತದೆ ಮಹಾಭಾರತ. ದ್ರೌಪದಿಗೆ ಕೃಪೆ ತೋರಿ ಧೃತರಾಷ್ಟ್ರ ಸೋತುದನ್ನೆಲ್ಲ ಮರಳಿ ಕೊಟ್ಟು ಕಳಿಸುತ್ತಾನೆ. ಆದರೆ ಮಗನ ಆಶೆಯಂತೆ ಮತ್ತೆ ಕರೆಕಳುಹಿಸಿಕೊಂಡು ಅವರು ಸೋತು ೧೨ ವರ್ಷ ವನವಾಸ, ೧ ವರ್ಷ ಅಜ್ಞಾತವಾಸ ಮಾಡುವಂತೆ ಮಾಡುತ್ತಾನೆ.

ಮಹಾಭಾರತದ ಒಳ್ಳೆಯ ಗುಣವೆಂದರೆ ವಿಷಯಗಳನ್ನು ಮುಕ್ತವಾದ ಮನಸ್ಸಿನಿಂದ ನಿರೂಪಿಸುವುದು. ಬ್ರಾಹ್ಮಣರ ಪ್ರಾಬಲ್ಯದ, ಕ್ಷತ್ರಿಯರ ಕತೆ ಇದು ಎಂಬುದು ನಿರ್ವಿವಾದವಾಗಿದ್ದರೂ ಕೂಡ ಪರ-ವಿರೋಧ ಅಭಿಪ್ರಾಯಗಳಿಗೆ ಅವಕಾಶ ಕಲ್ಪಿಸುತ್ತದೆ.

ಜೂಜಿನ ವಿಚಾರ ಕೈಬಿಟ್ಟು ಸೋದರರ ಜತೆ ಸ್ನೇಹದಿಂದಿರು ಎಂದು ಹೇಳುವ ತಂದೆಗೆ ದುರ್ಯೋಧನ 'ನೀನು ಹೇಳುವುದು ಪ್ರಜೆಗಳು ಅನುಸರಿಸುವ ನೀತಿಯನ್ನು; ರಾಜನು ಸ್ವಾರ್ಥ ಸಾಧನೆಗೆ ಸಮಯ ಕಾದು ಶತ್ರುಗಳನ್ನು ನಿಗ್ರಹಿಸಿ ಅವರ ಐಶ್ವರ್ಯ ಅಪಹರಿಸಬೇಕು' ಎನ್ನುತ್ತಾನೆ (೧೭೧೯). ಇಲ್ಲಿ ಸಾಮಾನ್ಯರ ಧರ್ಮ, ರಾಜರ ಧರ್ಮಕ್ಕಿರುವ ಸ್ಪಷ್ಟ ವ್ಯತ್ಯಾಸವನ್ನು ಹೇಳಲಾಗಿದೆ. ಇದರಿಂದ ಪ್ರಭುತ್ವದ ನೀಚತನದ ದರ್ಶನವಾಗುತ್ತದೆ.

ರಾಜಸೂಯ ಯಾಗ ಮಾಡಿದರೆ ಭೂಮಿ, ಅಂತರಿಕ್ಷ, ದೇವಲೋಕಗಳಲ್ಲಿ ಮೂರು ವಿಧದ ಉತ್ಪಾತಗಳಾಗುತ್ತವೆಂದೂ, ಭೂಮಿಯ ಮೇಲೆ ರಾಜರು ಹೊಡೆದಾಡಿ ಸರ್ವನಾಶವಾಗುವುದೇ ಆಗಲಿರುವ ಉತ್ಪಾತವೆಂದೂ ಧರ್ಮಜನಿಗೆ ವ್ಯಾಸ ಹೇಳುವುದು ಕುತೂಹಲದ ಅಂಶ (೧೬೬೫). ಧರ್ಮರಾಜ ಪಗಡೆಯಾಟದಲ್ಲಿ ಸೋತ ವಸ್ತುಗಳಲ್ಲಿ ೬೩

ಕುಶಲ ವಿದ್ಯೆಗಳಲ್ಲಿ ಪರಿಣತರಾದ ಮತ್ತು ಬ್ರಾಹ್ಮಣರನ್ನೂ, ರಾಜರನ್ನೂ ಉಪಚರಿಸುವವರಾದ ೧ ಲಕ್ಷ ದಾಸಿಯರೂ ಸೇರಿದ್ದಾರೆ (೧೭೨೪). ಬ್ರಾಹ್ಮಣರಿಗೆ ವೃತ್ತಿ ಕೊಟ್ಟ ಸಂಪತ್ತನ್ನು ಹೊರತುಪಡಿಸಿ ರಾಜಧಾನಿ, ಪ್ರಾಂತ, ಪ್ರಜೆ, ಐಶ್ವರ್ಯ, ಸಾಮಂತ ರಾಜರು, ಸೋದರರು, ಸತಿ ಎಲ್ಲವನ್ನೂ ಪಣಕ್ಕಿಟ್ಟು ಸೋಲುತ್ತಾನೆ ಧರ್ಮಜ. ಕ್ಷತ್ರಿಯರು ತಮ್ಮಿಡೀ ರಾಜ್ಯಕ್ಕೆ ಒಡೆಯರಾದರೂ ಅಲ್ಲಿದ್ದ ಬ್ರಾಹ್ಮಣರಿಗೆ ಮಾತ್ರ ಒಡೆಯರಾಗುವಂತಿಲ್ಲ ಎಂಬ ತುಂಬ ಮುಖ್ಯವಾದ ಸಂಗತಿ ಇಲ್ಲಿದೆ. ಬ್ರಾಹ್ಮಣರು ಎಲ್ಲಿದ್ದರೂ ಸರ್ವತಂತ್ರ ಸ್ವತಂತ್ರರಿದ್ದರು. ಕ್ಷತ್ರಿಯರು ಹಿಡಿತ, ಹತೋಟಿಯನ್ನು ಮೀರಿದ್ದರು.

ಎಲ್ಲ ಸೋಲುಗಳಿಗಿಂತ ದ್ರೌಪದಿಯನ್ನು ಸೋತುದು ಈ ಇಡೀ ಪ್ರಸಂಗಕ್ಕೆ ಕಳಸವಿಟ್ಟಂತಾಗುತ್ತದೆ. ಜೂಜಿನ ಸೋಲು ಅರಸರನ್ನು ದಾಸರನ್ನಾಗಿ ಪರಿವರ್ತಿಸಬಹುದಿತ್ತು. ಆದರೆ ದ್ರೌಪದಿ ತಾನು ದುರ್ಯೋಧನನ ದಾಸಿಯಾದೆನೆಂಬುದನ್ನು ಕನಸಿನಲ್ಲಿಯೂ ಕೇಳಿರಲಿಲ್ಲ ಎನ್ನುತ್ತಾಳೆ.

ಧರ್ಮರಾಯ ತನ್ನ ಮಡದಿಗೆ ರಜಸ್ವಲೆಯಾಗಿದ್ದರೂ, ಅಧೋವಸ್ತ್ರವೊಂದನ್ನೇ ಧರಿಸಿದ್ದರೂ ಸಭೆಗೆ ಬಂದು ನಿಲ್ಲು ಎಂದು ಹೇಳಿ ಕಳಿಸುತ್ತಾನೆ. ದುಶ್ಯಾಸನ ಆಕೆಯನ್ನು ಮಾತಿನಿಂದ ಅಪಮಾನಿಸುವುದಲ್ಲದೇ ಹಿಡಿದೆಳೆದು, ಸೀರೆ ಸೆಳೆದು ಅನೇಕ ಬಗೆಯ ಹಿಂಸೆ ಕೊಡುತ್ತಾನೆ. ಆತ ಆಕೆಗೆ 'ನೀನು ನಮ್ಮ ದಾಸಿ. ದಾಸಿಯರು ಸವಸ್ತ್ರರಾಗಿಯೇ ಇರಬೇಕೆಂಬ ನಿಯಮವೇನೂ ಇಲ್ಲವಲ್ಲ' ಎನ್ನುತ್ತಾನೆ (೧೭೬೬). ಸೂಕ್ಷ್ಮವಾದ ಧರ್ಮದ ಕಟ್ಟಿಗೆ ಬಿದ್ದು ಎಲ್ಲರೂ ಅದನ್ನು ಪ್ರತಿಭಟಿಸದೇ ಸುಮ್ಮನೇ ಗಮನಿಸುತ್ತಿರುತ್ತಾರೆ. ಆಕೆ 'ಧರ್ಮಾತ್ಮನಾದ ಪತಿಯಲ್ಲಿ ದೋಷವಿಲ್ಲ' ಎಂದೇ ಭಾವಿಸುತ್ತಾಳೆ. ದುಶ್ಯಾಸನನ ಅಕಾರ್ಯವನ್ನು ಖಂಡಿಸದ ಎಲ್ಲರ ಧರ್ಮ, ಸದಾಚಾರ ಹಾಳಾಗಿದೆ ಎಂದು ತೆಗಳುತ್ತಾಳೆ. ಆದರೆ ಅದೆಲ್ಲ ಅರಣ್ಯರೋದನವೇ. ಏಕೆಂದರೆ ಆಕೆ ಈಗ ಪ್ರತಿನಿಧಿಸುತ್ತಿರುವುದು ದಾಸಿ ಧರ್ಮವನ್ನು. ಅದಕ್ಕೆ ಕ್ಷತ್ರಿಯ ಶೋಷಕ ವರ್ಗ ಸೊಪ್ಪು ಹಾಕುವಂತೆಯೇ ಇರಲಿಲ್ಲ.

ಭೀಷ್ಮ 'ಹೆಂಡತಿ ಗಂಡನಿಗೆ ಅಧೀನಳಾದ್ದರಿಂದ ಪಣವಾಗಿ ಹೆಂಡತಿಯನ್ನು ಇಡಬಹುದೆ'ಂದು 'ಧರ್ಮ' ತತ್ವ ಹೇಳುತ್ತಾನೆ. ಮತ್ತೆ ಇದು ಧರ್ಮವೋ, ಅಧರ್ಮವೋ ಹೇಳಲಾರೆ ಎಂದು ಅಡ್ಡಗೋಡೆಯ ಮೇಲೆ ದೀಪವಿಡುತ್ತಾನೆ (೧೭೭೦).

ಇಡೀ ದಾಸೀ ಸಮೂಹದ ಪ್ರತಿನಿಧಿಯಂತೆ ದ್ರೌಪದಿ ಸಭೆಯಲ್ಲಿ ತನ್ನಂಥ ಅಬಲೆಯರ ತಂದೆ, ಗಂಡ, ಸೋದರರು ಇಲ್ಲವೇ ಎಂದು ಗೋಗರೆದರೂ ಯಾರೂ ಆಕೆಗೆ ಸಹಾಯ ಮಾಡುವುದಿಲ್ಲ. ಶೋಷಕ ವರ್ಗದ ಸಭಾಸದರಾರೂ ದಾಸ-ದಾಸಿಯರ ಪರ ವಕಾಲತ್ತು ವಹಿಸಲು ಶಕ್ಯವಿರಲಿಲ್ಲ. ಜೂಜುಗಾರರು ತಮ್ಮ ಮನೆಗಳ ವೇಶ್ಯೆಯರನ್ನು ಕೂಡ ಪಣಕ್ಕಿಡುವುದಿಲ್ಲ ಎನ್ನುತ್ತಾಳೆ ದ್ರೌಪದಿ. ಭೀಮ ಧರ್ಮರಾಜನ ಕೆಲಸ ಅಕಾರ್ಯವೆಂದು ಅವನ ಕೈಗಳನ್ನು ಸುಡಲು ಯತ್ನಿಸುತ್ತಾನೆ. ಆಗ ಅವನನ್ನು ಅರ್ಜುನ ಸಮಾಧಾನ ಮಾಡುವುದು 'ಧರ್ಮ'ದ ಹೆಸರು ಹೇಳಿಯೇ (೧೭೭೫). ಧರ್ಮ ಪರಿಪಾಲನೆಗಾಗಿ ಅಣ್ಣ ಜೂಜಾಡಿದನೆಂದೇ ಅರ್ಜುನನ ತರ್ಕ.

ವಿಕರ್ಣನೆಂಬ ದುರ್ಯೋಧನನ ಒಬ್ಬ ಸೋದರ ಮಾತ್ರ 'ಧರ್ಮರಾಜ ತನ್ನನ್ನು ಸೋತ ನಂತರ ದ್ರೌಪದಿಯನ್ನು ಪಣವಾಗಿಟ್ಟದ್ದರಿಂದ ಆಕೆ ದಾಸಿ ಆಗಲಾರಳು' ಎಂದು ಹೇಳುವುದು ಮಾರ್ಮಿಕವಾಗಿದೆ (೧೭೭೮). ಕರ್ಣ ಅವನನ್ನು ಕುಲಕಂಟಕ ಎಂದು ಖಂಡಿಸುತ್ತಾನೆ. ಅವನಿಗೆ ಧರ್ಮದ ಸ್ವರೂಪ ತಿಳಿದಿಲ್ಲ ಎನ್ನುತ್ತಾನೆ. ಈ ಇಡೀ ಪ್ರಸಂಗದಲ್ಲಿ 'ಧರ್ಮ' ಎಂದರೇನೆಂಬ ಬಹು ಮುಖ್ಯವಾದ ಪ್ರಶ್ನೆ ಎದುರಾಗುತ್ತದೆ. ಅವರವರ ಕರ್ಮಾನುಸಾರ ಜಾತಿಯಾಧಾರದಲ್ಲಿ ಬದುಕು ನಡೆಸುವುದೇ 'ಧರ್ಮ'ವೆಂಬ ಅರ್ಥ ಓದುಗರಿಗೆ ವಿದಿತವಾಗುತ್ತದೆ. ಈಗ ನಾವು ಸಂಸ್ಕೃತಿ ಎಂದು ಕರೆಯುತ್ತಿರುವುದನ್ನೇ ಒಂದರ್ಥದಲ್ಲಿ ಮಹಾಭಾರತ ಧರ್ಮ ಎನ್ನುತ್ತಿದೆ. ಅಂದರೆ ಆಗ ಧರ್ಮಕ್ಕೆ ರಿಲಿಜನ್ ಎಂಬರ್ಥವಿರಲಿಲ್ಲವೇ?

ಕರ್ಣ, ದ್ರೌಪದಿಯನ್ನು ಸಭೆಗೆ ಕರೆತಂದು ಪೂರ್ಣ ವಿವಸ್ತ್ರಳನ್ನಾಗಿ ಮಾಡುವುದು ಅಶ್ಚರ್ಯವಲ್ಲ; ಅಧರ್ಮವಲ್ಲ ಎನ್ನುತ್ತಾನೆ. ದಾಸ, ದಾಸಿಯರ ಬಟ್ಟೆ ಕಿತ್ತುಹಾಕುವುದು, ಹೊಡೆಯುವುದು ಎಲ್ಲವೂ 'ಧರ್ಮ'ವಾಗಿದೆ ಎಂಬುದೇ ಕರ್ಣನ ಮಾತಿನ ಅಂತರಾರ್ಥ. ಕೊನೆಗೆ ದ್ರೌಪದಿ ಕೃಷ್ಣನನ್ನು ಬೇಡಿಕೊಂಡಾಗ ಆತ ಅದೃಶ್ಯನಾಗಿದ್ದು ದ್ರೌಪದಿಗೆ ಅನೇಕ ಸೀರೆಗಳನ್ನು ಹೊದಿಸುತ್ತಾನೆ. ವಿವಸ್ತ್ರಳಾಗದಂತೆ ಮಾಡುತ್ತಾನೆ. ದುಶ್ಯಾಸನನಿಗೆ ಸೀರೆಗಳನ್ನು ಸೆಳೆದು ಸೆಳೆದು ಸಾಕಾಗುತ್ತದೆ.

ಸ್ವಯಂವರದಲ್ಲಿ ಮಾತ್ರ ತಾನು ರಾಜಸಭೆಗೆ ಬಂದವಳು, ಅಲ್ಲಿಂದ ಯಾರ ಕಣ್ಣಿಗೂ ಬಿದ್ದಿಲ್ಲ; ಪಶುವಿಗಿಂತ ಕಡೆಯಾಗಿ ಭಂಗಿತಳಾಗುತ್ತಿದ್ದರೂ ಎಲ್ಲರೂ ಸುಮ್ಮನೇ ಕುಳಿತಿರುವಿರಿ, ರಾಜರ ಧರ್ಮ ಎಲ್ಲಿ ಹೋಯಿತು, ಸನಾತನ ಧರ್ಮ ಹಾಳಾಯಿತು ಎಂದು ಒರಲುತ್ತಾಳೆ. ತಾನು ಕ್ಷತ್ರಿಯಳಲ್ಲವೇ? ದಾಸಿಯೇ? ಹೇಳಿ ಎಂದು ಗೋಗರೆಯುತ್ತಾಳೆ. ಭೀಷ್ಮ ತನ್ನ ಕಾಲದ ಶೋಷಕ ವರ್ಗದ 'ಸತ್ಯ'ವನ್ನೇ ಹೀಗೆ ಹೇಳುತ್ತಾನೆ–

'ಪ್ರಪಂಚದಲ್ಲಿ ಬಲಿಷ್ಠನಾದವನು ಹೇಳುವುದೇ ನ್ಯಾಯವೆಂದು ಸರ್ವರಿಂದರೂ ಮಾನ್ಯ ಮಾಡಲ್ಪಟ್ಟಿದೆ. ದುರ್ಬಲನಾದವನು ಧರ್ಮಸೂಕ್ಷ್ಮವನ್ನರಿತು ನಿಜಾಂಶ ಹೇಳಿದರೂ ಇತರರು ಮಾನ್ಯ ಮಾಡುವುದಿಲ್ಲ. ಇದು ಇಂದಿನ ವ್ಯವಹಾರ' (೧೭೯೪). ಇದು ಶೋಷಕ ವರ್ಗದ ಧೋರಣೆಯ ನಗ್ನ ಚಿತ್ರ.

'ಧರ್ಮರಾಯ ತಮ್ಮ ಸ್ವಾಮಿಯಲ್ಲ, ಎಂದು ಉಳಿದ ನಾಲ್ವರು ಪಾಂಡವರು ಹೇಳಲಿ, ನಿನ್ನನ್ನು ಸ್ವತಂತ್ರಳನ್ನಾಗಿ ಮಾಡುವೆ, ದಾಸ್ಯ ವಿಮೋಚನೆ ಮಾಡುವೆ' ಎನ್ನುತ್ತಾನೆ ದುರ್ಯೋಧನ (೧೭೯೫). ಆದರೆ ಅವರು ಆ ರೀತಿ ಹೇಳುವುದಿಲ್ಲ. 'ಇಲ್ಲಿ ಸೇರಿರುವ ಎಲ್ಲರೂ ನಿನ್ನ ದುಃಖದ ಸಾಗರದಲ್ಲಿ ತೇಲುತ್ತಿರುವರು' ಮುಂತಾಗಿ ಮಾತಾಡಿ ತನ್ನ ಉದಾರತೆಯನ್ನು ಪ್ರಕಟಿಸುತ್ತಾನೆ ದುರ್ಯೋಧನ. ಕರ್ಣ 'ದಾಸ, ಪುತ್ರ, ಅಸ್ವತಂತ್ರ ಹೆಂಗಸು ಇವರು ಅಧನರು. ದಾಸನ ಪತ್ನಿ ಅವನ ಯಜಮಾನನ ಸೊತ್ತು. ನೀನು ದಾಸನ ಪತ್ನಿ. ನೂರು ಕೌರವರೇ ನಿನಗೆ ಒಡೆಯರು. ನಿನಗೆ ಬೇಕಾದ ಸ್ವಾಮಿಯನ್ನು ಆರಿಸಿಕೋ. ಜೂಜುಗಾರರನ್ನು ಮಾತ್ರ ಆರಿಸಿಕೊಳ್ಳಬೇಡ. ದಾಸಿಯರು ಬೇರೆ ಸ್ವಾಮಿಯನ್ನು ಪಡೆದರೆ ನಿಂದ್ಯರಾಗರು. ದಾಸರಾಗಿರುವ ನಿನ್ನ ಪತಿಗಳು ಸ್ವಾಮಿಗಳಾಗುವುದಿಲ್ಲ' ಎಂದು 'ದಾಸ ಧರ್ಮ'ವನ್ನು ಹೇಳುತ್ತಾನೆ. ಈ

ಚರ್ಚೆ ಬಗೆಹರಿಯುವುದೇ ಇಲ್ಲ. ಆಗ ಧೃತರಾಷ್ಟ್ರನ ಹೋಮ ಗೃಹದಲ್ಲಿ ನರಿ, ಕತ್ತೆ, ಪಕ್ಷಿ ಅಪಸ್ವರ ಮಾಡಿದ್ದರಿಂದ ಅದರ ಮುನ್ಸೂಚನೆಯನ್ನರಿತು ಹೆದರಿ ಧೃತರಾಷ್ಟ್ರ ವಿದುರನ ಸಲಹೆಯಂತೆ ಪಾಂಚಾಲಿಗೆ 'ನೀನು ಪತಿವ್ರತೆ, ಧರ್ಮನಿಷ್ಠಳು' ಎಂದೆಲ್ಲ ಹೊಗಳಿ ವರ ಕೇಳಲು ಕೇಳಿಕೊಳ್ಳುತ್ತಾನೆ. ಆಕೆ ಧರ್ಮರಾಜ ಮತ್ತುಳಿದವರು ದಾಸ್ಯದಿಂದ ಮುಕ್ತರಾಗಲಿ ಎಂದು ಕೇಳುತ್ತಾಳೆಯೇ ಹೊರತು ತನ್ನ ದಾಸ್ಯ ವಿಮೋಚನೆಗೆ ಬೇಡುವುದಿಲ್ಲ. ಕರ್ಣ ದ್ರೌಪದಿ ಅದ್ಭುತವಾದ ಕಾರ್ಯ ಮಾಡಿದಳೆಂದು ಹೊಗಳುತ್ತಾನೆ. ಧೃತರಾಷ್ಟ್ರ ಧರ್ಮರಾಜನಿಗೆ ಅವನೆಲ್ಲ ಸಂಪತ್ತನ್ನು ಮರಳಿ ಕೊಡಿಸಿ ಖಾಂಡವ ಪ್ರಸ್ಥಕ್ಕೆ ಕಳಿಸುತ್ತಾನೆ.

ಧೃತರಾಷ್ಟ್ರನ ಕೃಪೆಗೆ ಪಾತ್ರನಾಗುವ ಧರ್ಮರಾಜ ಇಂದ್ರಪ್ರಸ್ಥವನ್ನು ಮುಟ್ಟುವುದರೊಳಗಾಗಿ ಮತ್ತೆ ಅವನ ಆಜ್ಞೆಗೆ ಒಳಪಡುತ್ತಾನೆ. ಮಗನ ದುರಾಸೆಗೆ ಸೊಪ್ಪು ಹಾಕುವ ಧೃತರಾಷ್ಟ್ರ ಪಾಂಡವರನ್ನು ಮತ್ತೆ ಜೂಜಾಡಲು ಕರೆಸುತ್ತಾನೆ. ಈಗ ಧರ್ಮರಾಜ ಆತನ ಆಜ್ಞೆಯನ್ನು ಮೀರುವಂತಿಲ್ಲ. ೧೨ ವರ್ಷ ವನವಾಸ, ೧ ವರ್ಷ ಅಜ್ಞಾತವಾಸದ ಪಣ ಒಡ್ಡಲಾಗುತ್ತದೆ.

ಸೋತು ಜಟಾವಲ್ಕಲ ಧರಿಸಿ ಹೋಗುವ ಪಾಂಡವರನ್ನು ದುಶ್ಯಾಸನ ಜೇಡರಿಗೆ ಹೋಲಿಸುತ್ತಾನೆ (೧೮೨೯). ನಪುಂಸಕರು, ಬೊಂಬೆಗಳು, ಬತ್ತದ ಹೊಟ್ಟು ಎಂದೆಲ್ಲ ತೆಗಳುತ್ತಾನೆ. ದ್ರೌಪದಿಯ ದುರವಸ್ಥೆಯನ್ನು ನೋಡಿ ಧೃತರಾಷ್ಟ್ರನ ಅಂತಃಪುರ ದಾಸಿಯರು ಅಳುತ್ತಾರೆ. ಗಾಂಧಾರಿ ಮತ್ತು ಆಕೆಯ ಸೊಸೆಯರೂ ರೋದಿಸುತ್ತಾರೆ. ಬ್ರಾಹ್ಮಣರು ಸಾಯಂಕಾಲ ಅಗ್ನಿಹೋತ್ರ ಮಾಡುವುದಿಲ್ಲ. ರಥ, ಗಜ, ಗೋ, ಅಶ್ವಶಾಲೆಗಳಿಗೆ ಬೆಂಕಿ ಬೀಳುತ್ತದೆ. ತಮ್ಮೆಲ್ಲ ಸಂಪತ್ತನ್ನು ಸೋತ ಧರ್ಮರಾಯಾದಿಗಳು ದ್ರೌಪದಿಯಿಂದಾಗಿ ರಾಜ್ಯವನ್ನು ಮರಳಿ ಪಡೆದರೂ, ಅಪಮಾನದಿಂದ ಮುಕ್ತರಾಗುವುದಿಲ್ಲ. ಅವರು ಧೃತರಾಷ್ಟ್ರನ ಹಂಗಿಗೆ ಒಳಗಾಗುತ್ತಾರೆ. ಅವನು ಮತ್ತೆ ಆಡಲು ಹೇಳಿ ಕಳುಹಿಸಿದಾಗ ಅದು ಆಜ್ಞೆಯೆಂದೇ ಭಾವಿಸಿ– ತರ್ಕ ತನ್ನ ಕೊನೆ ಮುಟ್ಟುವಂತೆ– ಒಡ್ಡಿದ ಪಣಕ್ಕೆ– ನಿರೀಕ್ಷಿಸಿದಂತೆ– ಸೋತು ವನವಾಸಕ್ಕೆ ಹೊರಡುತ್ತಾರೆ.

ರಾಜರು ದಾಸರಾಗಿ ಮಾರ್ಪಟ್ಟು ೧೩ ವರ್ಷ ಕಳೆಯುವ ಈ ನಿಯಮ ಅಂದಿನ ದಾಸರ ಸ್ಥಿತಿಯನ್ನು ಧ್ವನಿಸುತ್ತದೆ. ದಾಸರಾಗಿ ಮಾರ್ಪಟ್ಟಾಗ ಪಾಂಡವರು ಮಾಡುವ ಅನೇಕ ಕೆಲಸಗಳಲ್ಲಿ ರಾಕ್ಷಸರನ್ನು ಕೊಂದದ್ದು 'ಘನ' ಕಾರ್ಯ. ಅವರು ಅನೇಕ ಸ್ಥಳೀಯ ಜನಪದಗಳ ಆರಾಧ್ಯಮೂರ್ತಿಗಳಾಗುತ್ತ ಹೋದರೆಂದು ತೋರುತ್ತದೆ. ಅಂಥ ಸ್ಥಿತಿಯ ಪಾಂಡವರನ್ನು ಕುರಿತೇ ನಮ್ಮ ನಾಡಿನ ಜನಪದರಲ್ಲಿ ಅನೇಕ ಬಗೆಯ ಆಚರಣೆ, ನಂಬಿಕೆ, ಐತಿಹ್ಯ, ಕತೆ, ಗಾದೆ, ಸ್ಥಳಪುರಾಣ, ಕ್ಷೇತ್ರಗಳು ಮುಂತಾದವು ಇಂದಿಗೂ ಜೀವಂತವಾಗಿವೆ. ಉದಾ– ಕುಂತಿಪೂಜೆ, ಶಗಣೆ ಪಾಂಡವರ ಹಬ್ಬ, ವಿರಾಟನಗರಿ ಹಾನಗಲ್, ಬೆಳೆಬಂದ ಹೊಲಗಳಲ್ಲಿ ೫ ಕಲ್ಲಿಟ್ಟು ಮಾಡುವ ಪಾಂಡೋರ ಪೂಜೆ, ಜಿಂಜಿಯಲ್ಲಿರುವ ದ್ರೌಪದಿ ಪಂಥ, ಎರೆಹೊಲಕ್ಕೆ ಪಾಂಡವಬೀಳು ಎಂದು ಕರೆಯುವುದು, ಪಾಂಡವರ ಗುಡಿಗಳು, ಹಿಡಿಂಬ ವನ, ನವಶಿಲಾಯುಗದ ಗೋರಿಗಳನ್ನು 'ಪಾಂಡವರ ಕುಳಿ'ಗಳೆನ್ನುವುದು, ಕರಗ ಪೂಜೆ ಇತ್ಯಾದಿ.

● ●

ಎಸ್.ಎಸ್. ಹಿರೇಮಠ : ಕನ್ನಡ ಪ್ರಾಧ್ಯಾಪಕರು, ಎಡಿಬಿ ಪ್ರ.ದ. ಕಾಲೇಜು, ಹರಪನಹಳ್ಳಿ-೫೮೩ ೧೩೧

# ವಿಜಯಾ ಸುಬ್ಬರಾಜ್ ಅವರ ಮೂರು ನಾಟಕಗಳು

ಎಚ್. ಜಿ. ಸೋಮಶೇಖರ ರಾವ್

ಡಾ. ವಿಜಯಾ ಸುಬ್ಬರಾಜ್ ಅವರ 'ದಂಗೆ ಎದ್ದವಳು', 'ಮಿಲನ' ಹಾಗೂ 'ಮತ್ತೊಂದು ಮಹಾಭಾರತ' ಈ ಮೂರೂ ನಾಟಕಗಳು ೨೦೦೩ ರಲ್ಲಿ ಪ್ರಕಟವಾದವು. ಇವನ್ನು ಕುರಿತ ನನ್ನ ಕೆಲವು ಅನಿಸಿಕೆಗಳಲ್ಲಿವೆ.

'ಮಹಿಳೆಯರು ಏಕೆ ನಾಟಕ ಬರೆಯೋಲ್ಲ? ನಾನೇಕೆ ಬರೀಬಾರ್ದು' ಅಂತ ಮನಸ್ಸು ಮಾಡಿ ನಾಟಕ ರಚನೆಗೆ ಹೊರಟಿರುವ ವಿಜಯಾ ಸುಬ್ಬರಾಜ್ ಮೂಲತಃ ಒಳ್ಳೆಯ ಕವಯಿತ್ರಿ. ಈಗಾಗಲೇ ಕತೆ-ಕವನಗಳನ್ನು ರಚಿಸಿ ಹೆಸರಾಗಿದ್ದಾರೆ. ನಾಟಕಗಳ ರಚನೆಯೇ ಕಡಿಮೆಯಾಗುತ್ತಿರುವಾಗ ಹೊಸ ನಾಟಕಗಳು ಬರುವುದು ಸ್ವಾಗತಾರ್ಹ. ವಿಜಯಾ ಸುಬ್ಬರಾಜ್‌ರ ಮೊದಲ ಪ್ರಯತ್ನ 'ಪಾಂಚಾಲಿ ಮತ್ತು ಇತರ ನಾಟಕಗಳು' ಸಾಕಷ್ಟು ಮೆಚ್ಚುಗೆ ಪಡೆದುದಲ್ಲದೆ ಕೆಲವು ಪ್ರಶಸ್ತಿಗಳನ್ನು ಪಡೆದಿದೆ. ಹೀಗೆ ಪಡೆದ ಪ್ರೋತ್ಸಾಹದಿಂದ 'ನಾಟಕ ಬರೀಬಲ್ಲೆ' ಎಂಬ ಭರವಸೆಯೂ ಅವರಲ್ಲಿ ಹುಟ್ಟಿತು. ಅದರ ಫಲವೇ ಈ ಮೂರು ನಾಟಕಗಳು.

ದಂಗೆ ಎದ್ದವಳು ನಾಟಕದಲ್ಲಿ 'ಮಾದೇವಿ'ಯ ದಂಗೆಯೇ ನಾಟಕಕ್ಕೆ ಒಂದು ತಿರುವನ್ನು ಕೊಡುತ್ತದೆ. ಪ್ರಾಸ್ತಾವಿಕವಾಗಿ ವಿಜಯಾ ಸುಬ್ಬರಾಜ್ ಅವರು 'ನಾನು ನಾಟಕ ಬರೆಯ ಹೊರಟಿರುವುದು ಹುಚ್ಚು ಸಾಹಸವೇ ಆದರೂ...' ಎಂದು ಹೇಳಿಕೊಂಡಿದ್ದಾರಾದರೂ ನಾಟಕ ಓದಿದ ಮೇಲೆ ಅಂಥ ಅಳುಕು ಅನಾವಶ್ಯಕವಾದದ್ದು ಎಂದು ಅನಿಸುತ್ತೆ... ಇಲ್ಲಿ ೧೨ ಮುಖ್ಯ ಪಾತ್ರಗಳು ಮತ್ತು ಇತರ ಚಿಕ್ಕ ಪಾತ್ರಗಳೂ ಇವೆ. ನಾಟಕದ ಪ್ರಾರಂಭ ಸಾಂಪ್ರದಾಯಿಕ ರೀತಿಯನ್ನು ಹೋಲುತ್ತ, ಅದರ ಮೂಲ ಆಶಯವು ನಾಡಿಗೆ ವಿಪತ್ತು ಆವರಿಸಿದಾಗ 'ಬಲಿ' ಕೊಡುವುದು; 'ಬಲಿ'ಯಾದ ವ್ಯಕ್ತಿ ದೈವತ್ವಕ್ಕೇರುವುದು ಎಂಬ ಜಾನಪದ ಕತೆಗಳದ್ದಾಗಿದೆ. ಇಲ್ಲಿ ವಿಜಯಾ ಕೆಲವು ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡು ಗೌಡರ ಮಗಳು ಮಾದೇವಿ ಶೋಷಣೆಯ ವಿರುದ್ಧ ದಂಗೆ ಏಳುವುದು ಈ ನಾಟಕದ ಒಟ್ಟು ಸಾರಾಂಶ. ಹೀಗಾಗಿ ಅಲ್ಲಲ್ಲಿ ನಾಟಕವಲ್ಲಿ ಮಹಿಳಾ ಚಳುವಳಿಯ ಮಾತುಗಳೂ ಬಂದಿವೆ. ನಾಟಕದ ವಸ್ತು 'ಕೆರೆಗೆ ಹಾರ'ದ ನೆನಪು ತರುತ್ತದೆ. ಗೌಡರ ಮಗಳು ಮಾದೇವಿ ಎಂಬ ಸುಂದರಿ ಇಲ್ಲಿ ಪ್ರಧಾನ ಪಾತ್ರ : ಭವಿಷ್ಯದ ಹೇಳಿಕೆ ವಿರುದ್ಧ ರಾಜಕುಮಾರನೊಬ್ಬ ಮೆಚ್ಚಿ ಮಾದೇವಿಯನ್ನು ಮದುವೆಯಾದ– ಯುದ್ಧ, ಬರಗಾಲ ತಗುಲಿ ವಿನಾಶದ ಅಂಚು ಮುಟ್ಟಿದ ನಾಡಿನ ಉದ್ಧಾರಕ್ಕಾಗಿ ಗರ್ಭಿಣಿ ಹೆಂಗಸಿನ ಬಲಿ ಕೊಡಬೇಕಾಗಿ ಬಂದ ಸಂದರ್ಭ– ಅದಕ್ಕೆ ವಿರೋಧ, ಆಂದೋಳನವಾಗಿ ಕೊನೆಗೆ ಭಯಂಕರ ಮಳೆ ಬರುವುದು– ಹೀಗೆ ನಾಟಕ ಸಾಗುತ್ತದೆ.

ನಾಟಕ ವಸ್ತು ಜಾನಪದವಲ್ಲಿ ಹೊಸದಲ್ಲವಾದರೂ, ಆರಿಸಿದ ವಸ್ತುವನ್ನು ನಾಟಕಕ್ಕೆ ಒಗ್ಗಿಸಿಕೊಂಡಿರುವ ರೀತಿ ಚೆನ್ನಾಗಿದೆ. ಕೆಲವು ಕಡೆ ಜಾನಪದ ಶೈಲಿಯ ಸಂಭಾಷಣೆಗಳೂ ಬರುತ್ತವೆ. ಈ ನಾಟಕದ ಒಟ್ಟು 'ಬಂಧ' ಮತ್ತೊಂದಿಷ್ಟು ಚಂದವಾಗಿ ಬರಬೇಕಿತ್ತು. ಭಾಗವತರು ಆಡುವ ಮಾತುಗಳಿಂದಲೇ ವಿಷಯಗಳು ಅರಿಯಬೇಕಾಗಿದ್ದು ಅದಕ್ಕೆ ಪೂರಕವಾದ ಮುಖ್ಯ 'ಕ್ರಿಯೆ' ಅಷ್ಟಾಗಿ ಕಾಣದೆ ಹೋಗಿದೆ : ನಾಟಕವಾಗಿದ್ದರೂ ಕೆಲವು ಸಂಭಾಷಣೆಗಳು

ಕಾದಂಬರಿಯ ಮಾತುಗಳ ಹಾಗಿವೆ : ಯುದ್ಧ ಮಾಡುವ ರಾಜಕುಮಾರ ಮುಂದೆ ಉತ್ತರ ಕುಮಾರನಂತೆ ಕೂಡುವುದು ಅಸಹಜ ಅನ್ನಿಸುತ್ತೆ. ಹಾಗೆಯೇ ಕೆಲವು ದೃಶ್ಯಗಳನ್ನು ರಂಗದ ಮೇಲೆ ಸುಲಭವಾಗಿ ತರುವುದು ಸಾಧ್ಯವಾಗದೆ ಹೋಗಬಹುದು. ಮಹಿಳಾ ಚಳುವಳಿಯನ್ನು ಮುಂದಿಟ್ಟು ಬರೆಯುವಾಗ ಇಂಥ 'ಚಳುವಳಿ ಹೀಗೆ ನಡೆಯಬೇಕೆ' ಎಂಬ ಪ್ರಶ್ನೆಯೂ ಬಂದು ನಿಲ್ಲುತ್ತದೆ. ಏನೇ ಇದ್ದರೂ ಒಟ್ಟಾರೆ ಹೇಳಬಹುದಾದರೆ ಸಮರ್ಥ ನಿರ್ದೇಶಕರಿಂದ ನಾಟಕದ ಆಶಯವು ಪ್ರೇಕ್ಷಕರನ್ನು ಮುಟ್ಟಿಸಲು ಸಾಧ್ಯವಾಗಬಹುದಾದ ನಾಟಕವಿದು. ಕೆಲವು ರಂಗಸೂಚನೆಗಳನ್ನು ಕೊಟ್ಟಿರುವುದರ ಆವಶ್ಯಕತೆಯ ಬಗ್ಗೆಯೂ ಹೇಳಬೇಕಾಗಿದೆ. ಅವಿಲ್ಲದೆಯೂ ನಾಟಕವಾಗುತ್ತೆ.

ಮಿಲನ ೧೪ ಮುಖ್ಯ ಪಾತ್ರಗಳಿರುವ ಈ ನಾಟಕವನ್ನು ಭಾಸನ ನಾಟಕಗಳಿಂದ ಪ್ರಭಾವಿತರಾಗಿ ರಚಿಸಿದ್ದಾಗಿ ವಿಜಯಾ ಅವರು ಹೇಳಿದ್ದಾರೆ. ಭಾಸನ ಎರಡು ನಾಟಕಗಳಲ್ಲಿ ಬರುವ 'ಅವಿಮಾರಕ'ದಿಂದ ಪ್ರಣಯ ಸಾಹಸದ ಕಥಾನಕವನ್ನು ಆಧರಿಸಿ ಪೂರ್ಣಪ್ರಮಾಣದ (ಎರಡು ಗಂಟೆಗಳ) ನಾಟಕ ರಚನೆಯಾಗಿದೆ ಎಂದೂ ಅವರೇ ತಿಳಿಸಿದ್ದಾರೆ. ನಾಟಕದ ರಂಗಪ್ರಯೋಗ ಸಾಧ್ಯವಾಗುವುದೆಂಬ ಭರವಸೆಯನ್ನೂ ವ್ಯಕ್ತಪಡಿಸಿದ್ದಾರೆ. ಇಡಿಯ ನಾಟಕ ಸುಖಾಂತದ ಒಂದು ಪ್ರಣಯ ಸಾಹಸದ ಕಥೆ– ಅವಿಮಾರಕ ಕುರಂಗಿಯರ ಪ್ರೇಮಪ್ರಸಂಗದ್ದು. ಇಲ್ಲಿ ಕಥಾವಸ್ತುವಿಗೆ ಬೇಕಾಗಬಹುದು ಎಂದೋ ಏನೋ ವೃತ್ತಿ ರಂಗಭೂಮಿಯಲ್ಲಿ ಉಪಯೋಗಿಸುವ 'ಭಾಷೆ'ಯ ಛಾಯೆಗಳಿವೆ. ಹಾಗೆಯೇ ಅರಮನೆ, ಭಟರು, ಸಿಂಹಾಸನ, ಸಖಿಯರು, ವಿದೂಷಕ ಎಲ್ಲರೂ ಇದ್ದಾರೆ.

ನನ್ನ ಕೆಲವು ನಿಸಿಕೆಗಳೆಂದರೆ :

೧. ಕುರಂಗಿ ತಾನು ಕಂಡ ಯುವಕನಲ್ಲಿ ಅನುರಕ್ತಳಾಗುತ್ತಾಳೆ. ಆದರೆ 'ಪ್ರಣಯ ಸಾಹಸದ ಕಥನ'ವಾಗಿರುವ ಈ ಪ್ರಸಂಗದಲ್ಲಿ ಗಾಢವಾದ ಪ್ರೇಮಾಂಕುರಕ್ಕೆ ಬೇಕಾದ ತೀವ್ರತೆಯ ಹಿನ್ನೆಲೆ ಇಲ್ಲವಾಗಿದೆ (ದೃಶ್ಯಾವಳಿಗಳ ದೃಷ್ಟಿಯಿಂದ).

೨. ಇಲ್ಲಿ ಬರುವ ಸಂಭಾಷಣೆಗಳಲ್ಲಿ 'ಮಾತಿನ' ಉಪಯೋಗ ಸ್ವಲ್ಪ ಅತಿಯಾಗಿದೆ ಅನ್ನಿಸುತ್ತೆ. ಹಾಗಾಗಿ 'ಸಂಕೀರ್ಣತೆ'ಯ ಅಭಾವವಿದೆ.

೩. ಕೆಲವು ದೃಶ್ಯಗಳ ಜೋಡಣೆ/ರಚನೆ ಸಿನಿಮೀಯವಾಗಿದೆ; Time lapse ಬೇಕಾಗುವುದರ ಕೆಲವು ಆವಶ್ಯಕತೆಗಳ ಕೊರತೆಯಿದೆ.

೪. ಈ ನಾಟಕದಲ್ಲೂ ರಂಗಸೂಚನೆಗಳು ಬಹಳ detailed ಆಗಿ ಬಂದಿವೆ. (ಉದಾ : ಸಂಜೆಗಾಳಿಯ ಸುಳಿವಿಲ್ಲ : ನಿರ್ಜನ ಗಿಡಮರಬಳ್ಳಿಗಳು ಇತ್ಯಾದಿಗಳು ಪ್ರಯೋಗದ ದೃಷ್ಟಿಯಿಂದ ಅನುಪಯೋಗಿ-ಅಸಹಜ. ಹಾಗೆಯೆ ಮಂತ್ರದ ಉಂಗುರ ಮಾಯವಾಗುವುದು ಪ್ರಯೋಗದ ದೃಷ್ಟಿಯಿಂದ ಕಷ್ಟಕರವಲ್ಲವೇ?

೫. ಈ ನಾಟಕದಲ್ಲಿ ಭಾಷೆಯ ಬಳಕೆ ತುಂಬ ಚೆನ್ನಾಗಿದೆ; ಪ್ರಭಾವಪೂರ್ಣ ಮಾತುಗಳಿವೆ.

೬. ನಾಟಕದ ಒಟ್ಟು ಅವಧಿಯನ್ನು ಕೊಂಚ ಕಡಿಮೆ ಮಾಡಿ– edit ಮಾಡುವುದರ ಮೂಲಕ– ಸಮರ್ಥ ನಟ-ನಟಿಯರಿಂದ ಪ್ರದರ್ಶಿಸಲು ಯೋಗ್ಯವಾದ ಪ್ರಯೋಗಶೀಲ ಈ ನಾಟಕದ ವಸ್ತು-ಪಾತ್ರಪೋಷಣೆ ಚೆನ್ನಾಗಿದೆ.

ಮತ್ತೊಂದು ಮಹಾಭಾರತ ತೆಲುಗಿನ ಮಹಾಕವಿ ಶ್ರೀನಾಥನ 'ಪಲ್ನಾಟಿ ಚರಿತ್ರಂ' ಆಧಾರಿತ ಈ ನಾಟಕ ರಾಜಕೀಯಕಾರಣಗಳಿಂದ ಮನುಷ್ಯ ಸಂಬಂಧಗಳನ್ನು ಕುರಿತದ್ದಾಗಿದೆ. ಹಾಗಿದ್ದ ಮೇಲೆ ಮೋಸ, ಕ್ರೌರ್ಯ, ದೌರ್ಜನ್ಯ, ಸೇಡು– ಇವೆಲ್ಲಾ ಇರಬೇಕಾದ್ದೆ. EGO-centred ಮತ್ತು ಅಧಿಕಾರ ಲಾಲಸೆಗೆ ಒಳಗಾದ ಎರಡು ವಿಭಿನ್ನ ವ್ಯಕ್ತಿತ್ವಗಳವರ ಮಧ್ಯೆ ನಡೆಯುವ ಘರ್ಷಣೆ ಈ ನಾಟಕದ ಮೂಲ ದ್ರವ್ಯ. ಹಾಗಿದ್ದ ಮೇಲೆ ಚರ್ಚೆ, ವಾದ, ವಿವಾದ, ಗುದ್ದಾಟ, ಇವೆಲ್ಲಾ ನಾಟಕೀಯದ್ದಕ್ಕೂ ಅನಿವಾರ್ಯ. ಇಲ್ಲಿ ದಾಯಾದಿ ಮತ್ಸರವಿದೆ. ಒಳಜಗಳಗಳಿವೆ. ಅಂತರ್ಯುದ್ಧವಿದೆ. ಹೇಗಾದರೂ ಅಧಿಕಾರ ಹಿಡಿಯುವ ಸಂಚು– Power politics ಸರ್ವಾಧಿಕಾರತ್ವದ ಹಾರಾಟ; 'Power corrupts and absolute power corrupts absolutely' ಎಂಬ ಸತ್ಯದ ಅನಾವರಣ. ಮನುಷ್ಯ ಸಂಬಂಧಗಳ ಮಧುರತೆ ರಾಜಕೀಯದ ಹೊಲಸು ರಾಡಿ ಬಿದ್ದು ಹಾಳಾಗುವುದು– ಹೀಗೆ ವಸ್ತು. ಮಹಾರಾಜ, ರಾಜಮಾತೆ, ಯುವರಾಜ, ನಾಗಮಣಿ, ಬ್ರಹ್ಮಣ್ಣ, ನಡೆವ ಕತೆ ಕುತೂಹಲಕಾರಿ. ಪ್ರಸ್ತುತ ರಾಜಕೀಯ ಪರಿಸ್ಥಿತಿಯ ನೆರಳೂ ಇಲ್ಲಿ ಬಿದ್ದಿದೆ. ಕೆಲವು ದೃಶ್ಯಗಳಲ್ಲಿ ಪಾತ್ರಮುಖೇನ ಆಡಿಸಿರುವ ಮಾತುಗಳು ಸಾಹಿತ್ಯಪೂರ್ಣವೂ ಪ್ರಭಾವಶಾಲಿಯೂ ಆಗಿವೆ. ಭಾಷೆಯ ಬಳಕೆ ವಸ್ತುವಿಗೆ ಪೂರಕವಾಗಿದೆ. ಕೆಲವು ಮಾತುಗಳಂತೂ ಮತ್ತೆಮತ್ತೆ ಮೆಲುಕು ಹಾಕುವಂತಿವೆ. ಇಷ್ಟೆಲ್ಲ ಇದ್ದೂ ನಾಟಕದಲ್ಲಿ ಅವಶ್ಯವಾಗಿ ಬೇಕಾದ 'ಕ್ರಿಯೆ'ಗಿಂತ ವಾದ-ಪ್ರತಿವಾದಗಳು, ಆರೋಪ-ಪ್ರತ್ಯಾರೋಪಗಳು ಹೆಚ್ಚಾಗಿದ್ದು ನಾಟಕದ ಮೂಲದ್ರವ್ಯ, ಅಂತಃಸತ್ವ ಸ್ವಲ್ಪ ಮಟ್ಟಿಗೆ ಭಾಸವಾಗುತ್ತದೆ. ಆದರೆ ನಾಟಕ ಒಟ್ಟಾರೆ ಪ್ರಭಾವಪೂರ್ಣವಾಗಿದೆ. ರಾಜಕೀಯದ ಕುಟಿಲ ಕುತಂತ್ರ, (ಮಾಟ-ಮಂತ್ರ), ಮನುಷ್ಯ ಸ್ವಭಾವ ವೈಚಿತ್ರ್ಯಗಳು, ಇವೆಲ್ಲಾ ಇದ್ದು ರಾಜಕೀಯ ಚದುರಂಗದಾಟ ನಾಟಕದ ಉದ್ದಕ್ಕೂ ಕಾಣಿದೆ. ಇದು ಒಳ್ಳೆಯ ಪ್ರಯೋಗಯೋಗ್ಯ ನಾಟಕ.

ಈಚೆಗೆ ನಾಟಕಗಳೇ ಇಲ್ಲ. ಹೊಸ ವಿಚಾರಗಳನ್ನು ಹೊರಗೆಡಹುವ, ಹೊಸ ಪ್ರಯೋಗಗಳಿಗೆ ದಾರಿಯಾಗುವ ನಾಟಕ ರಚನೆಯಿಂದ ಕನ್ನಡ ನಾಟಕ ಪ್ರಪಂಚಕ್ಕೆ ಆಗಬೇಕಾದ 'ಚಿಕಿತ್ಸೆ'ಯ ದೃಷ್ಟಿಯಿಂದ, ವಿಜಯಾ ಸುಬ್ಬರಾಜ್ ಅವರು ನಡೆಸಿರುವ ಪ್ರಯತ್ನಶೀಲತೆ ನಿಜಕ್ಕೂ ಮೆಚ್ಚುವಂಥದ್ದು. ಲೇಖನ ಮುಗಿಸುವ ಮುನ್ನ–

೧. ನಾಟಕದ ಮೂಲ 'ವಸ್ತು' ಮೂರು ಮುಖ್ಯ ರೀತಿಯಲ್ಲಿ ಹುಟ್ಟುತ್ತದೆ. ಒಂದು- ಕಥಾವಸ್ತು, ಎರಡು- ಪಾತ್ರಗಳು, ಮೂರು- ತತ್ವ. ಹೀಗೆ ಈ ಮೂರೂ ಸೇರಿ 'ವಸ್ತು' ಆಗುತ್ತೆ ಎಂಬುದು ಬಹಳ ಹಿಂದಿನಿಂದಲೂ ಒಪ್ಪಿಕೊಂಡು ಬಂದ ಸಿದ್ಧಾಂತ. ಜೊತೆಜೊತೆಗೆ ಭಾಷೆ, ಶೈಲಿ, ಗೀತೆ-ದೃಶ್ಯಾವಳಿ –ಹೀಗೆ ಇವೆಲ್ಲಾ 'ರೀತಿ'ಗೆ ಸಂಬಂಧಿಸಿದ್ದು.
೨. ಶಬ್ದ (ಮಾತು) ಮತ್ತು 'ಕ್ರಿಯೆ' ಈ ಎರಡರ ಸಂಬಂಧ ಬಂಧದಿಂದ ನಾಟಕದ ಇತರ ಕ್ರಿಯೆಗಳಿಗೆ ಅರ್ಥ ಹುಟ್ಟುತ್ತದೆ. ಯಾಕೆಂದರೆ 'ಶಬ್ದ'ಗಳಿಗೆ ಆಧ್ಯಾತ್ಮಿಕ ಮತ್ತು ತಾತ್ವಿಕ ಅರ್ಥಗಳಿವೆ. ಇದರಿಂದಾಗಿ ಒಟ್ಟಾರೆ 'ಸತ್ಯಾರ್ಥಗ್ರಹಣ' ಮತ್ತು 'ಆತ್ಮಾವಲೋಕನ' ಸಾಧ್ಯವಾಗಬೇಕು. ಇದನ್ನು ಅರಿಸ್ಟಾಟಲ್ ಕಾಲದಿಂದಲೂ ಹೇಳುತ್ತ ಬಂದಿರುವಂಥದ್ದು.
೩. ನಾಟಕವು ಕೂಡ 'ಸಾಹಿತ್ಯ'ದ ಶ್ರೇಷ್ಠ ಕಾವ್ಯರೂಪ.

● ●

ಎಚ್. ವಿ. ಸೋಮಶೇಖರ ರಾವ್ : ೮೦, ಶ್ರೀನಿವಾಸ, ೧೧ನೇ ಮುಖ್ಯರಸ್ತೆ, ಶ್ರೀನಗರ, ಬೆಂಗಳೂರು-೫೦

# ಜುನಾಗಡ ಮಹಾತ್ಮೆ

## ಶಿವಾನಂದ ನಾಗನೂರ

ಒಬ್ಬ ದೊಡ್ಡ ಕಂಟ್ರ್ಯಾಕ್ಟರ್ ಲಂಡನ್ನಿಗೆ ಹೊರಟಿದ್ದರು. ವಿಮಾನದಲ್ಲಿ ಸಹಪ್ರಯಾಣಿಕರ ಪರಿಚಯವಾಯಿತು. ಅವರೂ ಲಂಡನ್ನಿಗೆ ಹೊರಟಿದ್ದರು.

"ಲಂಡನ್ನಿನಲ್ಲಿ ಎಲ್ಲಿ ಉಳಿದುಕೊಳ್ಳುವಿರಿ?" ಸಹಪ್ರಯಾಣಿಕರು ಕೇಳಿದರು. ತಾವು ಈ ಬಗ್ಗೆ ಇನ್ನೂ ನಿರ್ಧರಿಸಿಲ್ಲವೆಂದು ಕಂಟ್ರ್ಯಾಕ್ಟರ್ ಹೇಳಿದರು.

"ನಾನಿಳಿದುಕೊಳ್ಳುವ ಹೋಟೆಲ್ಲಿನಲ್ಲಿಯೇ ಇಳಿದುಕೊಳ್ಳಿ. ಅದು ನಿಮ್ಮ ಕೆಲಸದ ಸ್ಥಾನಕ್ಕೂ ಸಮೀಪವಿದೆ. ಮತ್ತು ಅದು ಅತ್ಯುತ್ತಮ ಹೋಟೆಲ್" ಎಂದರು ಸಹಪ್ರಯಾಣಿಕರು.

"ಆದರೆ ಮುಂಚಿತವಾಗಿ ಕೊಠಡಿ ಕಾಯ್ದಿರಿಸದ ನನಗೆ ಅಲ್ಲಿ ಅವಕಾಶ ಸಿಗಬಹುದೆ?"

"ಅದಕ್ಕೇಕೆ ಚಿಂತೆ? ನಾನೂ ಸಹ ಕೊಠಡಿಯನ್ನು ಕಾಯ್ದಿರಿಸಿಲ್ಲ. ಆದರೂ ಸಿಕ್ಕೇ ಸಿಗುವದೆಂಬ ಭರವಸೆ ನನಗಿದೆ. ನಿಮಗೂ ಸಹ ದೊರಕಿಸಿಕೊಡುವೆ, ಬನ್ನಿ."

ಲಂಡನ್ನಿನಲ್ಲಿ ಇಳಿದ ನಂತರ ನೇರವಾಗಿ ಆ ಪ್ರತಿಷ್ಠಿತ ಹೋಟೆಲ್ಲಿಗೆ ಹೋಗಿ ಎರಡು ಕೊಠಡಿಗಳನ್ನು ಕೊಡಲು ಕೇಳಿದರು.

"ನೀವು ಕೊಠಡಿಗಳನ್ನು ಕಾಯ್ದಿರಿಸಿರುವಿರಾ?" ಮ್ಯಾನೇಜರ್ ಕೇಳಿದ.

"ಇಲ್ಲ" ಸಹಪ್ರಯಾಣಿಕ ಉತ್ತರಿಸಿದರು.

"ಹಾಗಾದರೆ ಕೊಠಡಿಗಳು ಇಲ್ಲ."

"ನೋಡಿ, ತುರ್ತು ಕೆಲಸದ ನಿಮಿತ್ತ ನಾವು ತಕ್ಷಣ ಹೊರಟು ಬರಬೇಕಾಯಿತು ಕಾಯ್ದಿರಿಸಲಾಗಲಿಲ್ಲ. ದಯವಿಟ್ಟು ಅನುಕೂಲ ಮಾಡಿಕೊಡಿ."

ಪ್ರಯಾಣಿಕರನ್ನು ಆಪಾದಮಸ್ತಕ ಪರೀಕ್ಷಿಸಿದ ಹೋಟೆಲ್ ಮ್ಯಾನೇಜರ್, "ತಮ್ಮ ಪರಿಚಯ?" ಎಂದು ಕೇಳಿದ.

"ನಾನೊಬ್ಬ ಜಮೀನುದಾರ. ಇವರು ಕಂಟ್ರ್ಯಾಕ್ಟರರು."

ಮ್ಯಾನೇಜರ್ ಕೊಠಡಿಯ ನೋಂದಣಿ ಪುಸ್ತಕ ತಿರುವಿ ಹಾಕುತ್ತ, "ಕ್ಷಮಿಸಿ, ಸದ್ಯಕ್ಕೆ ಯಾವ ಕೊಠಡಿಯೂ ಖಾಲಿ ಇಲ್ಲ" ಎಂದು ಹೇಳಿದ.

"ನೋಡಿ, ನಮ್ಮ ವಂಶಜರು ಎಂದೂ ಕೊಠಡಿ ಕಾಯ್ದಿರಿಸದೆ ಮೊದಲಿನಿಂದಲೂ ಇದೇ ಹೋಟೆಲ್ಲಿನಲ್ಲಿ ಉಳಿದುಕೊಳ್ಳುತ್ತಾ ಬಂದಿದ್ದಾರೆ. ನನ್ನ ಅಜ್ಜ, ನನ್ನ ಅಪ್ಪ ಮತ್ತು ಚಿಕ್ಕವನಿದ್ದಾಗ ನಾನೂ ನನ್ನ ಅಪ್ಪನೊಡನೆ ಒಂದೆರಡು ಸಲ ಇಲ್ಲಿ ಉಳಿದುಕೊಂಡದ್ದುಂಟು. ನಮ್ಮಂಥವರಿಗೆ ಅನುಕೂಲ ಮಾಡಿಕೊಡದಿದ್ದರೆ ಹೇಗೆ ?"

"ನಿಮ್ಮ ಅಜ್ಜ ಎಂದು ಹೇಳಿದಿರಲ್ಲಾ, ಅವರು ಯಾರು?"

"ನಮ್ಮ ಅಜ್ಜ 'ಜುನಾಗಡ' ಸಂಸ್ಥಾನದ ಮಹಾರಾಜ."

"ಜುನಾಗಡ ಅಂದ ಕೂಡಲೇ ಮ್ಯಾನೇಜರನ ಕಿವಿ ನಿಮಿರಿತು. ಈ ರಾಜನ ಬಗ್ಗೆ ತಮ್ಮ ಹೋಟೆಲ್ಲಿನಲ್ಲಿ ಕಳೆದ ೫-೬ ದಶಕಗಳಿಂದ ಪ್ರಚಲಿತವಿದ್ದ ದಂತಕಥೆ ನೆನಪಾಗಿ ಮತ್ತೊಮ್ಮೆ ಸಹಪ್ರಯಾಣಿಕನನ್ನು ನೋಡಿ, "ಕ್ಷಮಿಸಿ" ಎಂದು ಹೇಳುತ್ತಾ ಸೇವಕನಿಗೆ

ಪ್ರಯಾಣಿಕರ ಸೂಟ್‌ಕೇಸ್ ತರಲು ಹೇಳಿ ಸ್ವತಃ ಕೊಠಡಿಗಳ ಬೀಗದ ಕೈಗಳೊಡನೆ ಪ್ರಯಾಣಿಕರನ್ನು ಕೊಠಡಿಗಳಿಗೆ ಕರೆದೊಯ್ದು ಆದರಪೂರ್ವಕವಾಗಿ ಉಪಚರಿಸಿದನು.

ಕಾಂಟ್ರ್ಯಾಕ್ಟರನಿಗೆ ಆಶ್ಚರ್ಯವಾಯಿತು. “ ‘ಜುನಾಗಡ’ ಶಬ್ದ ಕಿವಿಯ ಮೇಲೆ ಬೀಳುತ್ತಲೇ ಮ್ಯಾನೇಜರ್ ವಿಧೇಯನಾಗಿ ಬಿಟ್ಟನಲ್ಲಾ, ಏಕೆ?” ಎಂದು ಕುತೂಹಲಭರಿತನಾಗಿ ಕೇಳಿದನು :

“ಅದೊಂದು ರಸಮಯ ಪ್ರಸಂಗ. ಸುಮಾರು ಆರು ದಶಕಗಳ ಹಿಂದೆ ನಮ್ಮ ಅಜ್ಜ ಲಂಡನ್ನಿಗೆ ಬಂದಾಗ ಇದೇ ಹೋಟೆಲ್ಲಿನಲ್ಲಿ ಇಳಿದುಕೊಂಡಿದ್ದ. ಅವರಿಗೆ ಪ್ರತಿಷ್ಠಿತ ‘ರೋಲ್ಸ್ ರೈಸ್’ ಕಾರು ಕೊಳ್ಳಬೇಕೆಂಬಾಶೆ. ಆವರೆ ಈ ಕಾರುಗಳನ್ನು ನಿಯಮಿತ ಸಂಖ್ಯೆಯಲ್ಲಿ ತಯಾರಿಸುತ್ತಿದ್ದರು. ಅವುಗಳ ಬೆಲೆ ಹೆಚ್ಚಿಗಿದ್ದರೂ ಶ್ರೀಮಂತರಿಂದ ಬಹಳ ಬೇಡಿಕೆ ಇತ್ತು. ಹೀಗಾಗಿ ತಯಾರಕರೂ ಸಹ ಅವುಗಳನ್ನು ರಾಜ, ಮಹಾರಾಜರಿಗೆ, ದೊಡ್ಡ ದೊಡ್ಡ ಶ್ರೀಮಂತರಿಗೆ, ಮತ್ತು ದೊಡ್ಡ ದೊಡ್ಡ ಅಧಿಕಾರಿಗಳಿಗೆ ಮಾತ್ರ ಪೂರೈಸುತ್ತಿದ್ದರು. ‘ಜುನಾಗಡ’ ಸಣ್ಣ ಸಂಸ್ಥಾನವಾದ್ದರಿಂದ ಕಾರು ತಯಾರಕರು ನಮ್ಮ ಅಜ್ಜನಿಗೆ ಕಾರು ಮಾರಲು ತಯಾರಾಗಲಿಲ್ಲ. ಅಜ್ಜ ಹೆಚ್ಚಿಗೆ ಹಣ ಕೊಡುತ್ತೇನೆಂದರೂ ಅವರು ಒಪ್ಪಲಿಲ್ಲ.

“ಅಜ್ಜನಿಗೆ ನಿರಾಶೆ ಮತ್ತು ಅವಮಾನವಾದಂತಾಯಿತು. ತಕ್ಷಣ ಮಂತ್ರಿಯನ್ನು ಕರೆದು ‘ಸುಸ್ಥಿತಿಯಲ್ಲಿ ಇಲ್ಲದಿದ್ದರೂ ಚಿಂತೆಯಿಲ್ಲ. ಎರಡು ಹಳೆಯ ‘ರೋಲ್ಸ್ ರೈಸ್’ ಕಾರುಗಳನ್ನು ಕೇಳಿದ ಬೆಲೆ ಕೊಟ್ಟು ಜುನಾಗಡಕ್ಕೆ ತರಲು ವ್ಯವಸ್ಥೆ ಮಾಡು’ ಎಂದು ಅಜ್ಞಾಪಿಸಿದರು. ಮಂತ್ರಿಗೆ ಆಶ್ಚರ್ಯವಾಯಿತು. ಆದರೂ ಮಹಾರಾಜರ ಆಜ್ಞೆ ಪಾಲಿಸಬೇಕಲ್ಲವೆ?

“ಅಜ್ಜ ಜುನಾಗಡಕ್ಕೆ ಹಿಂದಿರುಗುವಷ್ಟರಲ್ಲಿ ಕಾರುಗಳು ಬಂದಿದ್ದವು. ಮಂತ್ರಿಯನ್ನು ಕರೆದು, ‘ಈ ಕಾರುಗಳನ್ನು ಪ್ರತಿದಿನವೂ ಅರಮನೆಯ ಕಸವನ್ನು ಊರ ಹೊರಗೆ ಸಾಗಿಸಲು ಉಪಯೋಗಿಸಬೇಕು. ಇವುಗಳನ್ನು ಕೋಣಗಳಿಂದ ಎಳೆಸಬೇಕು.’ ಎಂದು ಆಜ್ಞಾಪಿಸಿದರು. ದಿಙ್ಮೂಢನಾದ ಮಂತ್ರಿ ಬಾಯ್ತೆರೆದು ನಿಂತುದನ್ನು ನೋಡಿ ಅಜ್ಜ ತನ್ನ ಆಜ್ಞೆಯನ್ನು ಪುನರುಚ್ಚರಿಸಿದರು.

“ಅಜ್ಜನ ಆಣತಿಯಂತೆ ‘ರೋಲ್ಸ್ ರೈಸ್’ ಕಾರುಗಳಲ್ಲಿ ದಿನನಿತ್ಯ ಅರಮನೆಯ ಕಸವನ್ನು ಊರ ಹೊರಗೆ ಸಾಗಿಸಲು ಪ್ರಾರಂಭವಾಯಿತು. ಒಂದು ವಾರ ಕಳೆದಿರಬಹುದು. ಜುನಾಗಡದಲ್ಲಿನ ರೋಲ್ಸ್‌ರೈಸ್ ಕಾರುಗಳ ಕತೆ ಚಿತ್ರ ಸಹಿತ ದೇಶ ವಿದೇಶಗಳ ಪತ್ರಿಕೆಗಳಲ್ಲಿ ಮೂಡಿ ಬಂತು. ಈ ಸುದ್ದಿಯನ್ನು ಓದಿದ ‘ರೋಲ್ಸ್ ರೈಸ್’ ಕಾರು ತಯಾರಕರು ಗಲಿಬಿಲಿಗೊಂಡರು. ಪ್ರತಿಷ್ಠಿತ ಕಾರಿನ ಮರ್ಯಾದೆ ಕಸಗೂಡಿತ್ತು. ವ್ಯವಸ್ಥಾಪಕರು ಸಭೆ ಕರೆದು ಚರ್ಚಿಸಿದರು. ಪರಿಹಾರಕ್ಕೆ ಹುಡುಕಾಡಿದರು. ಕೊನೆಗೊಂದು ನಿರ್ಣಯಕ್ಕೆ ಬಂದರು– ‘ಭಾರತಕ್ಕೆ ಈಗಾಗಲೇ ಮಾರಾಟಕ್ಕೆ ಕಳಿಸಿದ ಕಾರುಗಳಲ್ಲೊಂದನ್ನು ಜುನಾಗಡ ಮಹಾರಾಜರಿಗೆ ಕಾಣಿಕೆಯಾಗಿ ಅರ್ಪಿಸಿ, ಅವರು ಕೈಕೊಂಡ ಕಸ ಸಾಗಣೆಯ ಕಾರ್ಯವನ್ನು ನಿಲ್ಲಿಸಲು ಪ್ರಾರ್ಥಿಸಬೇಕು.’

‘ರೋಲ್ಸ್ ರೈಸ್’ನ ಭಾರತ ಪ್ರತಿನಿಧಿ ಹೊಸ ಕಾರಿನೊಡನೆ ಜುನಾಗಡಕ್ಕೆ ಬಂದು, ತನ್ನ ಕಂಪನಿಯ ನಿವೇದನೆ ತಿಳಿಸಿದಾಗ ನಮ್ಮ ಅಜ್ಜ ನಸುನಗುತ್ತ ತನ್ನ ಕಲ್ಲೀಮೀಸೆಯನ್ನು ತಿರುವಿದನಂತೆ! ಹೇಗಿದೆ...?”

● ●

ಶಿವಾನಂದ ನಾಗನೂರ : ಜ್ಞಾನಾಮೃತ, ಬಸವೇಶ್ವರನಗರ ‘ಬಿ’ ವಿಭಾಗ, ೩ನೇ ಕ್ರಾಸ್, ಹಾವೇರಿ-೫೮೧ ೧೧೦

# ಎ. ಜಾನಕಿ ಅವರ 'ಪ್ರೇಮಚಂದರ ಕಥೆಗಳು'

## ಎಚ್. ದಂಡಪ್ಪ

ಸಾಹಿತಿಯಾದವನು ಮಾನವತೆ, ವಿಶ್ವತೆ ಮತ್ತು ಐಕ್ಯಮತಗಳ ಸಂಗಮವಾಗಿದ್ದು, ಸಾಮಾಜಿಕ ನ್ಯಾಯದ ಭಾವನೆಗಳು ಸಂಚರಿಸುವಂತೆ ಮಾಡುತ್ತಾನೆ. ದಲಿತರು, ನೊಂದವರು, ವಂಚನೆಗೊಳಗಾಗಿರುವವರನ್ನು ಅವರು ವ್ಯಕ್ತಿಯಾಗಲಿ ಅಥವಾ ಸಮೂಹವಾಗಿರಲಿ ಬೆಂಬಲಿಸುವುದು ಮತ್ತು ಅವರ ಪರವಾಗಿ ವಾದಿಸುವುದು ಸಾಹಿತಿಯ ಕರ್ತವ್ಯ. ಇಂಥ ಮನೋಭಾವವನ್ನು ಬೆಳೆಸಿಕೊಂಡಿದ್ದ ಸುಪ್ರಸಿದ್ಧ ಹಿಂದೀ ಸಾಹಿತಿ ಪ್ರೇಮಚಂದರು ಸಾಮಾಜಿಕ ನ್ಯಾಯ, ಸಮಾನತೆ, ಸರ್ವರ ಹಿತ ಮತ್ತು ಸಕ್ರಿಯ ಮಾನವತಾವಾದದ ಸಮರ್ಥಕರಾಗಿ ಶೋಷಣೆ, ಹಿಂಸೆ, ದಮನ, ಅತ್ಯಾಚಾರ ಮತ್ತು ಅಸಮಾನತೆಗಳನ್ನು ತಮ್ಮ ಕತೆ ಕಾದಂಬರಿಗಳಿಗೆ ವಸ್ತುವಾಗಿಸಿಕೊಂಡು, ಮಾನವನ ಬದುಕನ್ನು ಸಹನೀಯಗೊಳಿಸುವ ಪ್ರಯತ್ನ ಮಾಡಿದ್ದಾರೆ.

ಸಾಮಾನ್ಯ ಮನುಷ್ಯನ ಮಹತ್ವವನ್ನು ಅವನ ಪ್ರಾಮಾಣಿಕತೆಯನ್ನು, ಬದುಕಿನ ಹೋರಾಟದಲ್ಲಿ ಅವನ ಸಾಹಸ ಸಂಕಲ್ಪಗಳನ್ನು ಐಕ್ಯಮತದ. ಮಾನವತಾವಾದ ಮತ್ತು ಮಾತೃಭೂಮಿಯ ಬಗೆಗಿನ ಪ್ರೀತಿಯ ಹಿರಿಯ ಆದರ್ಶಗಳಿಗಾಗಿ ಆತ್ಮಾರ್ಪಣೆ ಮಾಡಬಲ್ಲ ಅವನ ಸಿದ್ಧತೆಯನ್ನು ತಮ್ಮ ಕೃತಿಗಳಲ್ಲಿ ಎತ್ತಿ ಹಿಡಿದಿದ್ದಾರೆ. ಅಷ್ಟೇ ಅಲ್ಲ, ಮನುಷ್ಯನು ತನ್ನ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸುವ ಉಪಾಯಗಳನ್ನು ಸಹ ತಮ್ಮ ಕತೆ ಕಾದಂಬರಿಗಳಲ್ಲಿ ಅನಾವರಣಗೊಳಿಸಿದ್ದಾರೆ.

೧೯ ನೇ ಶತಮಾನದ ಮಧ್ಯಭಾಗದ ನಂತರವೇ ಸಾಮಾಜಿಕವೆನ್ನಬಹುದಾದ ಕತೆ ಕಾದಂಬರಿಗಳು ಭಾರತದಲ್ಲಿ ಹುಟ್ಟಿಕೊಂಡವು. ಹೀಗಾಗಿ ಪ್ರೇಮಚಂದರಿಗೆ ಸಾಮಾಜಿಕ ವಸ್ತುವನ್ನುಳ್ಳ ಕಥೆ, ಕಾದಂಬರಿಯ ಗದ್ಯ ಪರಂಪರೆ ಸಾಕಷ್ಟಿರಲಿಲ್ಲ. ಅಲ್ಪ ಸ್ವಲ್ಪ ಕಾಣಸಿಕೊಂಡಿದ್ದ ಗದ್ಯ ಬರೆಹಗಾರರಲ್ಲಿ ಹೆಚ್ಚು ಪ್ರಭಾವ ಬೀರಿದವರೆಂದರೆ ಉರ್ದು ಬರೆಹಗಾರರು. ಮಿರ್ಜಾ ರಜಬ್ ಅಲಿ ಬೇಗ್ ಸರೂರ್, ನಜೀರ್ ಅಹಮದ್, ರತನ್‌ನಾಥ್ ಸರ್‌ಶಾರ್, ಶರರ್ ಮತ್ತು ರುಸ್ವಾ ಅವರು ಒಂದು ಪರಂಪರೆಯನ್ನು ನಿರ್ಮಿಸಿದ್ದರು. ಪ್ರೇಮಚಂದರು ಉರ್ದು ಭಾಷೆಯಲ್ಲಿ ಮೊದಲು ಹದಿನೈದು ವರ್ಷಗಳ ಕಾಲ ಬರೆದು, ನಂತರ ಹಿಂದಿಯಲ್ಲಿ ಬರೆಯತೊಡಗಿದರು. 'ಸೇವಾಸದನ'ದಿಂದ ಆರಂಭಿಸಿ 'ಪ್ರೇಮಾಶ್ರಮ', 'ರಂಗಭೂಮಿ', 'ಕಾಯಕಲ್ಪ', 'ಕರ್ಮಭೂಮಿ' ಮತ್ತು 'ಗೋದಾನ' ಕಾದಂಬರಿಗಳನ್ನು ಬರೆದರು. ಇವುಗಳು ಮಾನವೀಯ ಸಾಮಾಜಿಕ ಸಂವೇದನೆಗಳನ್ನು ಮಾನವೇತಿಹಾಸದ ದರ್ಪಣದ ವಾಸ್ತವತಾದರ್ಶನ ಮೂಡಿಸಿದ್ದಾರೆ. ಹಾಗೆಯೇ ನೂರಾರು ಕತೆಗಳನ್ನು ಉರ್ದು ಮತ್ತು ಹಿಂದಿಯಲ್ಲಿ ಬರೆದಿದ್ದಾರೆ. ಅವುಗಳಲ್ಲಿ ಬಹುತೇಕ ಎಲ್ಲವೂ ಉತ್ಕೃಷ್ಟವಾದ ಕತೆಗಳೇ. ಅವುಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ವಿಶ್ಲೇಷಣೆಗೆ ಬಳಸಲಾಗಿದೆ. ಹಾಗೂ ಅವುಗಳ ಮೂಲಕ ಇಡೀ ಪ್ರೇಮಚಂದರ ಕತೆಗಳ ಆಶಯವನ್ನು ವಿಶ್ಲೇಷಿಸಲಾಗಿದೆ.

'ದೊಡ್ಡ ಮನುಷ್ಯರ ಮನೆಯ ಹೆಣ್ಣುಮಗಳು' ಎಂಬ ಕತೆಯಲ್ಲಿ ಪ್ರೇಮಚಂದರು ಅವಿಭಕ್ತ ಕುಟುಂಬದ ವ್ಯವಸ್ಥೆಯನ್ನು ಸಮರ್ಥಿಸಿದ್ದಾರೆ. ಅದನ್ನು ಉಳಿಸಿಕೊಂಡು ಬರಬೇಕೆಂಬ

ವಾದವನ್ನು ಬೆಂಬಲಿಸಿದ್ದಾರೆ. ಈ ವ್ಯವಸ್ಥೆ ಒಡೆದು ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿರುವಂತಹ ಐತಿಹಾಸಿಕ ಮತ್ತು ಆರ್ಥಿಕ ಕಾರಣಗಳನ್ನು ಶೋಧಿಸಿದ್ದಾರೆ. ವೃದ್ಧರಿಗೆ, ವಿಧವೆಯರಿಗೆ, ಅನಾಥರಿಗೆ ಮತ್ತು ಅಸಹಾಯಕ ವ್ಯಕ್ತಿಗಳಿಗೆ ಸಾಮಾಜಿಕ ರಕ್ಷಣೆ ದೊರೆಯುವಂತಹ ಯಾವುದೇ ವ್ಯವಸ್ಥೆ ಇಲ್ಲದಿರುವ ವ್ಯವಸ್ಥೆಯ ಅಸ್ತಿತ್ವಕ್ಕೆ ತನ್ನದೇ ಆದ ಔಚಿತ್ಯವಿದೆ. ರೈತ ಕುಟುಂಬಗಳು ಒಡೆದು ಹೋಗುತ್ತಿರುವುದರಿಂದ ಕೃಷಿಯ ಮೇಲೂ ಅದರ ಕೆಟ್ಟ ಪರಿಣಾಮ ಉಂಟಾಗುತ್ತದೆ. ಏಕೆಂದರೆ ಇದರ ಪರಿಣಾಮವಾಗಿ ಹೊಲ ಗದ್ದೆಗಳ ಆಕಾರ ದಿನೇ ದಿನೇ ಚಿಕ್ಕದಾಗುತ್ತ ಬರುತ್ತಿದೆ. ಇದರ ಅರ್ಥ, ಇತಿಹಾಸದ ಪ್ರಕ್ರಿಯೆಗೆ ತಡೆಯೊಡ್ಡ ಲಾಗುವುದಿಲ್ಲ ಎಂಬ ವಿಚಾರವೂ ಈ ಕತೆಯಲ್ಲಿ ವ್ಯಕ್ತವಾಗಿದೆ.

ಈ ಸಂಕಲನದ ಮತ್ತೊಂದು ಕತೆ, 'ಶವದ ವಸ್ತ್ರ'. ಇದನ್ನು 'ಹೆಣದ ಬಟ್ಟೆ' ಯೆಂದು ನ್ಯಾಷನಲ್ ಬುಕ್ ಟ್ರಸ್ಟ್‌ನ ಅನುವಾದಿತ ಸಂಕಲನದಲ್ಲಿ ಅನುವಾದಿಸಲಾಗಿದೆ. 'ಹೆಣದ ಬಟ್ಟೆ' ಎಂಬ ಅನುವಾದವೇ ಸರಿ. ಇರಲಿ, ಆದರೆ ಈ ಕತೆಯ ಆಶಯ ತುಂಬಾ ಪ್ರಸ್ತುತ ವಾದದ್ದು. ಸತ್ತ ಹೆಣಕ್ಕೆಂದು ಹೆಣದ ಬಟ್ಟೆಯನ್ನು ತಂದು ಅದನ್ನು ಮಾರಿ ಕುಡಿದು ತಿಂದು ಮೈಮರೆಯುತ್ತಾರೆ. ಮನುಷ್ಯರಾದ ಇವರು ಬಡತನದ ವ್ಯವಸ್ಥೆಯಲ್ಲಿ ಮಾನವೀಯತೆ ಯನ್ನೇ ಮರೆಯುತ್ತಾರೆ. ಅಸ್ಪೃಶ್ಯತೆ, ಹಸಿವು, ಬಡತನ, ಅಸಮಾನತೆಯ ಚಿತ್ರಣಗಳನ್ನು ದಟ್ಟವಾಗಿ ಕಟ್ಟಿಕೊಡುತ್ತಾ ನಮ್ಮನ್ನು ಆಲೋಚಿಸುವಂತೆ ಮಾಡುವ ಹುನ್ನಾರದ ಬರವಣಿಗೆ ಪ್ರೇಮಚಂದ ರದು. ಇಂದು ಬರೆಯುತ್ತಿರುವ ಹಿರಿಯ ಮತ್ತು ಕಿರಿಯ ಬರೆಹಗಾರರಿಗೆ, ಅದರಲ್ಲೂ ದಲಿತ ಬಂಡಾಯ ಬರಹಗಾರರಿಗೆ ಪ್ರೇಮಚಂದರ ಕತೆ ಕಾದಂಬರಿಗಳು ಮಾರ್ಗ ಸೂಚಿಯಾಗಬಲ್ಲವು.

ಈ ಸಂಕಲನದ ಮತ್ತೊಂದು ಅತ್ಯುತ್ತಮ ಕತೆ 'ಠಾಕುರನ ಬಾವಿ'. ಠಾಕುರ್ ಮತ್ತು ಸಾಹೂ ಅವರ ಬಾವಿಗಳಲ್ಲಿ ನೀರು ಸೇದಿಕೊಳ್ಳಲು ಬಿಡದೆ ಇರುವುದರಿಂದ ಬಡಪಾಯಿಗಳಾದ ಅಸ್ಪೃಶ್ಯರು ಕೊಳಕಾಗಿರುವ ಹಾಗೂ ಮಲೆತಿರುವ ನೀರನ್ನು ಕುಡಿಯಬೇಕಾಗುತ್ತದೆ. ಇದಕ್ಕೆ ಕಾರಣ ಜೋಖೂ ಮತ್ತು ಅವನ ಹೆಂಡತಿ ಗಂಗಿ ಕೀಳು ಜಾತಿಗೆ ಸೇರಿದವರು ಎಂಬುದು. ಆದರೆ ನಿಜವಾಗಿಯೂ ಈ ಠಾಕುರ್ ಮತ್ತೂ ಸಾಹೂ ಮೇಲು ವರ್ಗ/ಜಾತಿಗೆ ಸೇರಿದವರೇ? ಗಂಗಿಯ ಮನಸ್ಸಿನಲ್ಲಿ ಕುದಿದೇಳುವ ಕ್ರಾಂತಿಯು ಭಾವನೆಯೇ ಇದಕ್ಕೆ ಉತ್ತರ ಒದಗಿಸುತ್ತದೆ. ಅವಳು ಈ ರೀತಿ ಯೋಚಿಸುತ್ತಾಳೆ. "ನಾವೇಕೆ ಕೀಳು? ಅವರೇಕೆ ಮೇಲು? ಅವರು ಕೊರಳಿಗೆ ದಾರವನ್ನು ಹಾಕಿಕೊಂಡಿದ್ದಾರೆ ಎಂಬ ಕಾರಣಕ್ಕೆ ಏನು? ಇಲ್ಲಿರುವ ಒಬ್ಬೊಬ್ಬರೂ ಇನ್ನೊಬ್ಬರನ್ನು ಮೀರಿಸುವಂತಹ ಕಳ್ಳ ಕೊರಮನೇ. ಕಳ್ಳತನ ಮಾಡುವವರು ಇವರು. ಕಪಟ ಮೋಸ ಮಾಡುವವರು ಇವರು. ಸುಳ್ಳು ಮೊಕದ್ದಮೆ ಹೂಡುವವರು ಇವರು. ಮೊನ್ನೆ ಮೊನ್ನೆಯಷ್ಟೇ ಒಂದು ಕುರಿಯನ್ನು ಕದ್ದಿದ್ದ. ನಂತರ ಅದನ್ನು ತಿಂದು ಹಾಕಿದ. ಆ ಪಂಡಿತನ ಮನೆಯಲ್ಲಿ ಹನ್ನೆರಡು ತಿಂಗಳೂ ಜೂಜು ನಡೆಯುತ್ತದೆ. ಈ ಸಾಹೂಜಿಯಂತೂ ತುಪ್ಪಕ್ಕೆ ಎಣ್ಣೆ ಕಲಬೆರಕೆ ಮಾಡಿ ಮಾರುತ್ತಾನೆ. ಚೆನ್ನಾಗಿ ದುಡಿಸಿಕೊಂಡು ದುಡ್ಡು ಕೊಡುವಾಗ ಅವರ ಪ್ರಾಣ ಹೋದಂತೆ ಆಡುತ್ತಾರೆ. ಇವರು ಯಾವ ವಿಷಯದಲ್ಲಿ ನಮಗಿಂತ ದೊಡ್ಡವರು?" ಕಾಯಿಲೆ ಬಿದ್ದಾಗ ಜೋಖೂ ಅದೇ ಕೊಳೆತ ನೀರನ್ನು ಕುಡಿಯಬೇಕಾಗಿ ಬಂದಾಗ ಪ್ರತಿಯೊಬ್ಬ ಪ್ರಾಮಾಣಿಕ ವ್ಯಕ್ತಿಯ ಹೃದಯವೂ ಆ ಮಲೆತು ನಿಂತಿರುವ ನೀರಿನಂತೆಯೇ ಮಲೆತು, ಕೊಳೆತು ಬಿಟ್ಟಿರುವ ಈ ಸಾಮಾಜಿಕ ವ್ಯವಸ್ಥೆಯನ್ನೇ

ಮನಸಾರೆ ನಿಂದಿಸುತ್ತವೆ. ಇದೇ ಪ್ರೇಮಚಂದರ ಕಲೆಯಲ್ಲಿ ಅಡಗಿರುವ ಶಕ್ತಿ. ನೊಂದವರ ಈ ವೇದನೆಯ ಕರೆಗೆ ಅವರು ನೀಡಿರುವ ಸಾಹಿತ್ಯಕ ಅಭಿವ್ಯಕ್ತಿಯು ಜಗತ್ತಿನ ಶ್ರೇಷ್ಠ ಸಾಹಿತಿಗಳ ಸಾಲಿಗೆ ಸೇರಿಸುತ್ತದೆ. ಇದೇ ರೀತಿಯ ಮತ್ತೊಂದು ಕತೆ 'ಹಾಲಿನ ಬೆಲೆ'.

ದೇಶದ ಕೋಟಿಗಟ್ಟಲೆ ದೀನದಲಿತರ ಬಾಳುವೆಯನ್ನು ಉತ್ತಮಪಡಿಸುವುದು, ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದೇ ಸ್ವಾತಂತ್ರ್ಯ ಎಂಬುದರ ನಿಜವಾದ ಅರ್ಥ ಎಂದು ಪ್ರೇಮಚಂದರು ಭಾವಿಸಿದ್ದರು. ವಾಸ್ತವಿಕ ಜೀವನದ ಆರ್ಥಿಕ ಮತ್ತು ಸಾಮಾಜಿಕ ಹಾಗೂ ಇನ್ನಿತರ ಪರಿಸ್ಥಿತಿಗಳ ಆಳವಾದ ವಿಶ್ಲೇಷಣೆ ನಮಗೆ ಅವರ ಕೃತಿಗಳಲ್ಲಿ ಸಿಗುತ್ತದೆ. ಸ್ವಾತಂತ್ರ್ಯದ ಪ್ರಶ್ನೆಯೊಂದಿಗೆ ರೈತರು, ಕೃಷಿ ಕಾರ್ಮಿಕರು, ಸ್ತ್ರೀಯರು, ದಲಿತರು ಮೊದಲಾದವರ ಇತರ ಪ್ರಶ್ನೆಗಳೊಡನೆ ಒಂದುಗೂಡಿಸಿ ನಮ್ಮ ಕಣ್ಣಮುಂದೆ ನಿಲ್ಲುವಂತೆ ಚಿತ್ರಿಸುತ್ತಾರೆ.

ಬ್ರಿಟಿಷರ ಆಡಳಿತದ ಬಗೆಗಿನ ಪ್ರತಿರೋಧಗಳು ಎರಡು ಬಾರಿ ವಿಫಲವಾದಾಗ ಜನರಲ್ಲಿ ಅದರಲ್ಲೂ ಬುದ್ಧಿಜೀವಿಗಳಲ್ಲಿ ನಿರಾಶಾವಾದ ಮನೆ ಮಾಡಿತ್ತು. ಹಿಂದೀ, ಉರ್ದೂ ಸಾಹಿತ್ಯಗಳಲ್ಲಿ ನಿರಾಶಾವಾದ, ರಹಸ್ಯವಾದ ಮತ್ತು ಪಲಾಯನವಾದಗಳ ಪ್ರವೃತ್ತಿ ಪ್ರಬಲವಾಗತೊಡಗಿತ್ತು. ಈ ಸಂದರ್ಭದಲ್ಲಿಯೂ ಕೂಡಾ ಪ್ರೇಮಚಂದರ ಬರವಣಿಗೆಯಲ್ಲಿ ಸಾಮಾಜಿಕ ಜವಾಬ್ದಾರಿಯ ಹೊಣೆಗಾರಿಕೆಯ ವಿಷಯವು ಜವಾಬ್ದಾರಿಯಾಗಿತ್ತು. ಅಂತೆಯೇ ಅವರು ತಮ್ಮ ಸಾಹಿತ್ಯಕ ಪರಂಪರೆಯನ್ನು ಉಳಿಸಿಕೊಂಡು ಬಂದುದು ಮಾತ್ರವಲ್ಲದೆ ಯುಗ ಸತ್ಯದತ್ತ ಹಾಗೂ ವಾಸ್ತವವಾದದತ್ತ ನಡೆದರು, ಪ್ರಗತಿಶೀಲ ಚಳುವಳಿಗೆ ಬುನಾದಿ ಹಾಕಿದರು, ಮೇಲೆ ವಿವರಿಸಿದ ಕತೆಗಳು ಹಾಗೂ ಉಳಿದ ಬಹುತೇಕ ಕತೆಗಳು ಈ ಧೋರಣೆಯನ್ನೊಳಗೊಂಡ ಕತೆಗಳಾಗಿವೆ.

ಧರ್ಮದ ಇತಿಮಿತಿಗಳು ಮತ್ತು ಕ್ಷುದ್ರತೆಗಳಿಂದಾಗಿ ಭಾರತೀಯ ಸಮಾಜದಲ್ಲಿ ಹುಟ್ಟಿಕೊಂಡಿರುವ ಜಾತಿ ವ್ಯತ್ಯಾಸಗಳು, ಸ್ಪೃಶ್ಯಾಸ್ಪೃಶ್ಯತೆಗಳು ಮತ್ತು ಮತ ವ್ಯಾಮೋಹ ಮೊದಲಾದ ಸಾಮಾಜಿಕ ಕೆಡುಕುಗಳ ದುಷ್ಪರಿಣಾಮಗಳನ್ನು ಈ ಸಂಕಲನದ ಎಲ್ಲಾ ಕತೆಗಳು ಶೋಧಿಸುತ್ತವೆ. ಧರ್ಮದ ಹೆಸರಿನಲ್ಲಿ ಅಸ್ಪೃಶ್ಯರ, ಸ್ತ್ರೀಯರ ಮತ್ತು ಬಡವರ ವಿಷಯದಲ್ಲಿ ನಡೆಸುವ ದುರ್ವ್ಯವಹಾರಗಳ ಅತ್ಯಂತ ಮಾರ್ಮಿಕ ಚಿತ್ರಗಳನ್ನು ಅವರ ಕತೆಗಳು ಕಟ್ಟಿಕೊಡುತ್ತವೆ. ಮತೀಯ ಭಾವನೆಗಳಿಂದ ರಾಷ್ಟ್ರೀಯ ಹಿತ ಹದಗೆಡುತ್ತದೆ ಎಂಬುದನ್ನು ಅಭಿವ್ಯಕ್ತಿಸುವ ಇಲ್ಲಿನ ಕತೆಗಳನ್ನು ಡಾ. ಎ. ಜಾನಕಿ ಅವರು ಹಲವಾರು ಇತಿಮಿತಿಗಳ ನಡುವೆಯೂ ತುಂಬಾ ಸರಳವಾಗಿ ಸುಂದರವಾಗಿ ಅನುವಾದಿಸಿ ಕೊಟ್ಟಿದ್ದಾರೆ. ಬರೆದಿದ್ದನ್ನೇ ಬರೆಯುತ್ತಾ ವಾಚ್ಯವಾಗಿಯೇ ಹೇಳಿ ಮುಗಿಸುವ ತಾನು ಕತೆಗಾರ ಎಂದು ಕರೆಸಿಕೊಂಡು ಹಠಾತ್ತನೇ ಪ್ರಸಿದ್ಧರಾಗಬೇಕೆಂಬ ಹಂಬಲದ ಈಗಿನ ಬಹಳಷ್ಟು ಲೇಖಕರಿಗೆ ಪ್ರೇಮಚಂದರ ಕತೆಗಳು ದಾರಿದೀಪವಾಗಬಲ್ಲವು. ಕನ್ನಡದ ಜಾಯಮಾನಕ್ಕೆ ತಕ್ಕಂತೆ ಅನುವಾದಿಸಿರುವ ಎ. ಜಾನಕಿಯವರು ಇನ್ನೂ ಅನುವಾದಗೊಳ್ಳದೆ ಇರುವ ಪ್ರೇಮಚಂದರ ಇತರೆ ಕಥೆ ಕಾದಂಬರಿಗಳನ್ನು ಅನುವಾದಿಸಲಿ. ಕನ್ನಡ ಸಾಹಿತ್ಯ ಲೋಕಕ್ಕೆ ಉತ್ತಮ ಕೊಡುಗೆ ನೀಡಲಿ.

●●

ಎಚ್. ದಂಡಪ್ಪ : ಸಹಾಯಕ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಡಿ.ಸಿ. ಕಂಪೌಂಡ್, ಧಾರವಾಡ-೧

## ಪುಸ್ತಕ ಪರಿಶೀಲನೆ

### ೧. ಹತ್ತಿರದ ಮಾತು : ಸತ್ಯನ್ ದೇರಾಜೆ

ಸುಮನಸಾ ವಿಚಾರ ವೇದಿಕೆ, ಜೊಕ್ಕಾಡಿ, ತಾ. ಸುಳ್ಯ, ದ.ಕ., ಪ್ರ.ಮು. ೨೦೦೩, ಪು. ೭೬, ರೂ. ೬೦/-

ಸತ್ಯನ್ ದೇರಾಜೆ ಕಳೆದ ಮೂರು ದಶಕಗಳಿಂದ ಕಾವ್ಯರಚನೆಯಲ್ಲಿ ತೊಡಗಿದ್ದಾರೆ. ಹಾಗಿದ್ದೂ, ಇದೀಗ ಅಷ್ಟೇ, ಅವರ ಮೊದಲ ಸಂಕಲನ `ಹತ್ತಿರದ ಮಾತು` ಪ್ರಕಟವಾಗುತ್ತಿರುವದು ನಿಜಕ್ಕೂ ಆಶ್ಚರ್ಯ ತರುವ ವಿಷಯ. (ನಮ್ಮ ಹಿಂದಿನ ತಲೆಮಾರಿನ, ಖ್ಯಾತ ಕವಿ ಡಾ. ಶಂಕರ ಮೊಕಾಶಿ ಪುಣೇಕರ ಅವರ ಪ್ರಥಮ ಸಂಕಲನ `ಮಾಯಿಯ ಮೂರು ಮುಖಗಳು` ಕೂಡ ಸುದೀರ್ಘ ಕಾದು ಕೂತ ನಂತರವೇ ಬೆಳಕಿಗೆ ಬಂದಿತ್ತಲ್ಲವೆ!

೧೯೯೪ ರಿಂದ ಸತ್ಯನ್ ಅವರು ದೃಷ್ಟಿಯಿಂದ ವಂಚಿತರು. ಹಾಗಿದ್ದೂ, ಕಣ್ಣು ಕಾಣದ ಸ್ಥಿತಿಯಲ್ಲೂ ಕಾವ್ಯರಚನೆಯಿಂದ ಹಿಂದೆ ಸರಿದಿಲ್ಲ. ("ನನಗೋ ಈಗ/ಕವಿತೆಯೇ ಕಣ್ಣು") ಲಿಪಿಕಾರ್ತಿ ಪತ್ನಿಯ ಸಹಕಾರದೊಂದಿಗೆ ಕಾವ್ಯರಚನೆ ಮುಂದುವರಿಸಿಯೇ ಇದ್ದಾರೆ; ಅಷ್ಟೇ ಅಲ್ಲ, ಗಮನಿಸಬೇಕಾದ ಪ್ರೌಢಿಮೆಯನ್ನು ಮೆರೆದಿದ್ದಾರೆ.

೧೯೭೪ ರಿಂದ ೨೦೦೨ ರಷ್ಟು ಸುದೀರ್ಘ ಅವಧಿಯ ರಚನೆಗಳು ಇಲ್ಲಿರುವದರಿಂದ, ಸ್ವಾಭಾವಿಕವಾಗಿ, ಇಲ್ಲಿ ಬೇರೆ ಬೇರೆ ಕಾಲಾವಧಿಯ ವಿಭಿನ್ನ ದೃಷ್ಟಿಕೋನಗಳಿವೆ, ವಿಭಿನ್ನ ತುಡಿತಗಳಿವೆ, ಆಯಾಮಗಳಿವೆ. ಅನಿಸಿಕೆ, ಚಿತ್ರಣ, ಅಭಿವ್ಯಕ್ತಿಸುವ ರೀತಿ ಈ ಎಲ್ಲವುಗಳಲ್ಲಿ ಕ್ರಮೇಣ ಪ್ರೌಢತ್ವದತ್ತ ಸಾಗುವ ಸ್ಪಷ್ಟ ಸೂಚನೆಗಳಿವೆ. ಆರಂಭದ ಒಂದು ಕವಿತೆ `ಬಾಲ ಕಾಗದ`ದಲ್ಲಿ ಸತ್ಯನ್ ಬರೆಯುತ್ತಾರೆ :

"ಆಕಾಶದಲ್ಲಿ ಮೋಡ ಕಂಡ ಹಾಗೆ / ಒಮ್ಮೆ ಅಪ್ಪ ಒಮ್ಮೆ ಅಮ್ಮ / ಅಣ್ಣ ತಮ್ಮ ಸೂರ್ಯ ಚಂದ್ರ / ಯಾವುದು ಬೇಕೋ ಅವರ ಹಾಗೆ / ನನ್ನ ನಿನ್ನ ಅವಳ ಹಾಗೆ / ಖಾಲಿ ಹಾಳೆಯಲಿ ಚಿತ್ತಾರ /ಕಾಮನ ವಿಧ ವಿಧ ಅವತಾರ."

ಇತ್ತೀಚಿನ ಒಂದು ಕವಿತೆ (`ಪ್ರತಿ ಸಲವೂ ಹೀಗೆ`)ಯಲ್ಲಿಯ ಬರಹ : "ಕ್ಷಣದಲ್ಲಿ / ಹಕ್ಕಿಗಳು ಮಾಯವಾಗಿ / ಗೆರೆಗಳೂ ಅಳಿಸಿ ಹೋಗಿ / ಕವನ ಕಣ್ಮರೆಯಾಗಿ /ಉಳಿಯಿತು / ಖಾಲಿ ಆಕಾಶದ ಹಾಳೆ / ಕಾಯುತ್ತೇನೆ / ಹಕ್ಕಿಗಳು ಮತ್ತೆ ಹಾರಬಹುದು / ಗೆರೆಗಳ ಎಳೆಯಬಹುದು / ಕವನ ಬರೆಯಬಹುದು."

ವಂಚಿತ ಖಾಲಿ ಹಾಳೆಯ ಖಾಲಿ ಗೀಚುಗಳ ಮಧ್ಯ ಪರಿಚಿತ ಏನೆಲ್ಲವನ್ನು ಕಲ್ಪಿಸಿಕೊಳ್ಳುವ ಸೀಮಿತ ನಿಲುವುಗಳಿಂದ, ಅಸ್ಪಷ್ಟದ (`ಸಾಲು ಹಾರಿದ ಹಕ್ಕಿಗಳು ಆಗಸದಲ್ಲೆಳೆದ ಗೆರೆಗಳು`) ಮಧ್ಯದಲ್ಲೂ ಸ್ಪಷ್ಟ, ಅಭಿವ್ಯಕ್ತಿಯು ಮತ್ತೆ ಮತ್ತೆ ಅರಳಿಕೊಳ್ಳುವ ಗಳಿಗೆಗಳಿಗಾಗಿ ಕಾಯುವ ಕವಿಯ ನಿರೀಕ್ಷೆಯ ಆಶಾಭಾವ ಗಮನಿಸಬೇಕಾದ ಬೆಳವಣಿಗೆ. (ನೆನಪಿಡಬೇಕು : ಸತ್ಯನ್ ಹೊರಗಣ್ಣು ದೃಷ್ಟಿವಂಚಿತ.) ಇದು ಸಾಧ್ಯವಾಗುವದು, ಒಂದು ಧ್ಯಾನಸ್ಥ ಸ್ಥಿತಿಯಿಂದ; ಕ್ರಮೇಣ ತನ್ನಲ್ಲಿಯೇ ಹರಳುಗಟ್ಟುವದರಿಂದ. ಕವಿಯ ಮಾತಿನಲ್ಲಿಯೇ ಹೇಳುವದಾದರೆ :

"ಶಬ್ದಗಳ ನಡುವಿನ ನಿಶ್ಶಬ್ದದನುಭಾವಕ್ಕೆ / ನಾನು ಬದ್ಧ" ಎಂಬ ಈ ಆರಂಭದ ನಿಲುವು : "ನೀರವದ ನನ್ನ ಮೌನ ಕಾಯುತ್ತ ಕೂರುತ್ತದೆ / ಕೂರುತ್ತ ಕೂರುತ್ತ ಕಾಯುತ್ತದೆ" ಎಂಬ ಭವ್ಯ ಮನಸ್ಥಿತಿಗೆ ಬಂದು ತಲುಪುತ್ತದೆ. ಎಂತಲೇ,

"ಆ ದಾರಿ ತಪ್ಪಾಗಿ ಅವನು ಹಿಡಿಯುವ ದಾರಿ / ಅಲೆಯುವನು ಹೀಗೇ ಮುಂದುವರಿಯುವನು / ಇದೇ ಸತ್ಯ, ಇದೇ / ಸಾರ್ವಕಾಲಿಕ ಸತ್ಯ" ಎಂಬ ಕವಿಯ ತೀರ್ಮಾನ ತುಂಬ ಸ್ವಾಭಾವಿಕವೆನಿಸುತ್ತದೆ. ಮೂವತ್ತು ವರುಷ ಕಾದ `ಮೌನ`, ಹೀಗೆ ಮತ್ತು ಇಷ್ಟು "ಹತ್ತಿರದ ಮಾತು" ಆಗಿ ಮಾರ್ಪಟ್ಟು ಪ್ರಕಟವಾದ ಪರಿ ಪ್ರಶಂಸಾರ್ಹ.

## ೨. ಶಬ್ದವಾಯಿತು ನಕ್ಷತ್ರ : ಧರಣೇಂದ್ರ ಕುರಕುರಿ

ಆಲೋಚನ ಪ್ರಕಾಶನ, ೯ನೇ ತಿರುವು, ಕಿತ್ತೂರ ರಾಣಿ ಚೆನ್ನಮ್ಮ ರಸ್ತೆ, ಗದಗ - ೫೮೨ ೧೦೧. ಪ್ರ.ಮು. ೨೦೦೪, ಪು. ೮೦, ರೂ. ೩೦/-

ತಮ್ಮ ೩೩ ವರುಷಗಳ ಕಾವ್ಯಬದುಕಿನಲ್ಲಿ ಧರಣೇಂದ್ರ ಕುರಕುರಿಯವರು ಪ್ರಕಟಿಸುತ್ತಿರುವ ೫ ನೆಯ ಸಂಕಲನ 'ಶಬ್ದವಾಯಿತು ನಕ್ಷತ್ರ'. ಕೃತಿಗಳ ಸಂಖ್ಯೆಯ ದೃಷ್ಟಿಯಿಂದ ರಚನೆಗಳಲ್ಲಿ ಹುಲುಸು ಇಲ್ಲದಿದ್ದರೂ, ಕೆಲವಾದರೂ ವೈಶಿಷ್ಟ್ಯಗಳು. ಪ್ರಕಟನೆಗಳುದ್ದಕ್ಕೂ ಏರಿಕೆಯ ಕ್ರಮದಲ್ಲಿರುವದು, ಧರಣೇಂದ್ರರನ್ನು ಸ್ವಾಗತಿಸಲು ಹಚ್ಚುತ್ತದೆ.

ಒಂದು ದೃಷ್ಟಿಯಲ್ಲಿ ಧರಣೇಂದ್ರ ಶ್ರೀಸಾಮಾನ್ಯನ ಒಳದನಿಯ ಕವಿ. ಸಾಮಾನ್ಯನ ಸಾಮಾನ್ಯ ಅನಿಸಿಕೆಗಳಿಗೆ, ಕಳವಳಗಳಿಗೆ, ಚಡಪಡಿಕೆಗಳಿಗೆ, ಅಸಹಾಯಕತೆಗಳಿಗೆ, ಕಾವ್ಯದ ರೂಪ ಕೊಡುವದು ಇಲ್ಲಿಯ ಕವಿಯ ಗಮನಿಸಬೇಕಾದ ಆಸಕ್ತಿ. ಈ ಆಸಕ್ತಿ ಈಗ ಒಂದು ಅನಿವಾರ್ಯ ಮನೋಧರ್ಮವಾಗಿರುವದನ್ನು ಈ ಸಂಗ್ರಹದ ಅನೇಕ ಕವಿತೆಗಳಲ್ಲಿ ಗುರುತಿಸಬಹುದು. (ಉದಾ. 'ಕತ್ತಲೆ', 'ಕಲ್ಲಪ್ಪ ಕವನ ಬಿತ್ತಿದ', 'ಜಗದಂಬಿ ಜಗದಾಗ ಜಾಹೀರಾ' ಇತ್ಯಾದಿ.) ಅನೇಕ ಬಾರಿ, ಈ ಮೇಲ್ಕಂಡ ತಳಮಳಗಳ, ತಲ್ಲಣಗಳ, ಇನ್ನೊಂದು ಮುಖವಾಗಿ, ಸಿಟ್ಟು, ಆಕ್ರೋಶಗಳೂ ಅಭಿವ್ಯಕ್ತಿ ಕಾಣುವದು ಸ್ವಾಭಾವಿಕ. (ಉದಾ. 'ಹೆಗ್ಗಣವಾಗಿ ಹೊಕ್ಕಾರಪ್ಪಾ', 'ನೆಪ್ಪ ಇರಲೆಪ್ಪ ನಿಮಗ', 'ಹೊಸಾ ಕಾಲ ಬಂತು' ಇತ್ಯಾದಿ.)

'ಶಬ್ದ ಜೀಕೀತಾವ ಜೇವರಿನೊಳಗ' ಇಲ್ಲಿ ಒಂದು ಉಲ್ಲೇಖಿಸಬೇಕಾದ ಕವಿತೆ : 'ಅವರ ಬೆವರ ಹನಿ ಆ ಹೊಲದ / ತುಂಬ ಉದುರಿದಾಗ / ಅಲ್ಲೇ. ಹಾಂ. / ಅಲ್ಲೇ ನನ್ನ ಶಬ್ದಗಳು ಜೀಕೀತಾವ / ಆ ಅನ್ನದಾತನ ಬಾಡಿದ ಮುಖದಿಂದ / ಪ್ರತಿಮೆಗಳು ಜಿಗದ ಬರತಾವ / ನಿಟ್ಟುಸಿರಿನೊಳಗ ಭಾಷೆ ಹುಟ್ಟತತಿ' ಎಂದು ಆರಂಭವಾಗುವ ಆಶಯ : 'ಕವಿತಾ ಎಲ್ಲಾ / ಕಳಚಿಟ್ಟು / ನಿರಾಭರಣ ಸುಂದರಿಯಾಗಿ / ಗದ್ದೆಯೊಳಗಿನ ಕೊಳದ ಬಾವಿಯ / ನೆಲೆಯಾದಳು.' ಎಂದು ಕೊನೆಗೊಳ್ಳುವಲ್ಲಿ ಕವಿತೆ ಒಂದು ಹೊಸ ಹೊಳಪನ್ನೇ ತೊಡೆದುಕೊಳ್ಳುತ್ತದೆ. 'ಸಾಲು ಮೂರು, ಮಾತು ನೂರು', 'ಕನಡ್ಯಾಗ' ಈ ರಚನೆಗಳೂ ಗಮನಿಸಬೇಕಾದಂಥವು.

ಆದರೆ, ಅಭಿವ್ಯಕ್ತಿಯ ಸಡಿಲುತನದಿಂದಾಗಿ ಕೆಲವು ಕವಿತೆಗಳು ಪೇಲವವಾಗುವದು ಬೇಸರದ ಸಂಗತಿ. (ಉದಾ. 'ಕರದಂಟೂ ಕವಿತೆಯೂ', 'ಜಿಡಗಿನರಮನೆ', 'ಕೂಗುವುದ ಮರೆತಿದೆ ಕೋಗಿಲೆ' ಇತ್ಯಾದಿ.) ಈ ಸಂಗ್ರಹದ ಮುಖ್ಯ ಕವಿತೆಯಾದ 'ಶಬ್ದವಾಯಿತು ನಕ್ಷತ್ರ' ಕವಿತೆಯ ಆಶಯ ಇನ್ನಷ್ಟು (ಭಿನ್ನವಾಗಿ?) ಪರಿಣಾಮಕಾರಿಯಾಗಿ ಅಭಿವ್ಯಕ್ತವಾಗಬೇಕಾಗಿತ್ತು.

**– ದೇಶಪಾಂಡೆ ಸುಬ್ಬರಾಯ, ನೆಲೆ, ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೫೮೦ ೦೦೮**

## ೩. ಸ್ತ್ರೀ ಕಥನ : ಡಾ. ಶೈಲಜ ಹಿರೇಮಠ

ಭುವನ ಪ್ರಕಾಶನ, ನುಡಿ. ಎಂ. ಪಿ. ಪ್ರಕಾಶ್ ನಗರ, ಹೊಸಪೇಟೆ - ೧. ಪ್ರ.ಮು. ೨೦೦೩, ಪು. ೧೪೪, ರೂ. ೭೫/-

ಇತ್ತೀಚಿನ ಬಹುತೇಕ ಸ್ತ್ರೀವಾದಿ ಚಿಂತನೆಗಳೆಲ್ಲ ಮಧ್ಯಮವರ್ಗದ ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳ ಸುತ್ತಲೇ ಗಿರಕಿ ಹೊಡೆಯುತ್ತಿರುವಾಗ ಇದಕ್ಕೆ ಭಿನ್ನವಾಗಿ ಚಿಂತಿಸುವ ಡಾ. ಶೈಲಜ ಹಿರೇಮಠ ನಮ್ಮ ಗಮನ ಸೆಳೆಯುತ್ತಾರೆ. ಪುರುಷಪ್ರಧಾನ ವ್ಯವಸ್ಥೆಯ ಹುನ್ನಾರಕ್ಕೆ ಬಲಿಯಾಗಿ ಧರ್ಮ, ದೇವರ ಹೆಸರಿನಲ್ಲಿ ಸಮಗ್ರ ಶೋಷಣೆಗೆ ಒಳಗಾದ ದಲಿತ ಮಹಿಳೆಯರ ಅನುಕ್ತ ಸತ್ಯಕಥನ ಇವರ ಅಧ್ಯಯನದ ವಸ್ತು. ಪ್ರಧಾನ ಸಂಸ್ಕೃತಿ ಧರ್ಮದ ಹೆಸರಿನಲ್ಲಿ ಮರೆಮಾಚಿದ್ದ ಸ್ತ್ರೀ ದೌರ್ಜನ್ಯದ ಕರಾಳ ಮುಖ ಶೈಲಜ ಅವರ ಸಂಶೋಧನೆಯಿಂದ ಅನಾವರಣಗೊಂಡಿದೆ. ಈ ಮೊದಲೆ 'ಪಾತರದವರು' ಕೃತಿಯಲ್ಲಿ ಹರಳುಗಟ್ಟಿದ್ದ ಇವರ ಸ್ತ್ರೀಸಂವೇದಿ ಚಿಂತನೆಗಳ ವಿಸ್ತರಣೆಯೆ 'ಸ್ತ್ರೀಕಥನ' ಲೇಖನಗಳು.

ಈ ಕೃತಿ ಎರಡು ಭಾಗಗಳಲ್ಲಿದ್ದು ಮೊದಲ ಭಾಗ ಸ್ವತಂತ್ರ ಸಂಶೋಧನ ಲೇಖನಗಳನ್ನೂ, ಎರಡನೆಯ ಭಾಗ ಸಂದರ್ಶನ ಲೇಖನಗಳನ್ನೂ ಒಳಗೊಂಡಿದೆ. ಇಲ್ಲಿಯ ಬಹುತೇಕ ಲೇಖನಗಳ ಹೆಚ್ಚುಗಾರಿಕೆಯಿರುವುದು ಲೇಖಕಿ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿರುವ ಮಾಹಿತಿ, ಹಾಗೂ ಸಮಸ್ಯೆಯನ್ನು ಸೂಕ್ಷ್ಮಗ್ರಹಿಕೆಯ ದೇಶಿಕಣ್ಣುಗಳಿಂದ ವಿಶ್ಲೇಷಿಸಿರುವ ವಿನೂತನ ವಿಧಾನದಲ್ಲಿ.

ಮೊದಲ ಲೇಖನದಲ್ಲಿ 'ಪಾತರದವರನ್ನು ಹಾಗೂ ಜೋಗತಿಯರನ್ನು ಅನುಲಕ್ಷಿಸಿ ವಿವಾಹ ಬಾಹಿರ ಸಂಬಂಧಗಳಲ್ಲಿ ಲಿಂಗಸಮಾನತೆಯ' ಪ್ರಶ್ನೆಯನ್ನು ಕೈಗೆತ್ತಿಕೊಂಡ ಲೇಖಕಿ ಇಂಥ ಸಂಬಂಧಗಳು ಹೆಣ್ಣಿಗೆ ನಿಕೃಷ್ಟತೆಯನ್ನು ಗಂಡಿಗೆ ಪ್ರತಿಷ್ಠೆಯನ್ನು ಆರೋಪಿಸುವ ಸಮಾಜದ ಬಗ್ಗೆ ಕಿಡಿಕಾರುತ್ತಾರೆ. ಆದರೆ ಇಂಥ ಸಂಬಂಧಗಳಲ್ಲೂ ಸಮಾಜಕ್ಕೆ ಮಾದರಿಯಾಗುವ ವಿಷಯಗಳಿರುವುದನ್ನು ಸಾಧಾರವಾಗಿ ನಿರೂಪಿಸಿದ್ದಾರೆ. ಪ್ರಧಾನ ಸಮಾಜದ ನೈತಿಕ ಮೌಲ್ಯವನ್ನು ಹುಸಿಗೊಳಿಸಿದ ಹುಕ್ಕೇರಿಯ ಅಮೀನಾ, ಹುಲಗುಂದದ ಹುರಿಗೆಮ್ಮ ಅವರ ಸಂಬಂಧಗಳು ಬದುಕಿನ ಹೊಸ ವ್ಯಾಖ್ಯಾನಗಳಾಗಿರುವುದನ್ನು ಗೌರವದಿಂದಲೇ ಗುರುತಿಸಿದ್ದಾರೆ.

ವೈದಿಕ ಪುರೋಹಿತಶಾಹಿ ಪುರುಷವ್ಯವಸ್ಥೆ ತನ್ನ ಅನುಕೂಲಕ್ಕೆ ತಕ್ಕಂತೆ ಸಂಹಿತೆಯನ್ನು ರೂಪಿಸಿಕೊಂಡು ಅದು ಹೇಗೆ ಮಹಿಳೆಯರ ಮೇಲೆ ದುರಾಕ್ರಮಣ ಮಾಡುತ್ತಿದೆ, ಹಿಂಸೆ ನೀಡುತ್ತಿದೆ ಎಂಬುದು 'ವಿವಾಹ-ವೈಧವ್ಯ-ವಾಟರ್' ಹಾಗೂ 'ದೇವಸ್ತ್ರೀಯರು' ಲೇಖನಗಳಲ್ಲಿ ಚಿತ್ರಿತವಾಗಿದೆ. ಸಾಂಸ್ಕೃತಿಕ ರಂಗಕ್ಕೂ ಲಿಂಗತಾರತಮ್ಯದ ಶಾಪ ತಟ್ಟಿರುವುದನ್ನು, ಹಾಗೂ ಮಹಿಳಾ ಕತೆಗಳನ್ನು ಸಾಮಾಜಿಕ ನೆಲೆಯಲ್ಲಿಟ್ಟು ನೋಡಬೇಕಾದ ಅಗತ್ಯವನ್ನು 'ಮಹಿಳಾ ಜನಪದ ಕಲೆಗಳು; ಹೊಸ ಹುಡುಕಾಟ' ಲೇಖನ ಪ್ರತಿಪಾದಿಸಿದೆ.

'ವಿಭಿನ್ನ ಸ್ತ್ರೀವಾದಗಳು : ದಲಿತ ಸ್ತ್ರೀವಾದದ ಅಗತ್ಯತೆ ಮತ್ತು ಪ್ರಸ್ತುತತೆ' ಮೇಲ್ಜಾತಿಯ ಮಧ್ಯಮವರ್ಗದ ಸ್ತ್ರೀವಾದಿಗಳು ವರದಕ್ಷಿಣೆ, ಮದುವೆ, ಉದ್ಯೋಗ, ಆಸ್ತಿಹಕ್ಕು, ವಿವಾಹ ವಿಚ್ಛೇದನ ಇತ್ಯಾದಿ ತಮ್ಮ ಸಮಸ್ಯೆಗಳನ್ನೇ ದೇಶದ ಸಮಸ್ತ ಮಹಿಳೆಯರ ಸಮಸ್ಯೆಯಾಗಿ ಬಿಂಬಿಸುತ್ತಿರುವುದನ್ನು ಲೇಖಕಿ ಖಂಡಿಸುತ್ತ ದಲಿತ ಹಾಗೂ ಬುಡಕಟ್ಟು ಸಮುದಾಯದ ಅಂತರಹಿತ ದಾರುಣ ಬದುಕಿನ ಪರಿಚಯವೇ ಇಲ್ಲದ ಇಂಥವರ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ದಲಿತ ಮಹಿಳೆಯರಲ್ಲೂ ಮೀಸಲಾತಿ ಸೌಲಭ್ಯ ಪಡೆದ ಸುಶಿಕ್ಷಿತ ದಲಿತ ಮಹಿಳೆಯ ಸಮಸ್ಯೆಗಳಿಗೂ ಸೌಲಭ್ಯ ವಂಚಿತ ಅಶಿಕ್ಷಿತ ದಲಿತ ಮಹಿಳೆಯ ಸಮಸ್ಯೆಗಳ ಸ್ವರೂಪಕ್ಕೂ ಇರುವ ಭಿನ್ನತೆಯ ಬಗ್ಗೆ ಯೋಚಿಸಿದ್ದಾರೆ.

'ಮಂತ್ರವಿದ್ಯೆ ಮತ್ತು ಮಹಿಳೆ' ಲೇಖನ ತನ್ನ ವಿನೂತನ ಒಳನೋಟದಿಂದಾಗಿ ನಮ್ಮ ಗಮನ ಸೆಳೆಯುತ್ತದೆ. ಮಂತ್ರವಿದ್ಯೆಯ ಆಂತರಿಕ ಅಸ್ತಿತ್ವದ ಚರ್ಚೆಯನ್ನು ಬದಿಗಿರಿಸಿ ಭೌತಿಕ ನೆಲೆಯನ್ನು ಮಹಿಳಾಪರ ನೆಲೆಯಲ್ಲಿ ವಿಶ್ಲೇಷಿಸಿದ ಈ ಲೇಖನದ ಮೂಲಕ ಲೇಖಕಿ ನಮ್ಮ ನಾಡಿನ ಸಾಂಸ್ಕೃತಿಕ ಅಧ್ಯಯನವನ್ನು ಶ್ರೀಮಂತಗೊಳಿಸಿದ್ದಾರೆ. ಹೀಗೆ ವಿಭಿನ್ನ ನೆಲೆಗಳಲ್ಲಿ ಮಹಿಳೆಯರ ಸ್ಥಿತಿಗತಿಯನ್ನರಿಯುವ ಪ್ರಯತ್ನ ಮುಂಬರುವ ದಿನಗಳಲ್ಲಿ ಹೊಸ ಹಾದಿಯನ್ನೇ ನಿರ್ಮಿಸಬಹುದು.

'ಸ್ವಾತಂತ್ರ್ಯ ಯುದ್ಧ : ಮಹಿಳಾ ಜನಪದ ಸಾಹಿತ್ಯ' ಲೇಖನವು ಕಿತ್ತೂರ ರಾಣಿ ಚೆನ್ನಮ್ಮ ಹಾಗೂ ಆಕೆಯ ಸೊಸೆ ಈರವ್ವ ಬ್ರಿಟಿಶರಿಗೊಡ್ಡಿದ ಪ್ರತಿರೋಧವನ್ನು ಚಿತ್ರಿಸುತ್ತದೆಯಾದರೂ ಆಂತರಿಕ ವೈರುಧ್ಯದ ವಿಷಯ ಪ್ರತಿಪಾದನೆಯಿಂದಾಗಿ ದುರ್ಬಲವಾಗಿದೆ. ಕೊಲೆ, ಆತ್ಮಹತ್ಯೆಗಳನ್ನು 'ವೀರ ಮರಣ' ಎಂದು ಕರೆಯುವುದರ ಔಚಿತ್ಯ ಪ್ರಶ್ನಾರ್ಹವಾಗಿದೆ. ದಕ್ಷಿಣ ಕನ್ನಡದ ಪಾಡ್ದನ 'ಸಿರಿ' ಮಹಾಕಾವ್ಯದ ನಾಯಕಿ ಸಿರಿಯ ಬಂಡುಕೋರ ವ್ಯಕ್ತಿತ್ವವನ್ನು ಲೇಖಕಿ 'ಸಿರಿ-ಸ್ತ್ರೀ ಚೈತನ್ಯ' ಲೇಖನದಲ್ಲಿ ಚಿತ್ರಿಸುವರಾದರೂ, ಮೌಲ್ಯಗಳ ಸಂಘರ್ಷವಿರುವ ಆ ಕಾವ್ಯದ ಸಮರ್ಥ ವಿಶ್ಲೇಷಣೆಯ ಕೊರತೆ ಎದ್ದು ಕಾಣುತ್ತದೆ.

ಇನ್ನು ಎರಡನೆಯ ಭಾಗ, ಅಥಣಿ ದೇವದಾಸಿ ವಿಮೋಚನಾ ಸಂಸ್ಥೆಯ ಅಧ್ಯಕ್ಷ ಬಿ. ಎಲ್. ಪಾಟೀಲ ಹಾಗೂ ರಂಗಭೂಮಿಯ ಅಂಗಳದಲ್ಲಿರುವ ಸುಭದ್ರಮ್ಮ ಮನ್ಸೂರರ ಜತೆಗಿನ ಸಂದರ್ಶನವನ್ನೊಳಗೊಂಡಿದೆ. ಈ ಲೇಖನಗಳು ದಲಿತ ಮಹಿಳೆಯ ಸ್ಥಿತಿ-ಗತಿ ಹಾಗೂ ಸಂಘಟನೆಯ ಬಗ್ಗೆ ಬೆಳಕು ಚೆಲ್ಲುತ್ತವೆ. ಒಟ್ಟಿನಲ್ಲಿ 'ಸ್ತ್ರೀ ಕಥನ', ಒಳಗೊಂಡ ದಟ್ಟ ಅನುಭವ ಸಾಮಗ್ರಿ ಹಾಗೂ ವಿಶಿಷ್ಟ ಒಳನೋಟದಿಂದಾಗಿ ಮಹಿಳಾ ಅಧ್ಯಯನದಲ್ಲಿ ಒಂದು ಹೊಸ ದಾರಿ ನಿರ್ಮಿಸಿದೆ.

## ೪. ಹೀಗೊಂದು ಟಾಪ್ ಪ್ರಯಾಣ : ಈರಪ್ಪ ಕಂಬಳಿ

ಚಾರ್ವಾಕ ಪ್ರಕಾಶನ, ೩-೧೫೮, ಜೀವನ್‌ಬೀಮಾನಗರ, ಬೆಂಗಳೂರು-೭೫, ಪ್ರ.ಮು. ೨೦೦೩, ಪುಟ ೧೬೬, ರೂ. ೫೦/-

'ಹೆಪ್ಪಾರಿಗುಂಟ' ಪ್ರಬಂಧ ಸಂಕಲನದ ಮೂಲಕ ಸಾಹಿತ್ಯಾಸಕ್ತರ ಗಮನ ಸೆಳೆದ ಈರಪ್ಪ ಎಂ. ಕಂಬಳಿಯವರು ಇದೀಗ 'ಹೀಗೊಂದು ಟಾಪ್ ಪ್ರಯಾಣ' ಪ್ರಬಂಧ ಸಂಕಲನದ ಮೂಲಕ ಮತ್ತೊಂದು ರಸಗವಳ ನೀಡಿದ್ದಾರೆ.

ನವೋದಯ ಕಾಲದಲ್ಲಿ ವಿರುಜವ್ವನದಲ್ಲಿದ್ದ ಪ್ರಬಂಧ ಸಾಹಿತ್ಯ ಪ್ರಕಾರ ದಿನಗಳೆದಂತೆ ರಸ ಕಳೆದುಕೊಳ್ಳುತ್ತ ತಣ್ಣಗಾಗುವ ಸ್ಥಿತಿಯಲ್ಲಿರುವಾಗ ಕಂಬಳಿಯವರಂಥ ಕೆಲ ಲೇಖಕರು ಅದಕ್ಕೆ ಉಸಿರೂಡುವ ಮೂಲಕ ಬೆಚ್ಚಗಿಡುತ್ತಿದ್ದಾರೆ.

ಇಲ್ಲಿಯ ೨೧ ಪ್ರಬಂಧಗಳಲ್ಲಿ 'ಯಾಕಾಗಿ ಮಳಿ ಹ್ವಾದವೋ' ಎಂಬ ಕರುಣಪ್ರಧಾನ ಹಾಗೂ 'ಒಂದು ಕೆರೆಯ ವೃತ್ತಾಂತ' ಎಂಬ ಗಂಭೀರ ಪ್ರಬಂಧಗಳನ್ನುಳಿದು ಉಳಿದೆಲ್ಲವುಗಳು ತಮ್ಮ ಲಾಲಿತ್ಯಮಯ ನಡಿಗೆಯಿಂದ ನಮ್ಮನ್ನು ಮುದಗೊಳಿಸುತ್ತವೆ, ಚಿಂತನೆಗೂ ಪ್ರೇರೇಪಿಸುತ್ತವೆ. ನಗೆಯುಕ್ಕಿಸುತ್ತಲೆ ಆಲೋಚನೆಗೂ ತೊಡಗಿಸುವುದು ಈ ಪ್ರಬಂಧಗಳ ವೈಶಿಷ್ಟ್ಯ.

'ಮ್ಯಾಜಿಕ್ ಸ್ಟಿಕ್'ನಂತಿರುವ ಮೆಜೆಸ್ಟಿಕ್, ಶ್ವಾನ ಪ್ರಪಂಚದ ಸ್ವಾರಸ್ಯ ಬಿಚ್ಚಿಡುವ 'ಶುನಕೋಪಾಖ್ಯಾನ' ಪ್ರಬಂಧಗಳಿಂದ ಪ್ರಾರಂಭವಾಗಿರುವ ಇಲ್ಲಿಯ ಲೇಖನಗಳು ತಮ್ಮ ವಿಸ್ತಾರ ವೈವಿಧ್ಯದಿಂದಾಗಿ, ಗ್ರಾಮೀಣ ಸೊಗಡಿನಿಂದಾಗಿ, ವಿಶಿಷ್ಟ ಒಳನೋಟದಿಂದಾಗಿ ನಮ್ಮನ್ನಾವರಿಸುತ್ತವೆ. ಹಿತಶತ್ರುವಿನಂತಹ ಗೆಳೆಯ, ತನ್ನ ಅಪದ್ಧತನದಿಂದಲೇ ಖ್ಯಾತನಾದ ಹಳ್ಳಿಯ ಹುಂಬ, ಸರಸ ವಿನೋದಗಳಿಂದ ತುಂಬಿ ತುಳುಕುವ ಪ್ರಾಥಮಿಕ ಶಾಲೆ, ತಲೆಕೂದಲನ್ನು ಕಡಿಮೆಯಾಗಿಸುತ್ತಲೆ ತಲೆಯೊಳಗೆ ಏನೆಲ್ಲ ತುಂಬಿ ಕಳಿಸುವ ಆಯುಷ್ಕರ್ಮ ಶಾಲೆ, ಗೀತಾಳಿಂದ ಘಾತಿಸಲ್ಪಟ್ಟ ವಿಫಲ ಪ್ರೇಮಿ, ನಾಗರಿಕ ಬದುಕಿನ ಒಡಲೊಳಗೆ ಕೈಯಿಕ್ಕಿ ಕಲಮಲಗೊಳಿಸುತ್ತಿರುವ ಟಿ.ವಿ., ಬಸ್ಸಿನ ಒಳಹೊರಗೆ ಬಾವಲಿಗಳಂತೆ ಜೋತಾಡುವ ವೈವಿಧ್ಯಮಯ ಮನೋಭಾವದ ಜನ, ಪಾನಗೋಷ್ಠಿಯಲ್ಲಿ ಫಜೀತಿ ಸೃಷ್ಟಿಸುವ ಕವಿ-ಗಾಯಕ, ಕೆಲ ದಿನಗಳ ಮಟ್ಟಿಗಾದರೂ ತನ್ನ ಅಗೋಚರ ರಿಮೋಟಿನಿಂದ ಕುಡುಕ-ಘಟಿಂಗರನ್ನು ನಿಯಂತ್ರಿಸುವ ಶಬರಿಮಲೆಯ ಅಯ್ಯ(ಯ್ಯ)ಪ್ಪ, ಬಿದ್ದರೂ ಮೀಸೆ ಮಣ್ಣಾಗದ 'ಕಿರುಕುಳ ಬಾಸು', ತಲೆ ಚಿಟ್ಟು ಹಿಡಿಸಿದ ಕೇಸರಿಬಾತು, ನಮ್ಮ ನಾಲಿಗೆಯನ್ನಾಳುವ ಮಸಾಲೆ ದೋಸೆ, ಪಾಬ್-ಇಲು ಸೃಷ್ಟಿಸಿದ ಮೊಟ್ಟೆಲು ಇತ್ಯಾದಿ ಏನೆಲ್ಲ ವಿವರಗಳು ಈ ಪ್ರಬಂಧಗಳಲ್ಲಿ ತುಂಬಿ ತೊನೆಯುತ್ತಿವೆ.

ಈರಪ್ಪ ಕಂಬಳಿಯವರಿಗೆ ಬರೆಹ ಸಿದ್ಧಿಸಿದೆ. ಆದರೆ ಬರೆಹದ ಔಚಿತ್ಯದ ಬಗ್ಗೆ ಅವರು ಇನ್ನೂ ಹೆಚ್ಚು ಯೋಚಿಸಬೇಕಿದೆ. ಇವರು ಬಳಸುವ ಕೆಲ ಬೀಭತ್ಸ ಪದಗಳು ಓದುವ ರುಚಿಗಳನ್ನು ಕೆಡಿಸಿಬಿಡುತ್ತವೆ. ಈ ಲೇಖಕರು ಇದನ್ನು ತಡೆದರೆ ಓದುಗ ಇನ್ನೂ ಹೆಚ್ಚು ಸಂತಸಗೊಂಡಾನು.

'ಉಂಡಿ ಕದ್ದವರು' ಪ್ರಬಂಧವನ್ನೇ ಹೋಲುವ ಲಲಿತ ಪ್ರಬಂಧವೊಂದು ದಶಕಗಳ ಹಿಂದೆ ಕಸ್ತೂರಿ ಮಾಸಪತ್ರಿಕೆಯಲ್ಲಿ ಪ್ರಕಟವಾಗಿತ್ತು. ರೇಲ್ವೆ ಪಾರ್ಸಲ್‌ನಲ್ಲಿ ಬಂದ ವಾರಸುದಾರರಿಲ್ಲದ ತಿಂಡಿಯ ಪೊಟ್ಟಣವನ್ನು ಒಡೆದು ಸಿಹಿ ತಿಂಡಿ ತಿಂದ 'ಪಾರ್ಸಲ್ ರೂಂ'ನ ಸಿಬ್ಬಂದಿ ನಂತರ ಅದು ಮುಂಬಯಿ ಶ್ರೀಮಂತರ ಕಸದ ತೊಟ್ಟಿಯಿಂದಾದ್ದುದೆಂದು ತಿಳಿದು ಫಜೀತಿಯಾದದ್ದು, ಆ ಲೇಖನದ

ಕಥಾವಸ್ತುವಾಗಿತ್ತು. ಈ ಸಂಕಲನದ 'ಉಂಡಿ ಕದ್ದವರು' ಪ್ರಬಂಧಕ್ಕೆ ಅದೇ ಪ್ರೇರಣೆಯಾಗಿರಬಹುದು. ಸಂಕಲನದಲ್ಲಿ ಮೆಚ್ಚಬೇಕಾದ ಮಾತೆಂದರೆ ಇಲ್ಲಿಯ ಬಹುತೇಕ ಪ್ರಬಂಧಗಳಲ್ಲಿ ತುಂಬಿ ತುಳುಕುವ ಅದಮ್ಯ ಜೀವನಪ್ರೀತಿ, ಮಾನವೀಯ ಕಳಕಳಿ, ಭೂತಾನುಕಂಪೆ. ಮುಂದಿನ ದಿನಗಳಲ್ಲಿ ಇವರ ಬರೆವಣಿಗೆ ಯಾವ ಜಾಡನ್ನು ಹಿಡಿಯುತ್ತದೆ ಎಂಬುದನ್ನು ಕುತೂಹಲದಿಂದ ಕಾಯಬೇಕಿದೆ.

—ಚಂದ್ರಶೇಖರ ವಸ್ತ್ರದ, ಬೆಳಗು, ಜೇಲೇರಿ ಆಯಿಲ್ ಮಿಲ್ ಹತ್ತಿರ, ಮಸಾರಿ, ಗದಗ - ೫೮೨ ೧೦೧

## ೫. ಜನರೊಂದಿಗೆ ಪೊಲೀಸರು : ಡಾ. ಡಿ. ವಿ. ಗುರುಪ್ರಸಾದ

ಗೆಳೆಯರ ಬಳಗ, ಕೆಲಗೇರಿ ರಸ್ತೆ, ಧಾರವಾಡ-೫೮೦ ೦೦೧, ಪ್ರ.ಮು. ೨೦೦೩, ಪು. ೧೭೬, ರೂ. ೬೦/-

ಡಾ. ಡಿ. ವಿ. ಗುರುಪ್ರಸಾದ ಅವರ 'ಜನರೊಂದಿಗೆ ಪೊಲೀಸರು' ಭಾಗ-೪ ಮತ್ತು ಹಿಂದಿನ ಮೂರು ಭಾಗಗಳನ್ನು ಓದಿದಾಗಲೂ ಪೊಲೀಸ್ ಅಧಿಕಾರಿ ಟಿ. ನರಸಪ್ಪನವರು ಹಾಡುತ್ತಿದ್ದ 'ಪೊಲೀಸರೆಂದರೆ ಭಯವೇಕೆ? ನಮ್ಮನ್ನು ಕಂಡರೆ ದೂರವದೇಕೆ?' ಕವನದ ಚಿತ್ರ ಕಣ್ಮುಂದೆ ಬರುತ್ತದೆ. ನಮ್ಮೊಳಗಿವವನೊಬ್ಬ ಪೊಲೀಸ್ ಪೇದೆ ಆಗುತ್ತಾನೆ ಅಥವಾ ಅಧಿಕಾರಿ ಆಗುತ್ತಾನೆ. ಈ ಅರಿವು ಸಮವಸ್ತ್ರದವನನ್ನು ಕಂಡಾಗ ಮರೆಯಾಗುತ್ತದೆ. ಭಯ ಮತ್ತು ದೂರವಾಗಿ ಉಳಿದ ವಿಚಾರಗಳು ತಾನಾಗಿಯೇ ತೆರೆದುಕೊಳ್ಳುತ್ತದೆ.

ಮೇಲಿನ ವಿಚಾರದ ವಿಷಯವನ್ನು ಪ್ರಧಾನವಾಗಿಸಿಕೊಂಡು, ಪೊಲೀಸ್ ಮತ್ತು ಸಾರ್ವಜನಿಕರ ಮಧ್ಯ ಪರಸ್ಪರ ವಿಶ್ವಾಸ ಗಳಿಸಿಕೊಳ್ಳುವ ಮತ್ತು ಉಳಿಸಿಕೊಳ್ಳುವ ಕುರಿತು ಪ್ರಸ್ತಾವ ಬಹಳಷ್ಟು ಕಡೆ ಈ ಕೃತಿಯಲ್ಲಿದೆ. ಪೊಲೀಸ್ ಇಲಾಖೆಯ ಕಾನಸ್ಟೇಬಲ್ ಹುದ್ದೆಗೆ ನೇಮಕಾತಿ ಕುರಿತ ವಿಷಯ ಪ್ರಾರಂಭವಾಗಿ, ಸಾಮಾನ್ಯವಾಗಿ ಘಟಿಸುವ ಅಪರಾಧಗಳ ವಿಷಯ ವಿಶ್ಲೇಷಣೆಯೊಂದಿಗೆ ಮುಕ್ತಾಯವಾಗುವ ಒಂದು ಭಾಗವಿದೆ, ಮತ್ತೊಂದು ಭಾಗ ಪ್ರಶ್ನೋತ್ತರ ಮಾಲಿಕೆಯಿಂದ ಕೂಡಿದೆ.

ಗುರುಪ್ರಸಾದರಲ್ಲಿ ವಿಷಯವನ್ನು ಎಲ್ಲರಿಗೂ ಮನದಟ್ಟಾಗುವಂತೆ ತಿಳಿಸುವ ಜಾಣ್ಮೆಯಿದೆ. ಹೀಗಾಗಿ ಇಲ್ಲಿ ಪ್ರಸ್ತಾಪಿಸಿದ ಎಲ್ಲ ವಿಷಯಗಳು ಅತಿ ಸಾಮಾನ್ಯ ಓದುಗನಿಗೂ ಸರಳವಾಗಿ ತಿಳಿಯುತ್ತವೆ. ಬ್ರಿಟಿಶ್ ಪೊಲೀಸ್ ವ್ಯವಸ್ಥೆ ಓದಿದಾಗ, ನಮ್ಮಲ್ಲಿ ಹೀಗಿದ್ದರೆ ಎಷ್ಟು ಚೆನ್ನ ಅಂತ ಅನಿಸುತ್ತದೆ. ಈ ದೇಶದಲ್ಲಿ ಚಾಲ್ತಿಯಿರುವ ಯಾವುದೇ ಆಡಳಿತ ವ್ಯವಸ್ಥೆ ಬ್ರಿಟಿಶರ ಬಳುವಳಿ. ನಮ್ಮಲ್ಲಿ ಪೊಲೀಸ್ ವ್ಯವಸ್ಥೆ ಕೂಡಾ ಇದಕ್ಕೆ ಹೊರತಲ್ಲ. ಮತ್ತೆ ನಮ್ಮಲ್ಲೇಕೆ ಪೊಲೀಸರೆಂದರೆ ಭಯ, ದೂರ ಉಳಿಯುವಿಕೆ? ಇದಕ್ಕೂ ಅವರು ಈ ಪುಸ್ತಕದಲ್ಲಿ ಪರಿಹಾರ ಹೇಳಿದ್ದಾರೆ.

ಭಾಷಾಪ್ರಭುತ್ವವಿರುವ ಗುರುಪ್ರಸಾದರು ವಿಷಯದ ಒಳಗನ್ನು ಕಥೆಯಂತೆ ಚಿತ್ರಿಸುತ್ತಾ, ಅದರೊಳಗೇ ಕಾನೂನಿನ ಅರಿವು ಮೂಡಿಸುತ್ತಾರೆ. ನಮ್ಮಲ್ಲಿನ ಪೊಲೀಸ್ ವ್ಯವಸ್ಥೆ ಮತ್ತು ಸಾರ್ವಜನಿಕರ ಸ್ಪಂದನೆ, ಅಪರಾಧಗಳು-ಶಿಕ್ಷೆ, ಕಾನೂನಿನ ಸಾಮಾನ್ಯ ಜ್ಞಾನ ಈ ಎಲ್ಲ ವಿಷಯಗಳು ತಿಳಿಯಬೇಕಾದರೆ, ಗುರುಪ್ರಸಾದರ 'ಜನರೊಂದಿಗೆ ಪೊಲೀಸರು' ವಿಷಯದ ನಾಲ್ಕೂ ಭಾಗಗಳನ್ನು ಓದಬೇಕು.

—ಶ್ರೀಪತಿ ಮಂಜನಬೈಲು, ಅನಂತಮುರಳಿ, ೧೬೫, ಗುರುಪ್ರಸಾದನಗರ, ಬೆಳಗಾವಿ - ೮

## ೬. ಮಹಾದೇವ ಶೆಟ್ಟರ ಕವಿತೆಗಳು

ಶಿವಪ್ರಕಾಶ ಪ್ರಕಾಶನ, ಬಸೇಕ್ರಾಸ್, 'ಬ' ವಿಭಾಗ, ಬಸವೇಶ್ವರನಗರ, ಹಾವೇರಿ. ಪ್ರ.ಮು. ೨೦೦೩. ಪು.೬೯.ರೂ.೩೫/-

ಪ್ರಸ್ತುತ ಕವನ ಸಂಕಲನ ಮಹಾದೇವ ಶೆಟ್ಟರ ಮರಣಾನಂತರ ಪ್ರಕಟವಾದ, ಒಂದು ಬದುಕಿನ ಪರಿಸರವನ್ನು ಗಂಭೀರವಾಗಿ ಪರಿಗಣಿಸುವ ಉತ್ತಮ ಕೃತಿ. ಮಹಾದೇವ ಶೆಟ್ಟರ ಕವನಗಳನ್ನು ಓದುವುದೇ ಒಂದು ಖುಶಿ. ಜೀವನದ ಏನೆಲ್ಲ ಮಜಲುಗಳನ್ನು ನೇರವಾದ ಶಬ್ದಗಳಲ್ಲಿ ದಾಖಲೀಕರಿಸಿರುವುದೇ ಮಹಾದೇವ ಶೆಟ್ಟರ ಕವನಗಳು. ಶೆಟ್ಟರ ಪ್ರಕಾರ ಕವನವೆಂಬುದು ಜೀವನದಿಂದ ಬೇರೆ ಅಲ್ಲ. ಇದನ್ನೇ

'ನಾನೇಕೆ ಬರೆಯಲಿ ಕವನ / ಈ ಸುಂದರ ಜೀವನವನ್ನು / ಬದುಕುತ್ತಿರಲು?'

ಎಂದು ಪ್ರಶ್ನಿಸುತ್ತಾರೆ. ಹನಿಗವನವೇ ಇರಲಿ ಇಡಿಗವನವೇ ಇರಲಿ ಕವನರಚನೆಗಾಗಿ ಮಹಾದೇವರ ಶೆಟ್ಟರಲ್ಲಿ ತಿಣುಕಾಟವಿಲ್ಲ. ಸೃಷ್ಟಿ ಹಾಗೂ ಜೀವನವಿಧಾನಗಳ ಸ್ಪಷ್ಟ ಅನುಭವ ಶಬ್ದದ ಸಾಲುಗಳಾಗಿ ಮೂಡುತ್ತವೆ :

'ಸೃಷ್ಟಿಯ ವಿನ್ಯಾಸವೇ / ಬಯಲು. ಬೆಟ್ಟ. ಕಾಡು-ಮೇಡು / ಭಾವನೆಗಳ ವಿನ್ಯಾಸವೇ / ನಡೆ, ನುಡಿ, ಹಾಡು-ಪಾಡು.'

ಕವನ ರಚನೆಯ ಶಿಸ್ತನ್ನು, ಚೌಕಟ್ಟನ್ನು ಇವರ ಕವನಗಳಲ್ಲಿ ಗುರುತಿಸಬಹುದಾಗಿದೆ. ಅನುಭವದ ದಟ್ಟತೆಯಿಂದಾಗಿ, ಶಬ್ದಗಳು, ಕವನದ ಸಾಲುಗಳು ಸರಾಗವಾಗಿ ಮೂಡಿಬಂದಿವೆ.

ಮಹಾದೇವ ಶೆಟ್ಟರ ಕವನಗಳಲ್ಲಿ ಸ್ಪಷ್ಟತೆಯಿದೆ. ಕ್ಲೀಷೆಯಿಲ್ಲ, ವಿವರಗಳಿವೆ, ಸಂಕೇತವಿಲ್ಲ, ಶಬ್ದಾಡಂಬರವಿಲ್ಲ. ಹೀಗಾಗಿ ಓದುಗರ ಮನಸ್ಸಿಗೆ ತಟ್ಟುತ್ತದೆ. ಅವರು ಯಾವುದೇ ಅನುಭವವನ್ನು ಹಗುರವಾಗಿ ಸ್ವೀಕರಿಸುವುದಿಲ್ಲ.

ಈ ಸಂಕಲನದ ಕವಿತೆಗಳಲ್ಲಿ ಯಾವುದೇ ಕವನವನ್ನು ಉಪೇಕ್ಷಿಸುವಂತಿಲ್ಲ. ಹಾಗೆಯೇ ಕವನದ ಪ್ರತಿ ಸಾಲು, ಪ್ರತಿ ಶಬ್ದ ಅಷ್ಟೇ ಆವಶ್ಯಕ, ಗಂಭೀರ. ಯಾವುದನ್ನೂ ಅನಾವಶ್ಯಕವೆಂದು ಪರಿಗಣಿಸುವಂತಿಲ್ಲ. ಇವರ ಪ್ರತಿಯೊಂದು ಕವನದಲ್ಲಿ ಅನುಭವದ ಹಿನ್ನೆಲೆಯಿದೆ. ಸಾಮಾಜಿಕ, ರಾಜಕೀಯ ಶೋಷಣೆಯನ್ನು ಸಹ ಮಹಾದೇವ ಶೆಟ್ಟರು ಗಂಭೀರವಾಗಿ ಪರಿಗಣಿಸಿದ್ದಾರೆ.

'ಪೇಟೆಯಲ್ಲಿ
ಸತ್ಯ ಹರಿಶ್ಚಂದ್ರನಿಗೆ
ಚಾಕು-ಚೂರಿಗಳು ಎದುರಾಗುತ್ತವೆ'

ಎಂಬ ಕವನದ ಸಾಲುಗಳಲ್ಲಿ, ಅಂತೆಯೇ 'ಆಗದು ಕ್ರಾಂತಿ', 'ಮೌಢ್ಯ', 'ಸ್ಥಿತಿ' ಮುಂತಾದ ಕವನಗಳು ವೈಚಾರಿಕ ನೆಲೆಯಲ್ಲಿ ರಚಿತವಾಗಿರುವುದು ಕಂಡುಬರುತ್ತದೆ. ಬಾಳಿಗೆ ಬೆಳಕಾಗುವ ಆಶಯದೊಂದಿಗೆ ಆರಂಭವಾದ ಧರ್ಮಗಳ ಬಗ್ಗೆ ಬರೆಯುತ್ತ 'ಧರ್ಮದ ಹತ್ತಿಗಿಡಗಳು ಬೆಳೆದು ಹೂವರಳಿ ನಕ್ಕಾವು ಹತ್ತಿಯೊಳಗಿಂದ. ಆದರೆ ಮುಂದೆ ತತ್ವದ ಎಳೆಗಳು ಅತ್ತಿತ್ತ ಪಸರಿಸಿ ಎತ್ತಬೇಕತ್ತ ಹರಡಿ ಒಂದಕ್ಕೊಂದು ತೊಡಕಾಗಿ ಈಗ ಬಿಡಿಸಲು ಬಾರದೆ ಕಗ್ಗಂಟಾಗಿವೆ' ಎನ್ನುವುದರ ಮೂಲಕ ಧರ್ಮದ ಹುಟ್ಟು ಹಾಗೂ ಬೆಳವಣಿಗೆಯೊಳಗಿನ ವಿಪರ್ಯಾಸವನ್ನು ಸಮರ್ಪಕವಾಗಿ ಗುರುತಿಸಿದ್ದಾರೆ.

## ೨. ಮೀರಾ ಪದಾವಲಿ : ಮ. ಸು. ಕೃಷ್ಣಮೂರ್ತಿ

ನವಭಾರತೀ ಪ್ರಕಾಶನ, ಸರಸ್ವತಿಪುರಂ, ಮೈಸೂರು-೯ ಪ್ರ.ಮು. ೨೦೦೩, ಪು. ೧೦೪, ರೂ. ೫೦/-

ಮೀರಾಬಾಯಿ ಸಂತಳಷ್ಟೇ ಅಲ್ಲ, ಕವಯಿತ್ರಿಯೂ ಸಹ. ಮೀರಾಬಾಯಿ ಶ್ರೀಕೃಷ್ಣನನ್ನು ಕುರಿತು ಭಜನೆಗಳನ್ನು ಹಿಂದೀ ಭಾಷೆಯಲ್ಲಿ ಬರೆದಿದ್ದರೂ ಭಾರತದುದ್ದಕ್ಕೂ ಹಿಂದೀ ಹಾಗೂ ಹಿಂದಿಯೇತರ ಭಾಷಿಕರೆಲ್ಲರಿಗೂ ಚಿರಪರಿಚಿತವಾದ ಹೆಸರು. ಮೀರಾ ಭಜನೆಗಳು ಮೀರಾಳ ಅಂತರಾಳದಿಂದ ಬಂದ ಕೃಷ್ಣಗಾಥೆ. ಶ್ರೀಕೃಷ್ಣನನ್ನು ಬೇಡುವ, ಕೃಷ್ಣನನ್ನು ಕಾಡುವ, ಕೃಷ್ಣನ ಹೆಗ್ಗಳಿಕೆಯನ್ನು ಪ್ರತಿಪಾದಿಸುವ ಈ ಗೀತೆಗಳು ಮೂಲಭಾಷೆಯಿಂದಲೇ ಭಾರತೀಯರೆಲ್ಲರಿಗೂ ಚಿರಪರಿಚಿತ. ಈ ಗೀತೆಗಳನ್ನು ಕನ್ನಡದಲ್ಲಿ ತರಬಯಸುವ ಡಾ. ಮ. ಸು. ಕೃಷ್ಣಮೂರ್ತಿ ಅವರ ಪ್ರಯತ್ನ ಅಭಿನಂದನೀಯ. ಈಗಾಗಲೇ ತುಲಸೀದಾಸರ 'ರಾಮಚರಿತ ಮಾನಸ'ವನ್ನು, ಕಬೀರರ 'ಪದಾವಲಿ'ಯನ್ನು ಅಂತೆಯೇ ಸೂಫೀ ಪ್ರೇಮಕಾವ್ಯವನ್ನು ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕೃತಿಯಲ್ಲಿ ಮೀರಾಬಾಯಿಯ ೨೪೩. ಪದಗಳನ್ನು ಕನ್ನಡಕ್ಕೆ ಕಾವ್ಯಾತ್ಮಕವಾಗಿ ಅನುವಾದಿಸಿ ಕೊಟ್ಟಿದ್ದಾರೆ. ಇವುಗಳ ಮೂಲಕ

ಮೀರಾಬಾಯಿಯ ಜೀವನ, ವಿಚಾರ, ಆಶೋತ್ತರಗಳು ಗಮನಕ್ಕೆ ಬರುತ್ತವೆ. ಬಹುಶಃ ಮೀರಾಳ ಕವನಗಳಲ್ಲಿ ಭಾವುಕತೆಗಿಂತ ವಾಸ್ತವತೆ ಹೆಚ್ಚು. ಸಂಸ್ಕೃತಿಯನ್ನು, ಸಂಚಿಕೆಗಳನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳುವ ಜಾಯಮಾನ ಮೀರಾಬಾಯಿಯಲ್ಲಿಲ್ಲ. ತನ್ನೆಲ್ಲ ಭಾವನೆಗಳನ್ನು ನೇರವಾಗಿ ಕವನವಾಗಿಸುವ ಕಲೆಗಾರಿಕೆ ಅವಳದು. ಈ ಕವನಗಳಲ್ಲಿ ವೇದನೆಯಿದೆ, ವಿರಹ ಭಾವನೆಯಿದೆ, ನಿವೇದನೆಯಿದೆ.

'ನೆಲಸೆನ್ನ ಮನದಲ್ಲಿ ನಂದಲಾಲ,
ಮೋಹನ ಮೂರುತಿ, ಶ್ಯಾಮಲಾಕೃತಿ, ನಯನವೋ ವಿಶಾಲ'

ಕೃಷ್ಣಮೂರ್ತಿ ಅವರ ಅನುವಾದ ಸತ್ವಯುತವಾಗಿದೆ. ಕನ್ನಡ ಭಾಷೆಯ ಜಾಯಮಾನಕ್ಕೆ ಅನುಗುಣವಾಗಿ ಮೀರಾಭಜನೆಗಳ ಭಾವವನ್ನು ಅರಿತು ಅನುವಾದ ಮಾಡಲಾಗಿದೆ. ಹೀಗಾಗಿ ಅನುವಾದವೂ ಸಹ ಮೂಲ ರಚನೆಯಂತೆ ಓದಿಗೆ ದಕ್ಕುತ್ತದೆ. ಅನುವಾದಕ್ಕಾಗಿ ಕೇವಲ ಗ್ರಂಥಸ್ಥವಾದ, ವ್ಯಾಕರಣಶುದ್ಧವಾದ ಭಾಷೆಯನ್ನು ಮಾತ್ರ ಬಳಸದೆ ಆಡುಗನ್ನಡದ ನುಡಿಗಳನ್ನು, ನುಡಿಗಟ್ಟುಗಳನ್ನು ಬಳಸಿರುವುದು ಅನುವಾದದ ವೈಶಿಷ್ಟ್ಯ. ಹೀಗಾಗಿ ಅನುವಾದಿತ ಕವನಗಳು ಓದುಗರಿಗೆ ತೀರ ಸಮೀಪ ಎನ್ನಿಸುತ್ತವೆ. 'ಛಪ್ಪನ್ನ ಕೋಟಿ ದಿಟ್ಟಣೆಗರು ಬಂದರು ತನುಮನವ ನೀವಾಳಿಸುವೆ ಸಾರಿ ಸಾರಿ' ಎಂಬ ಕವನದ ಸಾಲುಗಳು ತೀರ ಪರಿಚಿತ ರಚನೆಗಳು ಎಂದೆನಿಸುತ್ತವೆ.

'ಆರ ಅಂಕೆಯಲಿ ನಾನಿರಲೊಲ್ಲೆ / ಒಂದನಾಡಿದರೆ ನಾ ಲಕ್ಷ ಆಡಬಲ್ಲೆ
ಅತ್ತೆ ಗಟವಾಣಿ ನಾದಿನಿಯ ಹರಕಿಲ್ಲ ಎಲ್ಲೆ / ಆರಿಗೆ ಪೇಳುವುದು ಅಡಗಿಹುದೆನ್ನ ಸೊಲ್ಲೆ'

ಇಲ್ಲಿಯ ವಸ್ತು ವಿವರಣೆ ಹಾಗೂ ಭಾಷೆ ತೀರ ನಮ್ಮದೇ ಎನ್ನಿಸುವಂತೆ ಭಾಸವಾಗುತ್ತದೆ. ಮೀರಾಬಾಯಿಯ ಕವನಗಳ 'ಎನ್ನ ಬಿನ್ನಪವ ಲಾಲಿಸೊ' ಎಂಬ ಸಾಲಿನಲ್ಲಿ ಬಿನ್ನಹವಿದೆ. 'ಆರ ಅಂಕೆಯಲಿ ನಾನಿರಲೊಲ್ಲೆ' ಎಂಬಲ್ಲಿ ಧಿಕ್ಕಾರವಿದೆ. 'ಎಂತು ಬದುಕುವೆನೆ ಸಖಿ, ಹರಿಯಿಲ್ಲದೆ ಎಂತು ಬದುಕುವೆನೆ' ಎನ್ನುವಾಗ ವಿರಹವಿದೆ. 'ಮೊದಲೇಕೆ ತಡೆಯಲಿಲ್ಲ ರಾಣ, ಬೇಕಾದರೆ ಹೊಡೆ, ಬಡಿ, ಬಿಡು ನಾನಿರಲಾರೆ ರಾಣ,' ಎಂಬಲ್ಲಿ ಪ್ರತಿಭಟನೆಯಿದೆ. 'ನನ್ನವ ಗಿರಿಧರ ಗೋಪಾಲ, ಬೇರಾರೂ ಅಲ್ಲ. ತಲೆಯ ಮೇಲೆ ನವಿಲುಗರಿ' ಎಂಬಲ್ಲಿ ವರ್ಣನೆಯಿದೆ. 'ನಾ ವಿರಹದ ಹುಚ್ಚಿ, ಆರೂ ಅರಿಯರೆನ್ನ ನೋವ ನೋಡಾ' ಎಂಬಲ್ಲಿ ಉನ್ಮಾದವಿದೆ. ಒಟ್ಟಿನಲ್ಲಿ ಮೊದಲ ಕವನದಿಂದ ಕೊನೆಯ ಕವನದ ವರೆಗೆ ಮೀರಾಬಾಯಿಗೆ ಅನುರಾಗವಿದೆ. ಅನುರಾಗದ ಉತ್ಕಟತೆ ಬೇರೆಲ್ಲ ಭಾವನೆಗಳಿಗೆ ಎಡೆಮಾಡಿಕೊಟ್ಟಿರುವುದು ವ್ಯಕ್ತವಾಗುತ್ತದೆ. ರಾಷ್ಟ್ರಾದ್ಯಂತ ಹಿಂದೀ ಭಜನೆಗಳ ಮುಖಾಂತರ ಹೆಸರಾದ ಮೀರಾಬಾಯಿಯ ಕವನಗಳನ್ನು ಕನ್ನಡದಲ್ಲಿ ಉತ್ತಮವಾಗಿ ತಂದಿರುವುದಕ್ಕೆ ಕೃಷ್ಣಮೂರ್ತಿಯವರು ಅಭಿನಂದನಾರ್ಹರು.

—ಡಾ. ಅಂಕದ ಮುರಿಗೆಪ್ಪ, ಮುಖ್ಯಸ್ಥರು, ಕನ್ನಡವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

## *೮. ದೇವರು ಅಳುತಾನ* : ಕಪ್ಲಿ ಸಣ್ಣ ಹನುಂತ

ಯುವಕರ ಸಂಘ(ರಿ.), ರಾಮನಗರ, ಹಗರಿಬೊಮ್ಮನಹಳ್ಳಿ-೫೮೩ ೨೧೨.ಪ್ರ.ಮು.೨೦೦೩. ಪು.೫೪, ರೂ.೨೫/-

ಗ್ರಾಮೀಣ ಭಾಷೆಯನ್ನೇ ಇಡಿಯಾಗಿ ಬಳಸಿರುವ ಕಥಾಸಂಕಲನಗಳು ತೀರಾ ಕಡಿಮೆ. ಇಂಥ ಸಂಕಲನಗಳಲ್ಲಿ ಕಪ್ಲಿ ಹನುಮಂತ ಅವರ 'ದೇವರು ಅಳುತಾನ'ವೂ ಒಂದು. ಇಲ್ಲಿಯ ಕಥೆಗಳನ್ನು ಓದುತ್ತ ಹೋದಂತೆಲ್ಲ ಇವು ನಮ್ಮ ಸುತ್ತಮುತ್ತ ಇಂಥವೂ ನಡೆದಿವೆ/ನಡೆಯುತ್ತಿವೆ ಎಂದೇ ನಮಗೆ ಭಾಸವಾಗುತ್ತದೆ. ಸಂಕಲನದ ಮುಖ್ಯ ಕಥೆಗಳಲ್ಲಿ 'ಒಂದಾದ ದೇವರು ಅಳುತಾನ' ಕಥೆಯ ಕೊನೆಯ ವಾಕ್ಯವೃಂದ– 'ಒಂದಾನೊಂದು ಕಾಲ್ದಾಗ ನನ್ ಗುಡ್ಯಾಗ ಇಪ್ಪತ್ತನಾಲ್ಕು ಗಂಟೇನೂ ಗಂಟೆಯ ಶಬುದ ತುಂಬಿರ್ತಿತ್ತು. ಭಕ್ತ್ರು ಗಿಜಿ-ಗಿಜಿ ಅಂಬಂಗ ಕಲೀತಿದ್ರು. ತಾನು ದಿನಾ ಪಂಚಾಮರುತದಿಂದ ಮೈ ತೊಳ್ಕೊಂಡು... ನಗ್ತಾ ನಗ್ತಾ ಇರ್ತಿದ್ಡೆ. ಆದ್ರೆ ಇವಾಗ ನನ್ ಪರಿಸ್ಥಿತಿ ಎಲ್ಲಿಗೆ ಬಂದೋತಲ್ಲ ಅಂತ

ಈರ್ಲಿಂಗಪ್ಪ ಒಂದೇ ಸಮ್ನೆ ಬಾಯಿ-ಬಾಯಿ ಬಡ್ಕಂಡು ಹೊಯ್ಕಂಬಾಕತ್ಯಾನ' (ಪು.-೪) ಓದುತ್ತ ಈರ್ಲಿಂಗಪ್ಪನೊಂದಿಗೆ ನಾವೂ ಅಳುವಂತಾಗುತ್ತದೆ.

ನಿಲುಕದ ನಕ್ಷತ್ರ ಈ ಸಂಕಲನದ ಅತ್ಯಂತ ಪ್ರಭಾವಿ ಕತೆ. ಕುಡುಕನ ಮಗ ಶಂಕ್ರ ಹಳ್ಳಿಯಿಂದ ಪೇಟೆಗೆ ಹೋಗಿ ವಿದ್ಯಾವಂತನಾಗಿ ಮನೆಗೆ ಬರುವ ತನಕ ಕಥೆ ಓದಿಸಿಕೊಳ್ಳುತ್ತಲೇ ಹೋಗುತ್ತದೆ. ಕಥೆಯಿಂದ ಕಥೆಗೆ ಬೆಳೆಯುತ್ತ ಬಂದ ಕಥೆಗಾರರು ಇಲ್ಲಿ ಕಥೆಯನ್ನು ಕಾವ್ಯವಾಗಿಸಿದ್ದಾರೆ. ಶಂಕ್ರನ ಓದಿಗಾಗಿ ಅವನ ತಾಯಿ ಪಟ್ಟ ಶ್ರಮ ಈ ಕೆಳಗಿನ ಸಾಲುಗಳಲ್ಲಿ ಮಡುಗಟ್ಟಿದೆ. `ಶಂಕ್ರನನ್ನು ಕಂಡ ಸಾಂತವ್ವನಿಗೆ ನಿಧಿ ಸಿಕ್ಕಷ್ಟು ಸಂತೋಷವಾತು. ಶಂಕ್ರ ಕೈ, ಕಾಲು ತೊಳ್ಕೊಂಡು ಉಂಡು `ಎಮ್ಮೆಗಳು ಕಾಣ್ತಾ ಇಲ್ಲಲ್ಲವಾ?' ಎಂದು ಪ್ರಶ್ನಿಸಿದ.

ಸಾಂತವ್ವ 'ನನ್ ತಾಳಿಸಾಮಾನ, ಬುಗುಡಿ, ಎಮ್ಮೆಗಳು ನಿನ್ನ ಓದುಸಾವರ ಸಲುವಾಗಿ ಮಾರಿಬುಟ್ಟೆ. ಅವು ಹೋದ್ರ ಹೋಗ್ಲಿ ಬಿಡು. ನೀನು ನಾವು ಕನಸು ಕಂಡಂಗ ಓದಿಬುಟ್ಟಿ. ಇನ್ನೇನು ಕೆಲಸ ಸಿಕ್ಕಿಬುಟ್ರ ಜೀವ್ನ ಸಾಗಸಬೋದ್ದು'. (ಪುಟ-೨೯)

ಅಂತೆಯೇ ಓದಿಯೂ ಹಣ-ಶಿಫಾರಸು ಇಲ್ಲದೆ ಕೆಲಸ ಸಿಗುವಂತಿಲ್ಲ ಎಂಬ ಪ್ರಾಮಾಣಿಕ ಅರಿವು ಶಂಕ್ರನಿಗೆ ಇರುವಂತೆ ನಮಗೂ ಇರುವುದರಿಂದ ಶಂಕ್ರ ಮತ್ತು ಅವನ ತಾಯಿಯ ಭಾವನೆ, ಅನುಭವಗಳಲ್ಲಿ ನಾವೂ ಪಾಲುದಾರರಾಗಿ ಬಿಡುತ್ತೇವೆ.

ನಾವು ಅನುದಿನವೂ ನೋಡುವ ಘಟನೆಗಳು ಮತ್ತು ಸಮಸ್ಯೆಗಳನ್ನೇ ಸ್ವೀಕರಿಸಿ ಕಥೆಗಳನ್ನಾಗಿ ಮಾರ್ಪಡಿಸುವ ಕಥೆಗಾರರ ತಂತ್ರ, ಶೈಲಿ, ನಿರೂಪಣೆ ನಿಜಕ್ಕೂ ಅದ್ಭುತ. ಗ್ರಾಮೀಣ ಸೊಗಡಿನ ಇಂಥ ಕಥೆಗಳು ಮತ್ತೂ ಬರಲಿ ಎಂಬ ಭರವಸೆಯನ್ನು ಮೂಡಿಸುವ ಈ ಸಂಕಲನದ ಮುದ್ರಣ, ವಿನ್ಯಾಸ ಚೆನ್ನಾಗಿದೆ. ಬಳ್ಳಾರಿ ಸುತ್ತಮುತ್ತಲಿನ ಇವರ ಭಾಷೆ ಕರ್ನಾಟಕಾದ್ಯಂತ `ಇವು ನಮ್ಮೂರಿನಲ್ಲಿಯೂ ಇವೆ' ಎನ್ನುವಷ್ಟರ ಮಟ್ಟಿಗೆ ತಾಜಾ ಆಗಿವೆ: ಇಂಥ ಕತೆಗಳು ಸದಾ ನಮ್ಮವೇ ಆಗಿವೆ.

## ೯. ತಾಳಪಲ್ಲಿ ವೆಂಕಯ್ಯ : ಡಾ. ದಸ್ತಗೀರಸಾಬ ದಿನ್ನಿ

ಯುವಕರ ಸಂಘ, ರಾಮನಗರ, ಹಗರಿಬೊಮ್ಮನಹಳ್ಳಿ - ೫೮೩ ೨೧೨, ಪ್ರ.ಮು. ೨೦೦೪, ಪು. ೭೬, ರೂ. ೪೦/-

ಇದು ಆರ್ಯ ವೈಶ್ಯ ಜನಾಂಗದ `ಮರೆಯಲಾಗದ ಮಹಾನುಭಾವರು' ಪರಿಚಯ ಪುಸ್ತಕ ಮಾಲೆಯ ಎರಡನೆಯ ಕೃತಿ. ದಿನ್ನಿ ತಾಳಪಲ್ಲಿ ವೆಂಕಯ್ಯನವರು ಮೂಲತಃ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಹೊಕ್ರಾಣಿಯವರು. ಬಯಲಾಟಗಳನ್ನು ಆಡಿಸುವುದಕ್ಕಾಗಿ ದಿನ್ನಿ ಗ್ರಾಮಕ್ಕೆ ಬಂದ ಇವರು ಮುಂದೆ ಅದನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಬಾಳಿ ಬೆಳಗಿದ್ದಾರೆ. ಅವರು ಬಯಲಾಟ ಆಡಿಸುವ ತಮ್ಮ ಹವ್ಯಾಸದೊಂದಿಗೆ ಅದ್ಭುತ ಸಾಹಿತ್ಯಸೃಷ್ಟಿಯನ್ನೂ ಮಾಡಿದ್ದಾರೆ. ವೆಂಕಯ್ಯ ಕವಿ ಬಯಲಾಟ ಮತ್ತು ಸಾಹಿತ್ಯ ಎರಡರಲ್ಲೂ ಪ್ರಸಿದ್ಧಿ ಹೊಂದಿದ್ದರು. ಅವರು ರಚಿಸಿದ ಸಟೀಕಾ ಶಬ್ದಮಂಜರಿ ಕೋಶ ಅಪರೂಪದ ಕೃತಿ. ಇದು ಇನ್ನೂ ಹಸ್ತಪ್ರತಿಯಲ್ಲಿದ್ದು, ಅದನ್ನು ಪ್ರಕಟಿಸುವ ಬಗ್ಗೆ ದಸ್ತಗೀರಸಾಬ್ ಅವರು ಬರೆದದ್ದು ಕಾರ್ಯರೂಪಕ್ಕೆ ಬರಬೇಕಿದೆ. ವೆಂಕಯ್ಯನವರ ಸಾಹಿತ್ಯಕೃತಿಗಳಲ್ಲಿ ಅವರ ತತ್ವಪದಗಳಿಗೆ ವಿಶಿಷ್ಟ ಸ್ಥಾನವಿದೆ. ಲೇಖಕರು ಅವನ್ನು ಚೆನ್ನಾಗಿ ವಿವರಿಸಿದ್ದಾರೆ.

## ೧೦. ಪೂರ್ವಾಂಚಲದಲ್ಲಿ ಕೆಲವು ದಿನಗಳು : ಪ್ರೇಮಾ ಭಟ್

ಶ್ರೀ ಪ್ರೇಮಸಾಯಿ ಪ್ರಕಾಶನ, ಗುರುಪ್ರಸಾದ, ೮೪೫, ೪ ನೇ ಮೇನ್, ವಿಜಯನಗರ, ಬೆಂಗಳೂರು - ೪೦. ಪ್ರ.ಮು. ೨೦೦೨, ಪು. ೭೨, ರೂ. ೪೦/-

ಪ್ರವಾಸ ಕಥನ ಒಂದು ಮುಖ್ಯವಾದ ಅಭಿವ್ಯಕ್ತಿ ಮಾಧ್ಯಮ. ದೇಶ ಸುತ್ತಬೇಕೆಂಬವರಿಗೆಲ್ಲ ಇಂಥ ಪ್ರವಾಸ ಕಥನ ಒಳ್ಳೆಯ ಸಾಧನ. ಕಥೆಗಾರ್ತಿ ಪ್ರೇಮಾ ಭಟ್ ಪ್ರವಾಸ ಕಥನ ಲೇಖಕಿಯಾಗಿಯೂ

ಇಲ್ಲಿ ಗಮನಸೆಳೆದಿದ್ದಾರೆ. ಅಸ್ಸಾಂ ಪ್ರವಾಸದ ತಮ್ಮ ಅನುಭವಗಳನ್ನು ಕರ್ಮವೀರದಲ್ಲಿ ಪ್ರಕಟಿಸಿದ್ದರು. ಈಗ ಅದು ಪುಸ್ತಕ ರೂಪದಲ್ಲಿ ಬಂದಿದೆ. ತಮ್ಮ ಪ್ರವಾಸದ ಉದ್ದೇಶ, ತಾವು ನೋಡಬೇಕೆಂದು ಬಯಸಿದ, ನೋಡಿದ ಸಂಗತಿಗಳನ್ನು ವಿವರವಾಗಿ ಬರೆದಿದ್ದಾರೆ. ರೈಲಿನಲ್ಲಿ ಅವರು ಪತ್ರಿಕೆ ಓದುವ ವರ್ಣನೆ ತುಂಬಾ ಮೋಹಕವಾಗಿದೆ. ಇಸ್ಪೀಟ್ ಆಟದ ಹುಡುಗರ ಮನಃಸ್ಥಿತಿ ತಿಳಿದು ಲೇಖಕಿಗೆ ನೋವಾದಂತೆ ಓದುಗರಿಗೂ ಆಗುತ್ತದೆ. ಲೇಖಕಿ ತಮ್ಮ ಮಗನೊಂದಿಗೆ ಸೃಷ್ಟಿಸಿದ ಗಾದೆಗಳು, ಅವುಗಳ ಒಸ್ಸೆಲೆಗಳು ಮತ್ತೆ ಮತ್ತೆ ಓದಿಸಿಕೊಳ್ಳುತ್ತವೆ. ಕೋಲ್ಕಾತಾದ ವಿಮಾನ ನಿಲ್ದಾಣದ ವಿವರವಂತೂ ಕಣ್ಣಮುಂದೆ ನಿಲ್ಲುತ್ತದೆ. ಮಿಲಿಟರಿ ಪಾರ್ಟಿಯ ಗಮ್ಮತ್ತು, ಅಲ್ಲಿ ಲೇಖಕಿ ಜ್ಯೂಸ್ ಕುಡಿದ ಪರಿ ಇತ್ಯಾದಿ ಆಕರ್ಷಕ ವರ್ಣನೆಗಳಿವೆ. ಅರುಣಾಚಲದ ಬಗ್ಗೆ, ಅಲ್ಲಿಯ ಜನರ ಆರೋಗ್ಯ ಮತ್ತು ಸೌಂದರ್ಯದ ಬಗ್ಗೆ ಸಾಕಷ್ಟು ವಿವರಗಳಿವೆ. ರುಕ್ಮಿಣಿ ಅರುಣಾಚಲದವಳು, ಅವಳ ಅತಿಶಯ ಸೌಂದರ್ಯ ಮತ್ತು ಉದ್ದ ಕೇಶರಾಶಿಗೆ ಮಾರುಹೋದ ಶ್ರೀಕೃಷ್ಣ ಅವಳನ್ನು ಅಪಹರಿಸಿದ್ದ ಎಂದು ಅಲ್ಲಿಯ ಜನ ಈಗಲೂ ನಂಬಿದ್ದು, ಆ ಭಯದಿಂದ ಉದ್ದನೆಯ ಕೂದಲಿರುವ ಸುಂದರ ಹುಡುಗಿಯರ ತಲೆ ಕೂದಲನ್ನು ಅಶುಭ ಸಂಕೇತವೆಂದು ಭಾವಿಸುವ ಪರಂಪರೆ ಈಗಲೂ ಇದೆ ಎನ್ನುತ್ತಾರೆ. ಈ ಕೃತಿ ಹಲವಾರು ಉತ್ತಮ ಚಿತ್ರಗಳೊಂದಿಗೆ ಸಾಕಷ್ಟು ಮಾಹಿತಿ ನೀಡುತ್ತದೆ.

– ಜಿ. ಟಿ. ಶ್ರೀಧರ ಶರ್ಮ, ತ್ಯಾಗರಾಜ ವಿಸ್ತರಣೆ, ಅಜ್ಜಂಪುರ-೫೭೭ ೫೪೭, ತಾ. ತರೀಕೆರೆ

## ೧೧. ಅರಿವು : ವಿಶ್ವನಾಥ ಬಾಳಗಿ

ಬಾಳಗಿ ಪ್ರಕಾಶನ, ಬೀಳಗಿ - ೫೮೭ ೧೧೬ (ಬಾಗಲಕೋಟ), ಪ್ರ.ಮು. ೨೦೦೩. ಪು. ೭೧. ರೂ. ೩೫/-

ಶಿಕ್ಷಕ ಸಾಹಿತಿ ವಿಶ್ವನಾಥ ಬಾಳಗಿಯವರ ಪ್ರಸ್ತುತ ಸಂಗ್ರಹದಲ್ಲಿ ೫೫ ಕವನಗಳಿವೆ, ಬಹುಪಾಲು ಕವನಗಳಲ್ಲಿ ಮಾನವೀಯತೆಯ ದ್ಯೋತಕವಾದ ಅರಿವು-ಮರೆವುಗಳ ಬಗೆಗೆ ಚಿಂತನೆ ಮಾಡುತ್ತ ಅಧ್ಯಾತ್ಮದತ್ತ ಬೆರಳು ತೋರಿಸುವದರೊಂದಿಗೆ ಕವಿ ಸಜ್ಜನಿಕೆ ಮೆರೆಯುತ್ತಾರೆ.

`ಬಾಹ್ಯಾಡಂಬರ ಬಾವಿಯ ಒಳಗೆ / ಮಾನವ ಮಂಡೂಕ ಕೂತಿದೆ ಕೆಳಗೆ / ಜ್ಞಾನ ಸಾಗರ ಇರುವುದು ಹೊರಗೆ / ಅರಿವು ಮೂಡದು ಅರಿಯುವ ವರೆಗೆ` (ಅರಿವು)

ಹತ್ತು ರೂಪಾಯಿ ಇದ್ದರೆ ಹೈದರಾಬಾದ ಕೊಳ್ಳುತ್ತೇನೆಂದು ಬಾಹ್ಯಾಡಂಬರ ತೋರುವ ಅಹಂಕಾರಿಗಳಿಗೆ ಕವಿ ಅರಿವಿನ ಎಚ್ಚರಿಕೆ ಕೊಡುತ್ತಾರೆ. ಜಗತ್ತು ಬಹು ವಿಶಾಲವಾಗಿದೆ. ನಮ್ಮ ತಿಳಿವಳಿಕೆ, ಜ್ಞಾನ, ಭೌತಿಕ ಸಂಪತ್ತು ಬೃಹತ್ ಜಗತ್ತಿನೆದುರು ತೃಣ ಸಮಾನ ಎಂದು ವಿನಯಪೂರ್ವಕ ತಿಳಿದುಕೊಳ್ಳುವುದೇ ಮಾನವನ ಮಹತ್ತು. ಇದು ಈ ಕವನದ ಗುರಿ.

ಸಮಾಜದಲ್ಲಿ ತಲೆ ಎತ್ತಿ ನಿಂತಿರುವ ಹಲವಾರು ಗರ್ವದ ಧ್ವನಿಗಳಿಗೆ ಕವಿ ಪ್ರಶ್ನೆಯಿಟ್ಟಿದ್ದಾರೆ. ಶಿಕ್ಷಕ-ಕವಿಯಾದುದರಿಂದ ಶೈಕ್ಷಣಿಕ ಕವನಗಳನ್ನೂ ರಚಿಸಿದ್ದಾರೆ.

`ಹಣದ ಮಹಿಮೆ` ಕವನದಲ್ಲಿ ಹಣವಿದ್ದಾಗ ಮಾತ್ರ ಬಂಧು ಬಳಗ ಗೆಳೆಯರು, ಇಲ್ಲದಾಗ ಎಲ್ಲಿಹರೊ? ಎಂದು ವ್ಯಂಗ್ಯವಾಗಿ ಛೇಡಿಸಿದ್ದಾರೆ. ಕವಿಯ ವಾಸ್ತವ್ಯ, ಹುಟ್ಟು, ದುಡಿಮೆ ಹಳ್ಳಿಯ ಪರಿಸರದಲ್ಲಿರುವುದರಿಂದ ಜನಪದ ಭಾವ ಭಾಷೆಯನ್ನು ಆವಾಹಿಸಿಕೊಂಡ `ಅಕ್ಕನ ಮಗಳು`, `ನನ್ನ ಹೆಂಡತಿ` ಮುಂತಾದವುಗಳಲ್ಲಿ ಗೇಯತೆಯಿದೆ. ಕೊನೆಯಲ್ಲಿ ಕೆಲವು ಚುಟುಕುಗಳನ್ನೂ ಕೊಟ್ಟಿದ್ದಾರೆ :

'ನೌಕರಿ ಪಡೆದವ ಪಾಸಾಗಿದ್ದ ಮಾಡಿ ಮಾಡಿ ಕಾಪಿ
ಈಗ ಕಚೇರಿಯಲ್ಲಿ ಹಾಕುತ್ತಾನೆ ಮೋಡಿ ಮಾಡಿ ಟೋಪಿ.'

`ಅರಿವು` ಬಾಳಗಿಯವರ ಪ್ರಥಮ ಸಂಕಲನ. ಪ್ರಾರಂಭದಲ್ಲಿ ಎಲ್ಲರಿಗೂ ಬಾರದಿರುವ ಕಾವ್ಯದೃಷ್ಟಿಯ ಅರಿವು ಇವರಿಗೂ ಅಲ್ಲಲ್ಲಿ ಬಾರದಿರುವುದು ಕಾಣಬಹುದು. ಅದು ಗಟ್ಟಿಗೊಳ್ಳಬೇಕಾದರೆ

ಅವ್ಯಾಹತ ಓದು, ಪ್ರಸಿದ್ಧ ಕವಿಗಳನ್ನು ಅಭ್ಯಾಸ ಮಾಡುವುದು ಅವಶ್ಯವಿದೆ. ಭಾಷಾ ಸಂಪತ್ತಿನೊಂದಿಗೆ ಭಾವ ಸಂಪತ್ತೂ ಮೇಳವಿಸಿದರೆ ಮುಂಬರುವ ಕಾವ್ಯ ಗಟ್ಟಿಯಾಗಲು ಸಾಧ್ಯ. ಅವರಲ್ಲಿ ಪ್ರತಿಭೆಯೂ ಜೀವದ್ರವವಾಗಿ ಹೊಮ್ಮಬೇಕು. ಅದನ್ನು ಅಭಿವೃದ್ಧಿಗೊಳಿಸಿಕೊಳ್ಳುವುದು ಕವಿಯ ಜವಾಬ್ದಾರಿ.

— ಎಂ. ಡಿ. ಗೋಗೇರಿ, ನವ ಅಯೋಧ್ಯಾನಗರ, ಹುಬ್ಬಳ್ಳಿ-೫೮೦ ೦೨೪

## ೧೨. ಕುವೆಂಪು ಕಾದಂಬರಿ : ಎರಡು ಅಧ್ಯಯನಗಳು : ಟಿ. ಪಿ. ಅಶೋಕ

ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ - ೫೭೭ ೪೧೭, ಪ್ರ.ಮು. ೨೦೦೪, ಪು. ೭೨, ರೂ. ೫೫/-

ಆಧುನಿಕ ಕನ್ನಡ ವಿಮರ್ಶೆಗೆ ಹೊಸ ನೆಲೆಗಳನ್ನು ರೂಪಿಸುವಲ್ಲಿ ಟಿ. ಪಿ. ಅಶೋಕ ಅವರ ಪಾತ್ರ ಮಹತ್ವದ್ದು. ವಿಮರ್ಶೆಗೆ ಸೃಜನಶೀಲ ಪ್ರಕಾರಗಳಷ್ಟೇ ಪ್ರಾಮುಖ್ಯತೆಯನ್ನು ತಂದುಕೊಟ್ಟವರಲ್ಲಿ ಅವರೂ ಒಬ್ಬರು. ಕುವೆಂಪು ಅವರ ಎರಡು ಬೃಹತ್ ಕಾದಂಬರಿಗಳ ವಸ್ತುವಿಶ್ಲೇಷಣೆ ಇಲ್ಲಿದ್ದು, ಅನೇಕ ಮಗ್ಗಲುಗಳಿಂದ ಪ್ರವೇಶ ಮಾಡಿ ಖಚಿತ ನೆಲೆಗಳನ್ನು ತಲುಪುವ ವಿಮರ್ಶೆಯ ಶಿಸ್ತು ಅವರ ಇತರ ಕೃತಿಗಳಂತೆ ಇಲ್ಲಿಯೂ ಸಾಧ್ಯವಾಗಿದೆ. ವಸ್ತು, ಸಂವಿಧಾನ, ಪಾತ್ರಗಳ ಭಿನ್ನ ಪಾತಳಿಗಳು, ಸನ್ನಿವೇಶಗಳ ಆಯ್ಕೆ ನಿರೂಪಣೆಗಳಲ್ಲಿಯ ಸಹಜ ಸಂಕೀರ್ಣತೆ ಇವೇ ಮೊದಲಾದ ನೆಲೆಗಳಲ್ಲಿ ಕುವೆಂಪು ಸಾಧಿಸಿರುವ ಕಲಾವಂತಿಕೆಯನ್ನು ಸಮಾಜಮುಖಿಯಾದ ತಾತ್ತ್ವಿಕತೆಯ ಚೌಕಟ್ಟಿನಲ್ಲಿ ಅಶೋಕರು ಗ್ರಹಿಸಿದ್ದಾರೆ.

ಇವರು 'ಕಾನೂರು ಹೆಗ್ಗಡಿತಿ' ಕುರಿತು ಬರೆಯುತ್ತಾರೆ : "ಕುವೆಂಪು ಅವರ ಕಲೆಗಾರಿಕೆಯ ಹೆಚ್ಚಳವೆಲ್ಲಿದೆಯೆಂದರೆ ಅವರು ಕೇವಲ ವರ್ಗಮಾದರಿಗಳನ್ನು ಸೃಷ್ಟಿಸಿಲ್ಲ. ಒಂದು ಸ್ಥಿರ ವರ್ಗದೊಳಗೇ ಇರುವ ವ್ಯಕ್ತಿ ವಿಶೇಷಣಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಹೀಗಾಗಿ ಕಾದಂಬರಿ ಸಾಂಸ್ಕೃತಿಕ ಆಸಕ್ತಿಗಳನ್ನು ಮಾತ್ರವಲ್ಲ ದಟ್ಟವಾದ ಮಾನವೀಯ ಆಸಕ್ತಿಗಳನ್ನು ಪ್ರಕಟಿಸುತ್ತದೆ. ಸ್ಥಿರ ಸಮಾಜವೊಂದರ ಏಕರೂಪತೆಯ ಜೊತೆ ಮನುಷ್ಯ ಸ್ವಭಾವದ ವೈಚಿತ್ರ್ಯಗಳ ಮತ್ತು ಪ್ರತಿಭೆಯ ಸಾಧ್ಯತೆಗಳ ಬಹುರೂಪತೆಯ ಹೆಣಿಕೆ ಕಾದಂಬರಿಗೆ ಜೀವಂತಿಕೆಯನ್ನೂ, ಜಡಗನ್ನೂ ತಂದುಕೊಟ್ಟಿದೆ." ಈ ತೀರ್ಮಾನಗಳನ್ನೂ ಅವರು ಹೂವಯ್ಯ, ಇವೇ ಮೊದಲಾದ ಪಾತ್ರಗಳ ವಿಶ್ಲೇಷಣೆಯಲ್ಲಿ ಅನಾವರಣಗೊಳಿಸುತ್ತಾರೆ. ಹೂವಯ್ಯನ ಪಾತ್ರದ ಆದರ್ಶಮಯತೆಯೊಂದಿಗೆ ಅವನ ಫ್ಯೂಡಲ್ ಮನೋಭಾವದ ಬೇರುಗಳನ್ನು ಗುರುತಿಸುತ್ತಾರೆ.

'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡಿತಿ'ಗಿಂತ ಹೇಗೆ ಭಿನ್ನ ಹಾಗೂ ಶ್ರೇಷ್ಠ ಎಂಬುದನ್ನು ಉದಾಹರಣೆಯೊಂದಿಗೆ ಯಥಾರ್ಥವಾಗಿ ನಿರೂಪಿಸಿದ್ದಾರೆ. "ಕಾನೂರು ಹೆಗ್ಗಡಿತಿಯಲ್ಲಿ ಹೂವಯ್ಯ ಎಲ್ಲರಿಗಿಂತ ಮುಖ್ಯ, ವಿಶಿಷ್ಟ ಎಂಬ ಧ್ವನಿಯಿದೆ. ಆದರೆ ಮಲೆಗಳಲ್ಲಿ ಮದುಮಗಳು ಕಾದಂಬರಿಗೆ ಹಾಗೆ ಒಂದೇ ಕೇಂದ್ರವೆಂಬುದಾಗಲೀ, ಒಂದೇ ಕೇಂದ್ರ ಪಾತ್ರ ಅಥವಾ ಕೇಂದ್ರ ಪ್ರಜ್ಞೆ ಎಂಬುದಾಗಲೀ ಇಲ್ಲ..." ಕುವೆಂಪು ಅವರ ಈ ಆಶಯವನ್ನು ಅಶೋಕರು ಅನೇಕ ಮುಖವಾಗಿ ವಿಶ್ಲೇಷಿಸಿದ್ದಾರೆ. ಅವರ ಒಳನೋಟಗಳು ಮತ್ತು ಮಂಡನಾಕ್ರಮಗಳು ಸಾಮಾನ್ಯ ಓದುಗ ಮತ್ತು ಪ್ರಜ್ಞಾವಂತ ವಿಮರ್ಶಕರಿಬ್ಬರಿಗೂ ಒಂದು ಸೃಜನಶೀಲ ಕೃತಿಯಷ್ಟೇ ಹಿತವೆನಿಸುತ್ತವೆ.

## ೧೩. ರಾತ್ರಿ ಮಂಜು : ಡಾ. ಶ್ರೀನಿವಾಸ ಕುಲಕರ್ಣಿ

ಕನ್ನಡ ಕಲಾ ಸಂಘ, ತುಂಗಭದ್ರಾ ಡ್ಯಾಂ - ೫೮೩ ೨೨೫, ಪ್ರ.ಮು. ೨೦೦೪, ಪು. ೬೮, ರೂ. ೪೦/-

ಡಾ. ಶ್ರೀನಿವಾಸ ಕುಲಕರ್ಣಿಯವರ ಮೂರನೆಯ ಸಂಕಲನವಿದು. ಇದರಲ್ಲಿ ೩೩ ಕವನಗಳಿವೆ. ಕಥೆ, ಕಾದಂಬರಿ, ಪ್ರವಾಸ ಕಥನ, ಸಂಶೋಧನೆ ಮೊದಲಾದ ಪ್ರಕಾರಗಳಲ್ಲಿ ಕೃಷಿ ನಡೆಸಿರುವ ಶ್ರೀಯುತರು ೧೫ ವರ್ಷಗಳ ದೀರ್ಘ ಮೌನದ ನಂತರ ಈ ಸಂಕಲನ ಪ್ರಕಟಿಸಿದ್ದಾರೆ. ನವೋದಯ,

ನವ್ಯ, ಬಂಡಾಯ ಕಾವ್ಯಪಂಥಗಳ ಛಾಯೆಗಳು ಇಲ್ಲಿನ ಕವಿತೆಗಳಲ್ಲಿ ತೇಲಾಡಿವೆ. ಆದರೆ ಕವಿ ಯಾವದೇ ಪಂಥಕ್ಕೆ ತನ್ನನ್ನು ನಿರ್ಬಂಧಿಸಿಕೊಳ್ಳದೆ ಬೇರೆ ಬೇರೆ ಪಂಥಗಳ ಆರೋಗ್ಯಪೂರ್ಣ ಅಂಶಗಳನ್ನು ತಮ್ಮ ಕಾವ್ಯದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿರುವುದು ಸ್ಪಷ್ಟವಿದೆ. ಮಾನ್‌ಸೂನ್ ಮೋಡ, ಹೊಸವರುಷದ ಹಾಡು, ವರುಷಾಗಮನ, ನರ್ಮದೆ, ನವಮನ್ವಂತರ ಗೀತೆ, ಓ! ದಿವ್ಯಶಕ್ತಿ, ಪಯಣ ಮೊದಲಾದ ಕವಿತೆಗಳು ನವೋದಯದ ಮಾದರಿಗೆ ಸೇರಿವರೆ `ರಾತ್ರಿಮಂಜು`, `ನಿಗೂಢ ಲೋಕ`, `ಕಡಲತಡಿ ಶವಗಳು`, `ಮೈಕಳಿ`, `ನೆರಳು`, `ಅಂಡಮಾನದಲ್ಲಿ`, `ಪುಟ್ಟಮರ ನಿಸ್ಸೀಮಳೀ ಮಾತೆ` ಮುಂತಾದವು ನವ್ಯಕ್ಕೆ ಹತ್ತಿರದವು. ಇಲ್ಲಿ ಒಳಗೊಂಡಿರುವ ಲೈಂಗಿಕ ಪ್ರತಿಮೆಗಳು ನವ್ಯದ ತೀವ್ರತೆ, ಸಾಂಕೇತಿಕತೆಯನ್ನು ಹೊಂದಿದ್ದರೂ ದಾಂಪತ್ಯದ ಚೌಕಟ್ಟಿನಲ್ಲಿ ಚಿತ್ರಿಸಲ್ಪಟ್ಟಿರುವುದರಿಂದ ನವೋದಯದ ಮಾರ್ದವ ಸಾಧ್ಯವಾಗಿದೆ. ಹೀಗೆ ಯಾವುದೇ ಕವಿತೆಯನ್ನು ಸಂಪೂರ್ಣ ನವೋದಯ, ನವ್ಯ, ಬಂಡಾಯವೆಂದು ವಿಂಗಡಿಸಲಾರದ ಹಾಗೆ ಆ ಪಂಥಗಳ ಮುಖ್ಯ ಸಂಗತಿಗಳು ಒಂದರೊಳಗೊಂದು ಬೆರೆತುಕೊಂಡು ಪ್ರಕಟಗೊಂಡಿವೆ ಎನ್ನುವುದೇ ಸರಿಯಾದೀತೇನೋ. ಇದು ಕನ್ನಡ ಕಾವ್ಯದ ಇಂದಿನ ಸ್ವರೂಪವನ್ನು ಬಿಂಬಿಸುವ ಸಂಗತಿಯೂ ಆಗಿದೆ. ಅನುಭವದ ಪ್ರಾಮಾಣಿಕತೆ ಅಭಿವ್ಯಕ್ತಿಯ ಕೌಶಲ್ಯಗಳು ಮೇಳೈಸಿರುವುದು ಇಲ್ಲಿನ ಕವಿತೆಗಳ ಗುಣಾತ್ಮಕ ಅಂಶ. ಆದರೆ ಕೆಲವು ಕಡೆ ಹೇಳಿಕೆಯ ಮಟ್ಟದ ಸಾಲುಗಳಿಂದಾಗಿ ಇಡೀ ಕವಿತೆಯ ಬಂಧ ಸಡಿಲಗೊಂಡಿರುವ ಉದಾಹರಣೆಗಳೂ ಇವೆ.

**– ಬಸವರಾಜ ವಕ್ಕುಂದ, ಕೇರ್ ಸಿ. ಜಿ. ಪಾಟೀಲ, ಶ್ರೀ ಆತ್ಮಾನಂದ, ಶಿವಗಿರಿ, ಧಾರವಾಡ-೫೮೦ ೦೦೮**

## *೧೪. ಬಂದೂಕಿನ ಮನುಷ್ಯ :* ಡಾ. ಬಸವರಾಜ ಕುಂಬಾರ

ಲಡಾಯಿ ಪ್ರಕಾಶನ, ೪೨, ಪ್ರಸಾದ ಲಾಜ್, ಗದಗ, ಪ್ರ.ಮು. ೨೦೦೨. ಪು. ೫೮, ರೂ. ೩೫/-

ಬಸವರಾಜ ಎಂಥ ಮನುಷ್ಯ ಮತ್ತು ಅವರು ಏಕೆ ಮತ್ತು ಹೇಗೆ ಕವಿ ಎಂದು ತಿಳಿದುಕೊಳ್ಳಬೇಕೆಂದರೆ ಅವರ ಈ ಎರಡನೇ ಕವನಸಂಕಲನದಲ್ಲಿಯ 'ನಾನು ಮನುಷ್ಯನಾಗುತ್ತೇನೆ' ಓದಬೇಕು. ನನ್ನ ಅನುಭವಗಳೇ ನನ್ನ ಕವಿತೆಗಳು. ಚಿಕ್ಕಂದಿನಲ್ಲಿಯ ಬಡತನ, ನೌಕರಿ ದೊರಕಿಸಬೇಕಾದಾಗಿನ ದೈನ್ಯ ಪರಿ, ಸಂತೋಷದ ಸಂಬಂಧಗಳು, ಸಂಬಂಧಿಕರು ಇವುಗಳೆಲ್ಲ ಬಸವರಾಜರನ್ನು ಮನುಷ್ಯನನ್ನಾಗಿ ಉಳಿಸಿವೆ. ಶೋಷಿತ ವರ್ಗದಿಂದ ಬಂದವರು, ಶೋಷಣೆಯ ಬಗೆಗೆ ಚಿಂತಿಸಿದವರು; ಆದರೂ ರೊಚ್ಚು-ಕಿಚ್ಚು ಇಲ್ಲ. ``ನನ್ನ ಜತೆ ನನ್ನ ಜನ/ನನ್ನ ಮನ. ಕಣ್ಣುಗಳ/ನಿಚ್ಚಳ ಬೆಳಕಾವಲ್ಲಿ.../ ಖಚಿತವಾಗಿ ಬೆಳಕನ್ನು ಹಿಡಿಯುವ/ಈ ಬಂದೂಕಿನ ಮನುಷ್ಯ/ಆಗ ಬೆತ್ತಲಾಗುತ್ತಾನೆ - ಬಯಲಾಗುತ್ತಾನೆ: /ತನ್ನಷ್ಟಕ್ಕೆ ತಾನೇ/ಸತ್ತು ಹೋಗುತ್ತಾನೆ.'' ಬಸವರಾಜ ಆಯ್ದು ಭಾಷಾಂತರಿಸಿದ ಡಾ. ಜಗತಾರ ಅವರ ಈ ಸಾಲುಗಳು, ಬಸವರಾಜರ ವ್ಯಕ್ತಿತ್ವ ಹಾಗೂ ಅವರ ವೈಚಾರಿಕ ನಿಲುವು, ಧೋರಣೆಯನ್ನು ಪ್ರತಿಬಿಂಬಿಸುವಂತಿವೆ. ಸಾಕಷ್ಟು ಒಳ್ಳೆಯ ಗುಣಗಳಿರುವ ಹಲವಾರು ಕವನಗಳಿಲ್ಲಿವೆ. `ಆಧುನಿಕ ಶಂಭೂಕ` ಅವುಗಳಲ್ಲೊಂದು. ``ಅಷ್ಟ ಬೇಡಿಯಬೇಕೆಂದರೆ/ಜನಸಾಂದ್ರತೆಯ ಭಯ''– ಇಲ್ಲಿ ಸಹಜ, ಸಣ್ಣ ಸತ್ಯ ಹೇಗೆ ಕಾವ್ಯಕ್ಕೆ ಅನುಕೂಲವಾಗಿ ದಕ್ಕಿದೆ ಎಂಬುದನ್ನು ನೋಡಬಹುದು. ``ಮನಸು ಜಾರಿಕೆ ಬಂಡೆ/ಜಾರುವದು ಇದ್ದದ್ದೆ'' (ಗೀಜಗದಿಂದ ಗೀಜಗಕ್ಕೆ) ಈ ರೀತಿ ಕವನಿಸುವದು ಸಾಧ್ಯವಾಗಿದೆ ಇವರಿಗೆ. ಆದರೆ ಕಾವ್ಯದಲ್ಲಿ ರೂಪಕಶಕ್ತಿ: ಮನಸ್ಸು, ಹೃದಯ ಕಂಡದ್ದನ್ನು, ಅನುಭವಿಸಿದ್ದನ್ನು ಶಬ್ದಗಳಲ್ಲಿ ಸಾಕಾರಗೊಳಿಸುವ ಪರಿಯನ್ನು ಬಸವರಾಜ ಇನ್ನೂ ಸಾಧಿಸಬೇಕು.

**—ದುಷ್ಯಂತ ನಾಡಗೌಡ,** ವೆಂಕಟಾದ್ರಿ, ೧೨೪, ೨ನೇ ಮೇನ್, ಗಾಂಧೀನಗರ, ಧಾರವಾಡ-೫೮೦ ೦೦೪

# ಸಂಕಲನ : ಅನಿಸಿಕೆ

೧. 'ಸಂಕಲನ-೧೭'ರಲ್ಲಿ ಬಂದ ಶಾಂತಕುಮಾರಿಯವರ ಎಮಿಲಿ ಡಿಕಿನ್‌ಸನ್ ಮತ್ತು ಬಸವಣ್ಣನವರನ್ನು ಕುರಿತ ತುಲನಾತ್ಮಕ ಲೇಖನ ಅವರ ಹಿಂದಿನ ಅಲ್ಲಮಪ್ರಭು ಕುರಿತ ಲೇಖನದಂತೆ ವಿದ್ವತ್‌ಪೂರ್ಣವಾಗಿದೆ. 'All great men think alike' ಎನ್ನುವಂತೆ ದೊಡ್ಡವರ ವಿಚಾರ ನಡೆನುಡಿಗಳಲ್ಲಿ ಸಾಮ್ಯತೆ ಇದ್ದೇ ಇರುತ್ತದೆ. ಆದರೆ ಲೇಖನದಲ್ಲಿ ಕೊನೆಯ ವರೆಗೂ 'ಕೆಳೆ' ಶಬ್ದದ ಅರ್ಥ ನೀಡದೇ ಲೇಖಕರು ಓದುಗರನ್ನು ಸತಾಯಿಸುತ್ತಾರೆ. ಟಿ. ಆರ್. ರಾಧಾಕೃಷ್ಣರವರ 'ಅಪ್ಪ ಅಮ್ಮ' ಲೇಖನ ಆತ್ಮೀಯವಾಗಿದೆ. ಲಲಿತಾ ಅವರ ಕವನಗಳು ಕಾವ್ಯಕ್ಕೆ ಹೊಸ ವ್ಯಾಖ್ಯಾನ ನೀಡಿವೆ.

**– ವ್ಹಿ. ಎ. ಮಾಚಕನೂರ, ಬೆಂಗಳೂರು**

೨. ಎಲ್. ವಿ. ಶಾಂತಕುಮಾರಿಯವರು ಬರೆದ 'ಎಮಿಲಿ ಡಿಕಿನ್‌ಸನ್ ಮತ್ತು ಬಸವಣ್ಣನ ಕರ್ತಾರನ ಕಮ್ಮಟ' ತುಂಬಾ ಚೆನ್ನಾಗಿದೆ. ಈ ಬಗೆಯ ಕಾವ್ಯವಿಶ್ಲೇಷಣೆಗಳು ಇನ್ನಷ್ಟು ಹೆಚ್ಚಲಿ.

**–ಹಾಲಾಡಿ ಮಾರುತಿರಾವ್, ಬೆಂಗಳೂರು**

೩. ಎಲ್. ವಿ. ಶಾಂತಕುಮಾರಿಯವರ 'ಎಮಿಲಿ ಡಿಕಿನ್‌ಸನ್ ಮತ್ತು ಬಸವಣ್ಣನ ಕರ್ತಾರನ ಕಮ್ಮಟ' ಉತ್ತಮ ಲೇಖನ. ಹಳ್ಳಿಯಲ್ಲಿ ಅಂಗ್ರೇಜಿ ಕಲಿಸದೆ ಮಡಿಯಲ್ಲಿಟ್ಟರು. ೧೯೮೨ ರಿಂದ ಆಡಳಿತ ಭಾಷೆಯನ್ನು ಕನ್ನಡದಲ್ಲಿ ಮಾಡಲು ಆದೇಶಿಸಿದ ಸರಕಾರ ಇಂಗ್ಲೀಷಿನ ಮಡಿವಂತಿಕೆ ಇರಿಸಿತು. ಹೀಗಾಗಿ ಇಂಗ್ಲೀಷಿನಲ್ಲಿ ಅನುಭಾವಗೀತೆಗಳನ್ನು ಓದಿ ಅರ್ಥೈಸಿಕೊಳ್ಳುವ ಸಾಮರ್ಥ್ಯ, ಧಾವಂತ ಇಲ್ಲದಂತಹ ನಮ್ಮಂಥವರಿಗೆ ಈ ಲೇಖನ ಅದ್ಭುತವೆನಿಸಿತು. ಎರಡು ವಿಭಿನ್ನ ಸಂಸ್ಕೃತಿಗಳಲ್ಲಿ ಬೆಳೆದ ಅನುಭಾವ ವೃಕ್ಷಗಳಲ್ಲಿ ಸಾಮ್ಯವಿದ್ದುದು ಆಶ್ಚರ್ಯವೇ ಸರಿ.

ಪ್ರಸನ್ನರ 'ಕಂತ್ರಿ ನಾಯಿಯೂ ಕನ್ನಡ ಭಾಷೆಯೂ' ಅನುಭಾವ ಯಶೋಗಾಥೆಗಿಂತ ಕಠಿಣವೆನಿಸಿತು. ಕಂತ್ರಿ ನಾಯಿಗಳು ಹೇಲು ತಿಂದಾಗ ಕಜ್ಜಿ ಅಂಟಿಕೊಳ್ಳುವದೆಂಬ ಭಾವ ಬಂದಿದೆ. ಆದರೆ ಅದೇ ಹೇಲನ್ನು ಎಮ್ಮೆಗಳು ತಿಂದು ಅದನ್ನು ಭಟ್ಟಿ ಇಳಿಸಿ ಗಟ್ಟಿ ಹಾಲನ್ನು ಕೊಟ್ಟಾಗ ಅದನ್ನು ಚಪ್ಪರಿಸಿಕೊಳ್ಳುವ ಎಷ್ಟು ಸುಶಿಕ್ಷಿತ ಮಂದಿಗೆ ಕಜ್ಜಿ ಹತ್ತಿಕೊಂಡಿದೆಯೋ!

ನಮ್ಮವರು ನಮ್ಮನ್ನು ಗೊತ್ತಾಗದಂತೆ ಶೋಷಣೆ ಮಾಡುವ ಜಾಗತೀಕರಣ, ಉದಾರೀಕರಣದ ಸಾರವುಳ್ಳ ಕುಸುಮಾ ಶಾನಭಾಗ ಅವರ ಕತೆ 'ಕಾಳು ಮೆಣಸಿಗೂ ಜಾಗತೀಕರಣ' ಹಿಡಿಸಿತು.

ನಿಮ್ಮ 'ಕಡೀಪುಟ'ಅಂತರಾತ್ಮ ಬಹಿರಾತ್ಮಗಳ ಅವಲೋಕನದ ಕನ್ನಡಿ ಬರಿ ಕನ್ನಡಿಯಾಗಿರದೆ ಭೂತಗನ್ನಡಿಯಾಗಿದೆ.

**– ಶರಣಗೌಡ ಎರಡೆತ್ತಿನ, ದಾವಣಗೆರೆ**

೪. 'ಸಂಕಲನ'ವು ನಿನ್ನ ನಿರ್ದೇಶನದಲ್ಲಿ ಸಾಹಿತ್ಯಿಕ, ವೈಚಾರಿಕ ಕ್ರಿಯೆಯನ್ನು ಇಷ್ಟೊಂದು ಸಮರ್ಥವಾಗಿ ನೆರವೇರಿಸುತ್ತಿದೆಯಲ್ಲ ಅದು ನಿಂತುಹೋದರೆ ಹಾನಿ ನಿನಗಲ್ಲ, ನಮಗೇ. ಅದ್ದರಿಂದ ನಿಲ್ಲಿಸಬೇಡ –ಪ್ಲೀಜ್! ನಮ್ಮಿಂದಾದ ಸಹಾಯ ಮಾಡುತ್ತಿರುತ್ತೇವೆ.

**– ಡಾ. ಬಿ. ಟಿ. ದೇಸಾಯಿ, ಧಾರವಾಡ**

೫. ಕಳೆದ ೩ ವರ್ಷಗಳಲ್ಲಿ 'ಸಂಕಲನ'ದ ಮೂಲಕ ಉತ್ತಮ ಕಾರ್ಯ ನಿರ್ವಹಿಸಿ ಸಾಹಿತ್ಯಾಸಕ್ತರಿಗೆ ರಸದೌತಣವನ್ನು ಉಣಿಸಿದ್ದೀರಿ. ನಿಮ್ಮೊಬ್ಬ ಅಭಿಮಾನಿಯಾಗಿ ನಿಮ್ಮ ಈ ಸಾಹಿತ್ಯ ಸೇವೆ ಮುಂದುವರಿಯಬೇಕಾಗಿ ಅಪೇಕ್ಷಿಸುತ್ತೇನೆ. ಇದರೊಂದಿಗೆ ಮುಂದಿನ ೩ ವರ್ಷಗಳ ಚಂದಾ ಹಣವಿದೆ. ನಿಮ್ಮ ನಿರೀಕ್ಷೆಯಂತೆ ಕನಿಷ್ಠ ೭೦೦ ಜನ ಚಂದಾದಾರರು ಶೀಘ್ರವಾಗಿ ದೊರಕಲಿ.

**– ಡಾ. ಶಾಂತಾರಾಮ್ ಹೆಚ್., ಮಣಿಪಾಲ**

೬. ಹಂಗಾರ ಆಗಲಿ. ಪತ್ರಿಕೆ ಮಾತ್ರ ನಿಲ್ಲಿಸೋದು ಬ್ಯಾಡಪಾ ತಮ್ಮಾ... ಇದರೊಂದಿಗೆ ಮುಂದಿನ ೩ ವರ್ಷಗಳ ಚಂದಾ ಹಣವಿದೆ.

**– ಗೀತಾ ನಾಗಭೂಷಣ, ಗುಲಬರ್ಗಾ**

೭. ನೀವು ಚಂಪಾ ಬಗ್ಗೆ ಬರೆದದ್ದು ಓದಿ ಕೊರವಂಜಿಯು ನೆನಪಾಯಿತು. ಅಂಥಾ ಸಂದರ್ಭ ಬಾರದಿರಲಿ ಎಂದು ಹಾರೈಸುತ್ತೇನೆ. **– ಡಾ. ರಾಮಚಂದ್ರ ದೇವ, ಕಲ್ಮಡ್ಕ**

೮. 'ಸಂಕಲನ' ಈಗ ಇದ್ದ ಪತ್ರಿಕೆಗಳಲ್ಲೇ ಉತ್ತಮ ಸಾಹಿತ್ಯಿಕ ಪತ್ರಿಕೆಯಾಗಿದೆ. ಅದ್ರಲ್ಲೂ ನಮ್ಮೀ ಉತ್ತರ ಕರ್ನಾಟಕದಿಂದ ಅನ್ನುವುದೂ ಹೆಮ್ಮೆಯ ಸಂಗತಿ. ಆದರೆ ಅಷ್ಟೇ ಖೇದದ ವಿಷಯವೆಂದರೆ ಐದು ಲಕ್ಷ ಕನ್ನಡಿಗರಲ್ಲಿ ಜುಜುಬಿ ಒಂದು ಸಾವಿರ ಚಂದಾದಾರರಿಲ್ಲವೆ? ನಾಚಿಗ್ಗೇಡು. ಹ್ಯಾಂಗ್ಹಿಂಗಾದರ! ಓದುಗರ ಸಂಖ್ಯೆ-ಪ್ರಕಟಿತ ಪುಸ್ತಕಗಳ ಸಂಖ್ಯೆ ಹೌಹಾರುವಷ್ಟಿದೆ. ಒಂದಿಷ್ಟೇ ಕನ್ನಡಿಗರು ಮನಸು ಮಾಡಿ 'ಸಂಕಲನ'ವನ್ನು ಮುಂದೆ ನಡೆಸಬೇಕು. ನನ್ನನ್ನು ದಯವಿಟ್ಟು ಖಾಯಂ ಚಂದಾದಾರರಲ್ಲಿ ಸೇರಿಸಿಕೊಳ್ಳಿರಿ. **– ಹಣಮಂತ ತಾಸಗಾಂವಕರ, ಬಾಗಲಕೋಟ**

೯. ಈ ತನಕದ ನಿಮ್ಮ ಅನುಭವ, ವೈಶಿಷ್ಟ್ಯ, ಪ್ರತಿಭಾ ಸಂಪನ್ನತೆಗಳು ವ್ಯರ್ಥವಾಗದಂತೆ 'ಸಂಕಲನ' ಪತ್ರಿಕೆಯಲ್ಲಿ ಸೂಕ್ತ ರೀತಿಯಲ್ಲಿ ಬಳಕೆಯಾಗುತ್ತಿವೆ. ಶೀರ್ಷಿಕೆಯನ್ನು ಸಾರ್ಥಕ ಪಡಿಸುವ ತೆರದಲ್ಲಿ ಸಂಗ್ರಹಾರ್ಹ ಸಂಚಿಕೆಗಳೂ ಆಗುತ್ತಿವೆ. ಅಷ್ಟೇ ಅಲ್ಲ, ಧಾರವಾಡ ನೆಲದ ಸಾಂಸ್ಕೃತಿಕ ಸೊಗಡನ್ನು ರುಚಿಗೆಡದಂತೆ ಅಭಿವ್ಯಕ್ತಿಸುವ ನಿಮ್ಮ ಕ್ರಮ, ಹಾಗೆಯೇ 'ಸಂಕಲನ'ವನ್ನು ವಿಶಿಷ್ಟ ರೀತಿಯಲ್ಲಿ ನಿಮ್ಮದೇ ಶೈಲಿಯಲ್ಲಿ ರೂಪಿಸುವ ನಿಮ್ಮ ಶ್ರಮ ಉದ್ದಕ್ಕೆ ಢಾಳವಾಗಿ ಕಾಣಿಸುತ್ತವೆ. ನಿಮ್ಮ ಮುಂದಿನ ಮೂರು ವರ್ಷಗಳ ಯೋಜನೆ ಫಲಕಾರಿಯಾಗಲಿ. ಅದಕ್ಕೆ ನನ್ನದೂ ಬೆಂಬಲವಿದೆ.

**– ಈರಪ್ಪ ಎಂ. ಕಂಬಳಿ, ಬೆಂಗಳೂರು**

೧೦. 'ಸಂಕಲನ'ದ ಸಂಚಿಕೆಗಳನ್ನು ಓದಿದ್ದೇನೆ. ಮಹತ್ವದ ಚಿಂತನಪರ ವಿಷಯಗಳು ತುಂಬಿಕೊಂಡಿವೆ. ಕೆಲ ಲೇಖನಗಳು, ವಿಶೇಷವಾಗಿ 'ಅವ್ವ ಅಪ್ಪ ಮಾಲಿಕೆ'ಯ ಲೇಖನಗಳು ಬದುಕಿನ ಹಿಂದಿನ, ಗತ ಕಾಲವನ್ನು ನೆನಪಿಸುತ್ತವೆ. ನಾನು ಯಾವಾಗಲೂ ನಿಮ್ಮೊಂದಿಗಿದ್ದೇನೆ.

**– ಕೃಷ್ಣ ನಾರಾಯಣ ಎಂ., ಪುತ್ತೂರು**

೧೧. ಆರು ಕೋಟಿ ಕನ್ನಡಿಗರಲ್ಲಿ ಕೇವಲ ಆರುನೂರು ಚಂದಾದಾರರನ್ನು ತಾವು ಬಯಸಿರುವುದು ಹೆಚ್ಚೇನಲ್ಲ. ತಮ್ಮ ಮನವಿಗೆ ಕನ್ನಡಿಗರು ಖಂಡಿತ ಓಗೊಡುತ್ತಾರೆಂಬ ಭರವಸೆ ನನಗಿದೆ. 'ಸಂಕಲನ' ನಿಲ್ಲಿಸುವ ಕುರಿತು ಯೋಚನೆ ಮಾಡಬೇಡಿ. ಕನ್ನಡಕ್ಕೆ ಒಂದು ಶುದ್ಧ ಸಾಹಿತ್ಯಿಕ ಪತ್ರಿಕೆ ಬೇಕೇಬೇಕು. ಅದು 'ಸಂಕಲನ'ವಾಗಿರಲಿ. **– ಜಯದೇವಪ್ಪ ಜೈನಕೇರಿ, ಶಿವಮೊಗ್ಗ**

೧೨. 'ಸಂಕಲನ'ದ ಮುಂದಿನ ಸ್ಥಿತಿಯ ಬಗ್ಗೆ ತಿಳಿದು ತುಂಬ ಖೇದವೆನಿಸಿತು. ಆದರೆ ಇದೇ ಅಲ್ಲವೇ ಕನ್ನಡ ಮಧ್ಯಮವರ್ಗದ ಜನಗಳ 'ಮನೋಭಾವ'. ಅದಕ್ಕಾಗಿ ಬೇಸರಪಡುವುದೂ ಬೇಡ ಎನಿಸುತ್ತೆ. ತಮ್ಮ ಪ್ರಯತ್ನಕ್ಕೆ ನನ್ನ ಬೆಂಬಲ ಇದೆ.

**– ಎಸ್. ಎಸ್. ಹಿರೇಮಠ, ಹರಪನಹಳ್ಳಿ**

೧೩. 'ಸಂಕಲನ'ದಂಥ ಪತ್ರಿಕೆ ಮುಂದುವರಿಯಲೇಬೇಕು. ಸದಭಿರುಚಿಯ 'ಸಂಕಲನ'ಕ್ಕೆ ಸಾಹಿತ್ಯಾಸಕ್ತರ ಸಂಚಲನ ಬೇಕು. ಕಾಲೇಜಿಯೇಟ್ ಶಿಕ್ಷಣ ಇಲಾಖೆ ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆಯಿಂದ ಕ್ರಮವಾಗಿ ಎಲ್ಲ ಪದವಿ ಮತ್ತು ಪದವಿಪೂರ್ವ ಕಾಲೇಜುಗಳ ಗ್ರಂಥಾಲಯಗಳಿಗೆ ಕಡ್ಡಾಯವಾಗಿ ತರಿಸಿಕೊಳ್ಳಲು ಒಂದು ಆಜ್ಞೆ ಅಥವಾ ಸುತ್ತೋಲೆ ಹೊರಡಿಸಲು ಏಕೆ ಪ್ರಯತ್ನಿಸಬಾರದು. ಮೌಲ್ಯಯುತ 'ಸಂಕಲನ' ನಿರಂತರ ಪ್ರಕಟವಾಗುತ್ತಿರುತ್ತದೆ ಎಂಬ ವಿಶ್ವಾಸ ನನಗಿಗೆ.

**– ಯು. ಎನ್. ಸಂಗನಾಳಮಠ, ಹೊನ್ನಾಳಿ**

೧೪. ನಿಮ್ಮ ನಗೆಯಂತೆ 'ಸಂಕಲನ'ವೂ ಯಾವಾಗಲೂ ನಗುನಗುತ್ತ ಬರುತ್ತಿರಲಿ.

**– ಡಾ. ಅ. ರಾ. ಯಾರ್ದಿ, ಧಾರವಾಡ**

# ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ನಾವು ಮಕ್ಕಳ ಕೂಡ, ನಮಗಿಂತ ಸಣ್ಣ ವಯಸ್ಸಿನವರ ಕೂಡ ಹೆಚ್ಚು ಹೊತ್ತು ಕಳೀಯೂ ರೂಢಾ ಇಟಗೋಬೇಕು. ಸಾಧ್ಯವಿದ್ದಷ್ಟು ಕಾಲ ಅವರ ಕೂಡ ಆಡಬೇಕು, ಉಣಬೇಕು, ಅಡ್ಡ್ಯಾಡಬೇಕು, ಮಾತಾಡಬೇಕು. ಇದರಿಂದ ನಾವು ಪರೋಕ್ಷವಾಗಿ ಮಾನಸಿಕ ಮತ್ತು ಬೌದ್ಧಿಕ ದೃಷ್ಟಿಯಿಂದ ಈಗ ಇದ್ದಿದ್ದರಕಿಂತ ಹೆಚ್ಚು ಮಾಗಲಿಕ್ಕೆ, ಬೆಳೀಲಿಕ್ಕೆ ಸಾಧ್ಯ ಆಗತಯ್ತಿ. ಸುಮ್ನ ದಿಮಾಕ ಮಾಡಿ ದೂರ ಇದ್ದರ ಪಡಕೊಳ್ಳೂದು ಕಮ್ಮಿ ಆಕ್ಕತಿ, ಕಳಕೊಳ್ಳೂದು ಜಾಸ್ತಿ ಆಕ್ಕತಿ.

ಕ್ಷಯಿಸುವುದು, ಗತಿಸುವುದು, ಮುಗಿಯುವುದು ಬದುಕಿನ ನಿತ್ಯಕರ್ಮ ಮತ್ತು ಶಾಶ್ವತಧರ್ಮ ಆಗಿರೂದರಿಂದ ಆ ಮುಕ್ತಾಯವನ್ನ ಮೊದಲ್‌ಅ ಮುಕ್ತ ಮನಸ್ಸಿನಿಂದ ಮುಗ್ಧವಾಗಿ ಒಪ್ಪಿಬಿಡಬೇಕು. ಉಳಿದ ಬದುಕು, ಆಯುಷ್ಯ, ಕಾಲವನ್ನ, ಪ್ರೀತಿ ಉತ್ಸಾಹದಿಂದ ಸ್ವಾಗತಿಸುವುದಕ್ಕ ಅನುಭವಿಸುವುದಕ್ಕ ನಮ್ಮ ಮನಸ್ಸನ್ನ, ಬುದ್ಧಿ-ವಿವೇಕಗಳನ್ನ ತಯಾರ ಮಾಡಕೋಬೇಕು. ಅದಕ್ಕಾಗಿ ಯಾವುದೇ ಟಾನಿಕ್ಕು-ಔಷಧ ಇರೂದುಲ್ಲ, ವ್ಯಾಯಾಮಶಾಲೆ, ತರಬೇತಿ ಕೇಂದ್ರ ಅಂತ ಇರೂದುಲ್ಲ. ಅದಕ್ಕಾಗಿ ಅಗತ್ಯವಿದ್ದ ಸಿದ್ಧತೆಯನ್ನ ನಮನಮಗ ಅನುಕೂಲವಿದ್ದ, ಸಾಧಿಸಿದ ರೀತಿಯೊಳಗ ನಾವ್‌ಅ ಮಾಡಿಕೋಬೇಕು. ಈ ನಿಟ್ಟಿನೊಳಗ ಅತ್ಯಂತ ಹಾರ್ದಿಕವಾದ, ಸಹಜ, ನೈಸರ್ಗಿಕ, ಉಲ್ಲಾಸದಾಯಕ ಮಾರ್ಗ ಅಂದರ ಮಕ್ಕಳ ಕೂಡ, ನಮಗಿಂತ ಸಣ್ಣವರ ಕೂಡ ಇರೂದು. ಅವರ್ಹ್ಯಾಂಗ ಆಗಿ ಆಡಿ ಕೂಡಿ, ನಮ್ಮತನವನ್ನ ಉಳಿಸಿಕೊಳ್ಳುವ ಧಾಟಿ ನಮ್ಮ ಬದುಕಿನ ರಾಗ ಆಗಬೇಕು. ಅದರ ಯಶಸ್ಸಿನೊಳಗ ಉದಾರತೆ, ಉದಾತ್ತತೆ, ವೈಶಾಲ್ಯಗಳು ತಾವೇ ತಾವಾಗಿ ತುಂಬಿಕೊಳ್ಳಾಕ ಸುರುವಾಗತಾವು.

ಮಕ್ಕಳ ಕೂಡ ಹಂಗ ಇರುವಾಗ ಅವರ ಮ್ಯಾಲ ನಮ್ಮನ್ನ ಹೇರಬಾರದು. ನಮ್ಮ ಬುದ್ಧಿ ಜ್ಞಾನ ವಯಸ್ಸು ಶಿಸ್ತು ಶ್ರೀಮಂತಿಕೆ ಗಾಂಭೀರ್ಯ ದಿಮಾಕುಗಳನ್ನ ಅವರ ಮುಂದ ಬೀರಬಾರದು. ಆಗ ಮಾತ್ರ ಆ ಮಕ್ಕಳ ಮುಗ್ಧತೆಯ ಬಣ್ಣ, ವಾಸನಿ, ಮಾಧುರ್ಯ, ರುಚಿಯ ಲೇಪ ನಮಗೂ ಆಗತಯ್ತಿ.

ಮಕ್ಕಳು ಅಥವಾ ನಮಗಿಂತ ಕಡಿಮೀ ತಿಳಿದವರು ಕೇಳುವ ಪ್ರಶ್ನೆಗಳಲ್ಲಿ ಅವರಿಗೂ ನಮಗೂ ಅರಿವಿಲ್ಲದ್ಹ್ಯಾಂಗ ನಮ್ಮ ಜ್ಞಾನಕ್ಷೇತ್ರವನ್ನ ವಿಸ್ತರಿಸುವ ಕಾರ್ಯ ನಡೀತಿರತಯ್ತಿ. ಅವರು ಹೇಳುವ ಮಾತುಗಳಲ್ಲಿ ನಾವು ಕಳಕೊಂಡಂಥ ಎಷ್ಟೆಷ್ಟೋ ಲೋಕಗಳು ಮರಳಿ ನಮ್ಮ ಕಣ್ಣಮುಂದ ಕುಣ್ಯಾಕ ಸುರು ಆಗತಾವು. ನಮ್ಮ ಅರಿವಿಗೆ ನಿಲುಕದೇ ಹೋದಂಥಾ ಕ್ಷಣಗಳನ್ನ, ಅನುಭವಗಳನ್ನ ಮತ್ತ ಸಜೀವಗೊಳಿಸಿಕೊಳ್ಳಾಕ ಸಾಧ್ಯ ಆಕ್ಕತಿ. ಮಕ್ಕಳ ಪ್ರಶ್ನೆಗಳಲ್ಲಿ ತಿಳಕೋಬೇಕನ್ನುವ ಕುತೂಹಲ, ಬೆಳೀಬೇಕೆನ್ನುವ ಉತ್ಕಂಠೆ ತುಂಬಿರತಯ್ತಿ. ನಾವು ಓದಿದ್ದನ್ನ, ತಿಳಿದಿದ್ದನ್ನ ಮಕ್ಕಳಿಗೆ ಹೇಳುವಾಗ ನಾವ್‌ಅ ಇನ್ನಷ್ಟು ಸ್ಪಷ್ಟ ಆಗತೇವು. ಉತ್ತರ ಗೊತ್ತಿರಲಿಲ್ಲಂದರ ನಮ್ಮ ಪೊಳ್ಳುತನದ ಅರಿವು ನಮಗ್‌ಅ ಆಗತಯ್ತಿ. ಆಗ ಅದನ್ನ ತುಂಬಿಕೊಳ್ಳುವ ಪ್ರಯತ್ನ ಮಾಡುವ ಮೂಲಕ ನಮ್ಮನ್ನ ನಾವು ಬೆಳಸಿಕೊಳ್ಳಾಕ ಅನುವು ಆಕ್ಕತಿ. ಎಷ್ಟೋ ಸಲ ನಮಗಿಂತ ಅವರಿಗೇ ಹೆಚ್ಚು ಗೊತ್ತಿರತಯ್ತಿ. ಮನಸ್ಸು ತೆರೆದು. ಅವರ ಬಾಯಿಲೆ ಅದನೆಲ್ಲಾ ಕೇಳಿಕೊಂಡು, ಅವರನ್ನ ಸ್ವಲ್ಪ ಹುರುದುಂಬಿಸಿದರೂ ಸಾಕು, ನಾಳೆ, ಇನ್ನೊಮ್ಮೆ ಆ ಮಕ್ಕಳು ಇನ್ನಷ್ಟು ಮತ್ತಷ್ಟು ವಿಷಯಗಳನ್ನ, ಜ್ಞಾನವನ್ನ ಸಂಗ್ರಹಿಸಿಕೊಂಡು ಬರ್ತಾರ, ಅದನ್ನ ನಮಗ ಹೇಳಾಕ ಪ್ರಯತ್ನ ಪಡತಾರ. ಹಂಗ ಹೇಳೂವಾಗ ಅವರ ಅಭಿವ್ಯಕ್ತಿ-ಶಕ್ತಿ ಸಯ್ತ ದಿನದಿಂದ ದಿನಕ್ಕ ಹಿಗ್ಗತಯ್ತಿ, ವಿಚಿತ್ರ ಆಕ್ಕತಿ, ಸ್ಪಷ್ಟ, ಶುದ್ಧ ಆಕ್ಕತಿ. ಮಕ್ಕಳು ಭವಿಷ್ಯದ ಭದ್ರ ಬದುಕಿನ ನಿಶ್ಚಲ ಬುನಾದಿ ಆಗತಾರು. ಮಕ್ಕಳಿಗೆ ಬಂದಷ್ಟು ಭಾಷೆಗಳು ನಮಗ ಗೊತ್ತಿರೂದುಲ್ಲ, ಅವರು ತಿಳಿದಷ್ಟು ವಿಜ್ಞಾನ ಕಂಪ್ಯೂಟರು ಇತ್ಯಾದಿ ನಮಗ ತಿಳಿದಿರೂದುಲ್ಲ, ಅವರಷ್ಟು ವೇಗ, ಕಲ್ಪನಾಶಕ್ತಿ ನಮ್ಮಲ್ಲಿಲ್ಲ. ಅಂದಮ್ಯಾಲ ಈ ಮಕ್ಕಳ್‌ಅ ನಮ್ಮ ಹಿರಿಯರು, ನಮ್ಮ ಪಾಲಿನ ಶಿಕ್ಷಕರು, ಗುರುಗಳು ಅಂತ ಪರೋಕ್ಷವಾಗಿ ಒಪ್ಪಿಕೊಂಡ ಬಿಟ್ಟರ ನಾವು ಇನ್ನೂ ಹೆಚ್ಚಿನ ಒಳ್ಳೆಯದರ ದಾರಿಯೊಳಗ ಹೆಜ್ಜೀ ಹಾಕಬಹುದು.

ದೇವ ಮನಸ್ಸಿನ ಅಕಲುಷ ಶಾಂತಿ, ಬೌದ್ಧಿಕ ವಿಕಾಸ, ನಿನ್ನೆ ನಾಳೆಗಳನ್ನ ಬದಿಗಿಟ್ಟು ಇಂದನ್ನ ಪ್ರೀತಿಸುವ ವಾಸ್ತವ ಪ್ರಜ್ಞೆ; ಕಂಡದ್ದನ್ನ ಅನಿಸಿದ್ದನ್ನ ನೇರ ಹೇಳುವ ಧಾಟಿ, ಸ್ಥಾನ-ಪದ-ಅಧಿಕಾರ-ಧನ-ಮದಗಳನ್ನ ಯೋಚಿಸದೇ ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುವ ಭಾವನೆ ಇತ್ಯಾದಿ ನಮಗ ಮಕ್ಕಳಿಂದ ತಿಳಿದಷ್ಟು, ಸಿಕ್ಕಷ್ಟು ಪುಸ್ತಕಗಳಿಂದ, ದೊಡ್ಡವರು ಅನಿಸಿಕೊಂಡವರಿಂದ ಸಿಗೂದುಲ್ಲ.

ಮೊನ್ನೆ ನಮ್ಮ ಸಮುದ್ರ ಒಂದು ಸಾಧಾರಣ ಪ್ರಶ್ನೆ ಕೇಳಿದ. ಅದರೊಳಗ ಸಹಜ ಕುತೂಹಲ ಇತ್ತು. ಸ್ವಲ್ಪ ಸಂಶಯ ಇತ್ತು, ಎಂಥದೋ ಅವಿಶ್ವಾಸದ ಛಾಯೆ ಇತ್ತು, ದೊಡ್ಡವರು ಹಿರ್ಯಾರು ಅನಿಸಿಕೊಳ್ಳುವವರು ತಿಳಿದೋ ತಿಳಿಯದೆಯೋ ಹುಟ್ಟುಹಾಕುವ ಗೊಂದಲಗಳ ಬಗ್ಗೆ ಅಪಸ್ವರದ ಧ್ವನಿ ಇತ್ತು. ಪ್ರಶ್ನೆ ಇನ್ನೂ ಏನೇನೋಗಳಿಗೆ ತೋರುಬೆರಳಾಗಿತ್ತು.

‘ಅಪ್ಪಾ, ನಮ್ಮ ಸಾಲ್ಯಾಗ ಇವತ್ತು ಗಾಂಧೀಜಯಂತಿ ಆಚರಿಸಿದರು. ಗಾಂಧೀಜಿ ಫೋಟೋಕ್ಕ ಹೂವಿನ ಹಾರಾ ಹಾಕಿ ಪೂಜಿ ಮಾಡಿದ್ದರು. ನಾವೆಲ್ಲಾರೂ ಕೂಡಿ ನಾಲ್ಕಾರ ಭಜನಿ ಪದ ಹಾಡಿದಿವಿ. ಒಬ್ಬ ಸರ್ ಯಾವುದೋ ಸಿನಿಮಾದೊಳಗಿನ ‘ಸುನೋ ಸುನೋ... ಅಯ್ ಬಾಪೂ...’ ಅಂತ ಹಾಡನೂ ಹಾಡಿದರು. ಆಮ್ಯಾಲ ನಮಗೆಲ್ಲ ಚುರಮುರಿ ಫರಾಳ ಕೊಟ್ಟು ಕಳಿಸಿದರು’ ಅಂದ. ‘ಗಾಂಧೀಜಿ ಜೀವನದ ಬಗ್ಗೆ ಯಾರಾದರೂ ಭಾಷಣ ಮಾಡಬಹುದಿತ್ತು... ಅಥವಾ ಗಾಂಧೀಜಿ ಆತ್ಮಕಥೆಯ ಒಂದು ಭಾಗ ಓದಿ ಹೇಳಿದ್ದರೂ ಛೋಲೋ ಆಗತಿತ್ತು...’ ಅಂದೆ. ‘ಗಾಂಧೀಜಿ ಆತ್ಮಕಥೆ ಬರದಾರ?’ ಕೇಳಿದ. ‘ಹೌದು. “ನನ್ನ ಸತ್ಯಾನ್ವೇಷಣೆ” ಅನ್ನುವ ಅವರ ಆತ್ಮಕಥೆ ಭಾಳ ಛೋಲೋ ಪುಸ್ತಕ. ನೀ ಅದನ್ನ ಓದಬೇಕು. ನನ್ನ ಕಡೆ ಅಯ್ತಿ. ಕೊಡತೇನಿ’ ಅಂದೆ. ಅವನ ಮುಖ ಅರಳಿತು. ಮತ್ತೆ ಕೇಳಿದ, ‘ಅಲ್ಲಪಾ, ಮನ್ನೆ ನೀ ಮಾತಾಡ್ತ, ಅದ್‌ಅ ದಿನಾ ಲಾಲ್‌ಬಹಾದುರ್ ಶಾಸ್ತ್ರೀಜಯಂತಿ ಅಯ್ತಿ ಅಂದಿದ್ದಿ. ಇವತ್ತ ಅವರ ಬಗ್ಗೆ ನಮ್ಮ ಸಾಲ್ಯಾಗ ಯಾರೂ ಏನೂ ಹೇಳಲೇ ಇಲ್ಲ... ಅವರ ಫೋಟೋನೂ ಇಟ್ಟಿರಲಿಲ್ಲ...’ ಅಂದ. ‘ನಿಮ್ಮ ಟೀಚರನ್ನ ನೀ ಕೇಳಬೇಕಿತ್ತು?’ ‘ಛೆ, ಹಂಗೆಲ್ಲಾ ನಾವು ಸರ್‌ಗೊಳ್ನ ಏನೂ ಕೇಳೂ ಹಂಗಿಲ್ಲ. ಅವರ ಹೇಳಿದ್ದನ್ನ ಸುಮ್ಮನ್‌ಅ ಕೇಳೂದಷ್ಟ್‌ಅ ನಮ್ಮ ಕೆಲಸ. ಬ್ಯಾರೆ ಏನಾರ ಕೇಳಿದರ, ನಿನಗ ಯಾಕ ಬೇಕ ಇಲ್ಲದ ಕಿತಾಪತಿ, ಶಾಣ್ಯಾತನ ತೋರಸತೀಯೆನ್? ತಣ್ಣಗ ಕುಂಡ್ರ ಅಂತಾರ...’ ಅಂದ. ಅವ್ನಗ ಏನ ಹೇಳಬೇಕೋ ತಿಳೀಲಿಲ್ಲ. ನಾವು ಮಕ್ಕಳಿಗೆ ಪ್ರಶ್ನೆ ಕೇಳಾಕ ಕಲಿಸಬೇಕು, ಪ್ರಶ್ನೆ ಕೇಳಾಕ ಬಿಡಬೇಕು. ಅವರ ಪ್ರಶ್ನೆಗಳಿಗೆ ಉತ್ತರ ತಿಳಿದಿರಲಿಲ್ಲಾಂದರ ನಾಳೆ ಹೇಳತೇನಿ ಅಥವಾ ತಿಳಕೊಂಡು ಬಂದು ಹೇಳತೇನಿ ಅನ್ನುವ ಪ್ರಾಮಾಣಿಕತೆಯನ್ನ ಶಿಕ್ಷಕರು, ಪಾಲಕರು ತೋರಿಸಬೇಕು.

ಸಮುದ್ರ ಮತ್ತ ಕೇಳಿದ, ‘ಅಲ್ಲಪಾ, ಗಾಂಧೀಜಿ ಹುಟ್ಟಿದ ದಿನಕ್ಕ ಜಯಂತಿ ಅಂತಾರ, ಸತ್ತಿದ್ದ ದಿನಕ್ಕ ಪುಣ್ಯತಿಥಿ ಅಂತಾರ. ಹಂಗಿದ್ರ ಹುಟ್ಟಿದ ದಿನ ಪುಣ್ಯದ ತಿಥಿ ಅಲ್ಲೇನ? ದೊಡ್ಡವರು ಸತ್ತರ ಮಾತ್ರ ಪುಣ್ಯ ಬರತಯ್ತಿ ಅಂತೇನರ ಅರ್ಥ ಅಯ್ತೇನು...?’ ಪ್ರಶ್ನೆ, ಸಂಶಯ ನನ್ನನ್ನೂ ಬಾಧಿಸಿದುವು. ಸ್ಮಾರಕ, ಸ್ಮರಣಾರ್ಥ, ಮುಹೂರ್ತ, ಶುಭಕಾರ್ಯ, ಸಕಾಲ-ಅಕಾಲ, ಶ್ರಾದ್ಧ, ದಿನಾ ಮಾಡೂದು, ಪಿಂಡಾ ಹಾಕೂದು-ಬಿಡೂದು ಏನೇನೋ ಒಂದರೊಳಗೊಂದು ತಳಕು ಹಾಕ್ಕೊಳ್ಳಾಕ ಸುರುವಾದುವು.

ಸಮುದ್ರನ ಸಾಧಾರಣ ಪ್ರಶ್ನೆಗಳು ನನ್ನ ಪಾಲಿಗೆ ಕಠಿಣ ಅನಿಸಿದುವು. ಹೌದು, ಗಾಂಧೀ ಜಯಂತಿ ದಿನ ಶಾಸ್ತ್ರೀಜಯಂತಿ ಯಾಕ ಆಚರಿಸೂದುಲ್ಲ? ಪುಣ್ಯತಿಥಿ ಜಯಂತಿ ಎರಡೂ ಶುಭವಾದುವು ಅಂತಿದ್ದರ ಅವೆರಡೂ ಪುಣ್ಯತಿಥಿ ಯಾಕ ಆಗೂದುಲ್ಲ? ಸ್ಮರಣಾರ್ಥ ಯಾವುದು, ಸ್ಮಾರಕ ಯಾವುದು...?

ನನ್ನ ಅಜ್ಞಾನ ಮಗನ ಸಾಲೀ ಮಾಸ್ತರುಗಳ ಅಜ್ಞಾನಕ್ಕಿಂತ ದೊಡ್ಡದು ಅಂತ ಅಂದುಕೊಂಡ ನಾನು, ‘ಮಗನ್‌ಅ, ಇವೆಲ್ಲಾ ವಿಚಾರ ಮಾಡುವಂಥ ಪ್ರಶ್ನೆಗಳ್‌ಅ ಅದಾವು. ಈಗ ಸದ್ಯಕ್ಕ ಗಾಂಧೀಜಿ ಆತ್ಮಕಥೆ ಓದಾಕ ಸುರು ಮಾಡೂಣು. ಆಮ್ಯಾಲ ಉಳಕೀ ವಿಚಾರ...’ ಅಂದೆ. ‘ಶಾಸ್ತ್ರೀಜಿ ಬಗ್ಗೆನೂ ಹೇಳ್ತೀ? ಅವರೂ ಆತ್ಮಕಥೆ ಬರದಾರೇನು?’ ಅಂತ ಕೇಳಿದ. ಪ್ರಶ್ನೆಯ ದೊಡ್ಡ ಕಲ್ಲುಬಂಡೆಯ ಹಂಗ ಮಗ ಎದುರಿಗೆ ನಿಂತಿದ್ದ. ನಾ ಮಾಸ್ತರಾದೆ, ‘ಸದ್ಯ ಹೇಳಿದಷ್ಟು ಕೇಳು. ಇಲ್ಲದ ಕಿತಾಪತಿ ಮಾಡಬ್ಯಾಡ...’.

## ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ
ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560 001

## ಕನ್ನಡ ಪ್ರಕಟಣೆಗಳು

### ಕಾದಂಬರಿಗಳು

1) **ಕಾಡಿನ ದಾವೇದಾರ** ರೂ. 150/-
(ಬಂಗಾಳಿ ಮೂಲ : ಮಹಾಶ್ವೇತಾ ದೇವಿ, ಅನುವಾದ : ಜಿ. ಕುಮಾರಪ್ಪ)

2) **ಉಮರಾವ್ ಜಾನ್ ಅದಾ** ರೂ. 100/-
(ಉರ್ದು ಮೂಲ : ಮಿರ್ಜಾ ರುಸ್ವಾ, ಅನುವಾದ : ಶಾಂತರಸ)

3) **ಹಾವಿನ ಡೊಂಕು** ರೂ. 50/-
(ಸ್ವೀಡಿಸ್ ಮೂಲ : ಟೋರ್‌ಗ್ನಿಲಿಂಡ್‌ಗ್ರೇಯನ್)

4) **ಕಾರ್ಮೆಲೀನ** ರೂ. 100/-
(ಕೊಂಕಣಿ ಮೂಲ : ದಾಮೋದರ ಮಾವಜೊ, ಅನುವಾದ : ಶಾ. ಮಂ. ಕೃಷ್ಣರಾಯ)

### ಕಥೆಗಳು

1) **ಕೊಂಕಣಿ ಕಥಾ ಸಂಗ್ರಹ** ರೂ. 125/-
(ಸಂಪಾದಕ ಮೂಲ : ಚಂದ್ರಕಾಂತ ಶ್ರೇಣಿ, ಅನುವಾದ : ಶಾ. ಮಂ. ಕೃಷ್ಣರಾಯ)

2) **ಒಂದು ಪೀಳಿಗೆಯ ತೆಲುಗು ಕಥೆಗಳು** ರೂ. 150/-
(ಸಂಪಾದಕ : ಡಿ. ರಾಮಲಿಂಗಂ, ಅನುವಾದ : ಕುಂ. ವೀರಭದ್ರಪ್ಪ)

3) **ಕೃಷನ್ ಚಂದರ್ ಆಯ್ದ ಸಣ್ಣ ಕಥೆಗಳು** ರೂ. 150/-
(ಸಂಪಾದಕ : ಗೋಪಿಚಂದ್ ನಾರಂಗ್, ಅನುವಾದ : ಡಿ. ಎ. ಶಂಕರ್)

4) **ಮಧುರಾಂತಕಂ ರಾಜಾರಾಂ ಕಥೆಗಳು** ರೂ. 150/-
(ತೆಲುಗು ಮೂಲ : ಮಧುರಾಂತಕಂ ರಾಜಾರಾಂ, ಅನುವಾದ : ಲಕ್ಷ್ಮೀಪತಿ ಕೋಲಾರ)

5) **ದಕ್ಷಿಣ ಕಾಮರೂಪದ ಒಂದು ಕಥಾನಕ** ರೂ. 180/-
(ಅಸ್ಸಾಮಿ ಮೂಲ : ಇಂದಿರಾ ಗೋಸ್ವಾಮಿ, ಅನುವಾದ : ಆರ್. ಎಲ್. ಅನಂತರಾಮಯ್ಯ)

### ನಾಟಕಗಳು

1) **ಯುಕ್ಕೃತ್ತು** ರೂ. 50/-
(ಮರಾಠಿ ಮೂಲ : ಶ್ಯಾಮ ಮನೋಹರ, ಅನುವಾದ : ವೀಣಾ ಶಾಂತೇಶ್ವರ)

2) **ರವೀಂದ್ರನಾಥ ಟಾಗೋರ್ : ಎರಡು ನಾಟಕಗಳು** ರೂ. 50/-
(ಬಂಗಾಳಿ ಮೂಲ : ರವೀಂದ್ರನಾಥ್ ಟಾಗೋರ್, ಅನುವಾದ : ಶ್ರೀನಿವಾಸ್ ವಿ. ಸುತ್ರಾವೆ)

### ಕಾವ್ಯ

1) **ಆಡು ಹಾವೇ** ರೂ. 80/-
(ತಮಿಳು ಮೂಲ : ಡಾ. ಕಾರ್ಲೋಸ್, ಅನುವಾದ : ಡಾ. ಬಸವರಾಜ ಕಲ್ಗುಡಿ)

2) **ಶ್ರೀರಾಧಾ** ರೂ. 60/-
(ಒಡಿಯಾ ಮೂಲ : ಶ್ರೀ ರಮಾಕಾಂತ ರಥ, ಅನುವಾದ : ಸಂಧ್ಯಾ ಎಸ್.)

3) **ಶ್ರೀ ಬಸವಣ್ಣನವರ ವಚನ ಸಂಗ್ರಹ** ರೂ. 65/-
(ಸಂಪಾದಕ : ಸ. ಸ. ಮಾಳವಾಡ)

4) **ಎರಡು ದಶಕದ ಕವಿತೆ** ರೂ. 65/-
(ಸಂಪಾದಕ : ಜಿ. ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ)

5) **ತೆಲುಗು ಕಾವ್ಯಮಾಲೆ** ರೂ. 125/-
(ಸಂಪಾದಕ : ದೇವುಲಪಲ್ಲಿ ರಾಮಾನುಜರಾವ್, ಅನುವಾದ : ಗುರುಮೂರ್ತಿ ಪೆಂಡಕೂರು)

ಭಾರತೀಯ ಸಾಹಿತ್ಯ ನಿರ್ಮಾಪಕರು

1) ಗೊರೂರು ರಾಮಸ್ವಾಮಿ ಅಯ್ಯಂಗಾರ್ ರೂ. 25/-
(ಲೇಖಕರು : ಸಿ. ಜಿ. ವೆಂಕಟಯ್ಯ)

2) ಶಂಬಾ ಜೋಶಿ ರೂ. 25/-
(ಲೇಖಕರು : ಮಲ್ಲೇಪುರಂ ಜಿ. ವೆಂಕಟೇಶ್)

3) ಭೀಮಾಬೋಯಿ ರೂ. 25/-
(ಲೇಖಕರು : ಸೀತಾಕಾಂತ ಮಹಾಪಾತ್ರ, ಅನುವಾದ : ಶ್ರೀಧರ್ ಪಿಸ್ಸೆ)

4) ಮೋಹನ್ ರಾಕೇಶ್ ರೂ. 25/-
(ಲೇಖಕರು : ಪ್ರತಿಭಾ ಅಗರ್‌ವಾಲ್, ಅನುವಾದ : ಎಸ್. ಜಿ. ಶ್ರೀಮತಿ)

5) ಚಿಲಕಮೂರ್ತಿ ಲಕ್ಷ್ಮಿನರಸಿಂಹಮ್ ರೂ. 25/-
(ಲೇಖಕರು : ವಿ. ವಿ. ಎಲ್. ನರಸಿಂಹರಾವ್, ಅನುವಾದ : ಕೆ. ಮರುಳಸಿದ್ದಪ್ಪ)

6) ಅನ್ನಮಾಚಾರ್ಯ ರೂ. 25/-
(ಲೇಖಕರು : ಅಡಪ ರಾಮಕೃಷ್ಣರಾವ್, ಅನುವಾದ : ಭಾಗ್ಯಲಕ್ಷ್ಮಿ ಪದಕಿ)

7) ಶಾಂತಿನಾಥ ದೇಸಾಯಿ ರೂ. 25/-
(ಲೇಖಕರು : ಜಿ. ಎಸ್. ಆಮೂರ)

8) ಎಂ. ಎಸ್. ಪುಟ್ಟಣ್ಣ ರೂ. 25/-
(ಲೇಖಕರು : ಎಸ್. ಎಸ್. ಸುಜಾತ)

9) ದೇವುಡು ರೂ. 25/-
(ಲೇಖಕರು : ಡಾ. ಎಸ್. ಸಿ. ಶಿವಕುಮಾರಸ್ವಾಮಿ (ಕುಮಾರಚಲ್ಯ))

10) ಕುಮಾರವ್ಯಾಸ ರೂ. 25/-
(ಲೇಖಕರು : ಕೀರ್ತಿನಾಥ ಕುರ್ತಕೋಟಿ)

11) ಸಂ. ಶಿ. ಭೂಸನೂರಮಠ ರೂ. 25/-
(ಲೇಖಕರು : ಶಾಂತಾ ಇಮ್ರಾಪುರ)

12) ಸೇಡಿಯಾಪು ಕೃಷ್ಣಭಟ್ಟ ರೂ. 25/-
(ಲೇಖಕರು : ಎಂ. ರಾಮಚಂದ್ರ)

13) ಅಭಿನವಗುಪ್ತ ರೂ. 75/-
(ಲೇಖಕರು : ಜಿ. ಟಿ. ದೇಶಪಾಂಡೆ, ಅನುವಾದ : ಎನ್. ಬಾಲಸುಬ್ರಹ್ಮಣ್ಯ)

ಇತರೆ

1) ಮಂದಾರ ರಾಮಾಯಣ ರೂ. 150/-
(ತುಳು ಮೂಲ : ಮಂದಾರ ಕೇಶವಭಟ್ಟ)

2) ಕಲಾಪೂರ್ಣೋದಯ ರೂ. 150/-
(ಅನುವಾದ : ಆರ್. ಶೇಷಶಾಸ್ತ್ರಿ, ಜಿ. ಸದಾನಂದ)

3) ನನ್ನ ಜೀವಾವಧಿಯ ಶಿಕ್ಷೆ ರೂ. 200/-
(ಮರಾಠಿ ಮೂಲ : ವಿನಾಯಕ ದಾಮೋದರ ಸಾವರಕರ, ಅನುವಾದ : ವಿರೂಪಾಕ್ಷ ಕುಲಕರ್ಣಿ)

4) ವನದೇವತೆ ರೂ. 25/-
(ಲೇಖಕರು : 'ಕಲ್ಪಿ' ಗೋಪಾಲಕೃಷ್ಣನ್, ಅನುವಾದ : ಎ. ಚಂದ್ರಮ್ಮ)


ಪ್ರತಿಗಳು ಹಾಗೂ ವಿವರಕ್ಕಾಗಿ ಸಂಪರ್ಕಿಸಿ :

**ಸಾಹಿತ್ಯ ಅಕಾದೆಮಿ**

ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ
ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ : 224 5152

## ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. **ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು.** ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ೧೪ ರ ದಿನಾಂಕ ಹೊತ್ತು ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

SANKALANA: RNI No. KARKAN 14160/10/1/2002-TC

ಸಂಕಲನ : ೧೪ ನವಂಬರ್ ೨೦೦೪ ಸಂಪುಟ ೩, ಸಂಚಿಕೆ ೬
ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

•

ಕೆ. ಆನಂದ ಗಾಣಿಗ, ಹಾಲಾಡಿ ಮಾರುತಿರಾವ್

ಮ. ಸು. ಕೃಷ್ಣಮೂರ್ತಿ

ವಸಂತಕುಮಾರ ಪೆರ್ಲ, ಷ. ಶೆಟ್ಟರ್

ಮಾಧವ ಕುಲಕರ್ಣಿ

ಬಿ. ಟಿ. ದೇಸಾಯಿ, ಬಸವರಾಜ ಪಿ. ಡೋಣೂರ

ಎಸ್. ಎಸ್. ಹಿರೇಮಠ

ಎಚ್. ಜಿ. ಸೋಮಶೇಖರ ರಾವ್, ಶಿವಾನಂದ ನಾಗನೂರ

ಎಚ್. ದಂಡಪ್ಪ

•

ದೇಶಪಾಂಡೆ ಸುಬ್ಬರಾಯ

ಚಂದ್ರಶೇಖರ ವಸ್ತ್ರದ, ಶ್ರೀಪತಿ ಮಂಜನಬೈಲು,

ಅಂಕದ ಮುರಿಗೆಪ್ಪ, ಜಿ. ಟಿ. ಶ್ರೀಧರ ಶರ್ಮ, ಎಂ. ಡಿ. ಗೋಗೇರಿ,

ಬಸವರಾಜ ವಕ್ಕುಂದ, ದುಷ್ಯಂತ ನಾಡಗೌಡ

•

ವ್ಹಿ. ಎ. ಮಾಚಕನೂರ
ಶರಣಗೌಡ ಎರಡೆತ್ತಿನ
ಶಾಂತಾರಾಮ್ ಹೆಚ್.
ರಾಮಚಂದ್ರ ದೇವ
ಈರಪ್ಪ ಎಂ. ಕಂಬಳಿ
ಜಯದೇವಪ್ಪ ಜೈನಕೇರಿ
ಯು. ಎನ್. ಸಂಗನಾಳಮಠ

ಹಾಲಾಡಿ ಮಾರುತಿರಾವ್
ಬಿ. ಟಿ. ದೇಸಾಯಿ
ಗೀತಾ ನಾಗಭೂಷಣ
ಹಣಮಂತ ತಾಸಗಾಂವಕರ
ಕೃಷ್ಣ ನಾರಾಯಣ ಎಂ.
ಎಸ್. ಎಸ್. ಹಿರೇಮಠ
ಅ. ರಾ. ಯಾರ್ದಿ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪